SAPTHAGIRI(KANNADA)
ILLUSTRATED MONTHLY
Volume:01,Issue:04,Pages:56
November-2021, Price Rs. 5/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ
ನವೆಂಬರ್ 2021
ಬೆಲೆ ರೂ. 5/-



ತಿರುಮಲೆ ಸ್ವಾಮಿಯವರ ಪುಷ್ಪಯಾಗ ಮಹೋತ್ಸವ
(11-11-2021)



# ತಿರುಚಾನೂರು
# ಶ್ರೀ ಪದ್ಮಾವತಿ ಅಮ್ಮನವರ
# ಬ್ರಹ್ಮೋತ್ಸವಗಳು

**2021 ನವೆಂಬರ್**
**29 ರಿಂದ ಡಿಸೆಂಬರ್ 08 ರ ವರೆಗೆ**

**29-11-2021 ಸೋಮವಾರ**
ಹಗಲು : ಲಕ್ಷಕುಂಕುಮಾರ್ಚನೆ
ರಾತ್ರಿ : ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ

**30-11-2021 ಮಂಗಳವಾರ**
ಹಗಲು : ತಿರುಚ್ಚಿ ಉತ್ಸವ, ಧ್ವಜಾರೋಹಣ
ರಾತ್ರಿ : ಚಿಕ್ಕಶೇಷವಾಹನ

**01-12-2021 ಬುಧವಾರ**
ಹಗಲು : ದೊಡ್ಡಶೇಷವಾಹನ
ರಾತ್ರಿ : ಹಂಸವಾಹನ

**02-12-2021 ಗುರುವಾರ**
ಹಗಲು : ಮುತ್ತಿನಚಪ್ಪರ ವಾಹನ
ರಾತ್ರಿ : ಸಿಂಹವಾಹನ

**03-12-2021 ಶುಕ್ರವಾರ**
ಹಗಲು : ಕಲ್ಪವೃಕ್ಷವಾಹನ
ರಾತ್ರಿ : ಹನುಮದ್ವಾಹನ

**04-12-2021 ಶನಿವಾರ**
ಹಗಲು : ಪಲ್ಲಕಿ ಉತ್ಸವ, ಸಾ, ವಸಂತೋತ್ಸವ
ರಾತ್ರಿ : ಗಜವಾಹನ

**05-12-2021 ಭಾನುವಾರ**
ಹಗಲು: ಸರ್ವಭೂಪಾಲವಾಹನ
ರಾತ್ರಿ : ಗರುಡವಾಹನ

**06-12-2021 ಸೋಮವಾರ**
ಹಗಲು : ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ

**07-12-2021 ಮಂಗಳವಾರ**
ಹಗಲು : ರಥೋತ್ಸವ
ರಾತ್ರಿ : ಅಶ್ವವಾಹನ

**08-12-2021 ಬುಧವಾರ**
ಹಗಲು : ಪಲಕ್ಕಿ ತಿರುಚ್ಚಿ ಉತ್ಸವ, ತೀರ್ಥವಾರಿ ಅವಬೃಧೋತ್ಸವ, ಚಕ್ರಸ್ನಾನ, ಪಂಚಮೀ ತೀರ್ಥ
ರಾತ್ರಿ : ತಿರುಚ್ಚಿ ಉತ್ಸವ, ಧ್ವಜಾವರೋಹಣ

# ಭಗವದ್ಗೀತೆ



ನ ಕಾಂಕ್ಷೇ ವಿಜಯಂ ಕೃಷ್ಣ
ನ ಚ ರಾಜ್ಯಂ ಸುಖಾನಿ ಚ।
ಕಿಂ ನೋ ರಾಜ್ಯೇನ ಗೋವಿಂದ
ಕಿಂ ಭೋಗೈರ್ಜೀವಿತೇನ ವಾ ॥

(ಶ್ರೀ ಮದ್ಭಗವದ್ಗೀತೆ - 1, ಶ್ಲೋಕ -31)

ಕೃಷ್ಣ , ನನಗೆ ಗೆಲ್ಲುವ ಬಯಕೆ ಇಲ್ಲ. ನನಗೆ ರಾಜ್ಯವೂ ಬೇಡ, ಸುಖಗಳೂ ಬೇಡ, ಗೋವಿಂದ, ಇಂಥ ರಾಜ್ಯದಿಂದಾಗಲಿ, ಭೋಗಗಳಿಂದಾಗಲಿ, ಬದುಕಿನಿಂದಲೇ ಆಗಲಿ, ಏನು ಪ್ರಯೋಜನ?



**ಬಾರೋ ಮನೆಗೆ ಬಾರೋ ವೆಂಕಟರಮಣಾ**

ಕಂಸಾಸುರಮರ್ದನನೆ ಬಾರೋ
ಕೌಶಿಕಯಜ್ಞಪ ಬಾರೋ
ಹಂಸಡಿಭಕರಂತಕ ಬಾರೋ
ಹಂಸವಾಹನನ ಪಿತನೆ ಬಾರೋ


ಸಾಸಿರಮುಖನ ಪೆತ್ತವನೆ ಬಾರೋ
ಸಾಸಿರಗಣ್ಣನ ಅನುಜ ಬಾರೋ
ಸಾಸಿರವದನಶಯನ ಬಾರೋ
ಭೂಸುರರಿಗೆ ಪ್ರಿಯನೆ ಬಾರೋ

ವಾರಿಧಿಯೊಳು ಪೊಕ್ಕವನೆ ಬಾರೋ
ವಾರಿಧಿಯ ಮಾನಭಂಗನೆ ಬಾರೋ
ವಾರಿಧಿಸುತೆಯ ಪಡೆದ ಕರುಣಾ
ವಾರಿಧಿ ಸಿರಿವಿಜಯವಿಠಲ ಬಾರೋ

- ಶ್ರೀ ವಿಜಯದಾಸರು

(ಏಳನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ವಿವಿತ್ಸಾ ವೇತಾಳೀವಿಗಮಪರಿಶುದ್ಧೇಪಿ ಹೃದಯೇ ಪಟು ಪ್ರತ್ಯಾಹಾರ ಪ್ರಭೃತಿ ಪುಟಪಾಕ ಪ್ರಚಕಿತಾಃ**

**ನಮಂತಸ್ತ್ವಾಂ ನಾರಾಯಣಶಿಖರಿಕೂಟಸ್ಥಕರುಣೇ ನಿರುದ್ಧತ್ವದ್ದ್ರೋಹಾಃ ನೃಪತಿಸುತನೀತಿಂ ನ ಜಹತಿ ॥ ೬೨ ॥**

ಹಿಂದಿನ ಪದ್ಯದಲ್ಲಿ ದಯಾಪ್ರವಾಹದ ವೇಗವನ್ನು ವರ್ಣಿಸಿ ತನ್ಮೂಲಕ ಪ್ರಪತ್ತಿ ಮಾಡುವವನ ಪಾಪಗಳನ್ನು ಹೋಗಲಾಡಿಸುವ ಸಾಮಾರ್ಥ್ಯವುಳ್ಳದ್ದು ಆ ಪ್ರವಾಹವೆಂದು ಸಾಮಾನ್ಯವಾಗಿ ನಿರೂಪಿಸಿದರು. ಈ ಪದ್ಯದಲ್ಲಿ ಪ್ರಪತ್ತಿ ಮಾಡಿದ ಮೇಲೆ ಪ್ರಪನ್ನನು ಬುದ್ಧಿ ಪೂರ್ವಕವಾಗಿ ಮಾಡಿದ ಪಾಪಗಳನ್ನು ಹೋಗಲಾಡಿಸುವ ರೀತಿಯು ವರ್ಣಿಸಲ್ಪಡುವುದು.

ಭಕ್ತಿ ಯೋಗವನ್ನು ಆಚರಿಸುವವರಿಗಿಂತಲೂ ಪ್ರಪತ್ತಿಯನ್ನು ಅನುಷ್ಠಿಸುವವರು ಒಂದು ಮೆಟ್ಟಲು ಮೇಲೆಂಬುದು ಈ ದಶಕದಲ್ಲಿ ವ್ಯಕ್ತವಾಗುವುದು. ಹೆಣ್ಣು ಹೊನ್ನು, ಮಣ್ಣುಗಳೆಂಬ ಭೋಗಸಾಧನಗಳನ್ನು ಪಡೆಯಬೇಕೆಂಬ ಆಶೆಯು ಒಂದು ಸ್ತ್ರೀ ಭೂತಕ್ಕೆ ಸಮಾನವಾದುದು. ಸ್ತ್ರೀಭೂತಕ್ಕೆ - ಅದು ಕೇಳಿದುದನ್ನೆಲ್ಲ ಕೊಡುತ್ತಲೇ ಇರಬೇಕು. ಅದು ಕೇಳಿದುದರಲ್ಲಿ ಒಂದನ್ನು ಕೊಡಲು ಮರೆತರೂ ಮನುಷ್ಯನನ್ನು ನುಂಗಿಬಿಡುವುದು. ಇದು ಭೂತದ ಸ್ವಭಾವ. ಮೇಲೆ ತಿಳಿಸಿದ ಆಶೆಯೂ ಕೂಡ ಇಂತಹುದೇ. ಆಶೆಯನ್ನು ಪೂರ್ತಿಮಾಡದಿದ್ದರೆ ಮನುಷ್ಯನನ್ನು ಎತ್ತಿ ಹಾಕುವುದು. ಆದ್ದರಿಂದ ಅಂತಹ ಆಶೆಯು ಮೋಕ್ಷವನ್ನು ಪಡೆಯುವುದರಲ್ಲಿ ಪ್ರಧಾನವಾದ ವಿರೋಧಿ. ಇದನ್ನು ಮೊದಲ ನಾಶಪಡಿಸಿದರೆ ಮಾತ್ರ ಮುಮುಕ್ಷುವಾಗಬಹುದು. ಅಂದರೆ, ಮೋಕ್ಷದಲ್ಲಿ ಆಸಕ್ತಿಯುಂಟಾಗುವುದು. ಹೀಗೆ, ಆಶೆಯನ್ನು ತೊಲಗಿಸಿ, ಮನಸ್ಸನ್ನು ಶುದ್ಧಪಡಿಸಿಕೊಂಡು ಮುಮುಕ್ಷುನಾಗಿ ಉತ್ತೀರ್ಣರಾದವರಲ್ಲಿಯೂ ಕೆಲವು ಹಿರಿಯರು ಮೋಕ್ಷಕ್ಕೆ ಉಪಾಯಗಳೆಂದು ಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿರುವ ಭಕ್ತಿ ಪ್ರಪತ್ತಿ ಎಂಬ ಎರಡು ಮಾರ್ಗದಲ್ಲಿ ಭಕ್ತಿ ಯೋಗವನ್ನು ನೆನೆದು ನಡುಗುವರು ಏಕೆಂದರೆ, ಆ ಭಕ್ತಿ ಯೋಗಕ್ಕೆ ಅಂಗಗಳಾದ ಪ್ರತ್ಯಾಹಾರವೇ (ಇಂದ್ರಿಯಗಳನ್ನು ಅಡಗಿಸಿ ತಡೆಯುವಿಕೆ) ಮೊದಲಾದವುಗಳನ್ನು ಸ್ಮರಿಸಿಕೊಂಡರೆ ಅವು ಪುಟಪಾಕದಂತೆ ತೋರುತ್ತವೆ. ಪುಟಪಾಕದಲ್ಲಿ ಅಗ್ನಿಜ್ವಾಲೆಯು ಹೊರಗೆ ಕಾಣಬರುವುದಿಲ್ಲ. ಒಳಗೊಳಗೇ ವಿಶೇಷವಾದ ತಾಪವನ್ನುಂಟು ಮಾಡುತ್ತದೆ. ಈ ಪ್ರತ್ಯಾಹಾರಾದಿಗಳೂ ಅವುಗಳಂತೆಯೇ ಆದ್ದರಿಂದ ಅವುಗಳನ್ನು ಅನುಷ್ಠಿಸಿ ಉತ್ತೀರ್ಣರಾಗುವುದೆಂಬ ವಿಷಯವು ನಮ್ಮಂತಹ ಅಶಕ್ತರಿಂದ ಸರ್ವಥಾ ಸಾಧ್ಯವಿಲ್ಲದ್ದೆಂದು ಭಯಪಡುವರು. ಈ ರೀತಿಯಾದ ಆಶಕ್ತಿಯಿಂದ ನಡುಗುವುರಲ್ಲದೆ ಅದು ನಮ್ಮ ಸ್ವರೂಪಕ್ಕೆ ವಿರೋಧಿ ಎಂದಾಗಲಿ ಕಡಿಮೆಯಾದ ಉಪಾಯವೆಂಬ ಅಭಿಪ್ರಾಯದಿಂದಾಗಲಿ ಅಲ್ಲ. ಹೀಗೆ ಹೆದರಿದವರು ಶ್ರೀನಿವಾಸನ ದಯೆಯನ್ನು ಶರಣುಹೊಂದುವರು. ಶರಣಾಗತಿ ಎಂಬ ಮೋಕ್ಷೋಪಾಯವನ್ನು ಅನುಷ್ಠಿಸಿದ ಇವರು ರಾಜಕುಮಾರರಂತೆ ಇರುವರು. ಹೇಗೆಂದರೆ... ರಾಜಕುಮಾರರಾದರೂ ತಪ್ಪು ಮಾಡಿದರೆ ದಂಡನೆಯುಂಟು. ಆದರೆ, ಇತರರಿಗೆ ಇರುವಂತೆ ಇವರಿಗೆ ದಂಡನೆಯು ತೀವ್ರವಾಗಿರಲಾರದು. ದಂಡನೆಯುತೀವ್ರವಾಗಿಲ್ಲದಿದ್ದರೂ ರಾಜಪುತ್ರರು ಚಕ್ರವರ್ತಿಯ ಕೋಪಕ್ಕೆ ಪಾತ್ರರಾಗದಂತೆ ಅವನ ಆಜ್ಞೆಯನ್ನು ಸರಿಯಾಗಿ ನಡೆಸಿಕೊಂಡು ತಮಗೆ ವಿಧಿಸಲ್ಪಟ್ಟ ಸ್ವಲ್ಪವಾದ ದಂಡನೆಗೂ ಅವಕಾಶಕೊಡದಂತೆ ತಮ್ಮನ್ನು ಕಾಪಾಡಿಕೊಂಡು ಹೋಗುವ ಯೌವರಾಜ್ಯಪಟ್ಟಾಭಿಷೇಕಕ್ಕೆ ಅನುಕೂಲವಾಗಿ ನಡೆದುಕೊಳ್ಳುವರು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಪ್ಲವನಾಮ ಸಂವತ್ಸರ
ಆಶ್ವಯುಜ - ಕಾರ್ತಿಕ ಮಾಸ ಸಂಚಿಕೆ

ಸಂಪುಟ - 01 ನವೆಂಬರ್ 2021 ಸಂಚಿಕೆ -04

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ದೀಪಗಳ ಹಬ್ಬ ದೀಪಾವಳಿ | -ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ | 7 |
| ಕುಬೇರ | -ಪ್ರತ್ಯಗ್ರ | 9 |
| ಯೋಗೀಶ್ವರ ಯಾಜ್ಞವಲ್ಕ್ಯಮಹರ್ಷಿ | - ಡಾ॥ ರಾಮಚಂದ್ರ ದಾಸ್ ಸಿ. ಜೆ. | 10 |
| ಶ್ರೀ ಪ್ರಸನ್ನವೆಂಕಟದಾಸಾರ್ಯ ವಿರಚಿತ | -ಡಾ॥ ಸುಭಾಸ್ ಕಾಖಂಡಕಿ | 13 |
| ಧಾತ್ರಿಯೊಂದಿಗೆ ಧಾರ್ಮಿಕ ಥಳಕು | -ಹನುಮಂತ.ಮ. ದೇಶಕುಲಕರ್ಣಿ | 15 |
| ಶ್ರೀ ವೇದವೇದ್ಯ ತೀರ್ಥರು | - ಶ್ರೀಧರ ರಾಯಸಂ | 17 |
| ಉತ್ಥಾನ ದ್ವಾದಶಿ | - ಡಾ॥ ಲೀಲಾಬಸವರಾಜ್ | 19 |
| ಆಳ್ವಾರರ ಭಗವದನುಭವ | - ಡಾ॥ ಸಿ.ಎಸ್.ಊರ್ಮಿಳಾ | 20 |
| ಆನೆಕೆರೆ ಹಾಗೂ ಚೆನ್ನರಾಯಪಟ್ಟಣದ ಕೇಶವ ದೇವಾಲಯಗಳು | - ಕೆಂಗೇರಿ ಚಕ್ರಪಾಣಿ | 22 |
| ಶ್ರೀ ವೆಂಕಟೇಶ್ವರ ಸ್ವಾಮಿ ಆಲಯ | -ದಿ॥ ಬಿ.ಎನ್.ಶ್ರೀನಿವಾಸನ್ | 24 |
| ತಿರುಮಲೆ - ತಿರುಪತಿಯ ವೆಂಕಟೇಶ ಮತ್ತು ವಿಜಯನಗರದ ಅರಸರು | -ಡಾ॥ ಎಸ್. ನಂಜುಂಡಸ್ವಾಮಿ | 31 |
| ವೇದದಲ್ಲಿ ಗಣಿತ | - ರಮೇಶ್‌ಕುಮಾರ್ ಬನ್ನೂರು | 34 |
| ಆಯುರ್ವೇದ ಮತ್ತು ನಾವು | - ಡಾ॥ ಪ್ರದೀಪ್‌ಕುಮಾರ್ ಹೆಬ್ರಿ | 36 |
| ತಿರುಮಲೆ - ಕಾಲಮಾನಾಚರಣೆಗಳು | - ಶ್ರೀಮತಿ | 37 |
| ಹರಿದಾಸಸಾಹಿತ್ಯಪ್ರಪಂಚದರತ್ನವಿಜಯದಾಸರು | - ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ | 39 |
| ಶ್ರೀಮದ್ಭಗವದ್ಗೀತೆ | - ಶ್ರೀಮತಿ ಬಿ. ಪದ್ಮಜ | 41 |
| ಸನಾತನ ಧರ್ಮದಲ್ಲಿ ಜ್ಯೋತಿಷ್ಯ ಶಾಸ್ತ್ರ | - ಆರ್. ಶ್ರೀನಿಧಿ | 43 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ. ಆರ್. ನರಸಿಂಹನ್ | 45 |
| ಪರಮ ಪವಿತ್ರವಾದ ಮಂಗಳ ದ್ರವ್ಯ ಕೊಬ್ಬರಿ-ಔಷಧ ಪ್ರಾಶಸ್ತ್ಯ | - ಡಿ.ಎಸ್.ಬದ್ರಿನಾಥ್ | 47 |
| ಪುಸ್ತಕಾವಲೋಕನ | - | 49 |
| ಸಂಸ್ಕೃತಕಲಿಯೋಣ!! | - ಮಹಾ ಮಹೋಪಾಧ್ಯಾಯ ಎಸ್.ಲಕ್ಷ್ಮಣಯ್ಯ | 42 |
| ಶ್ರೀಗೋಪಾಲದಾಸರ ಭಕ್ತಿಯ ಸ್ವರೂಪ | - ಡಾ॥ ಮಧುಮತಿ ದೇಶಪಾಂಡೆ | 51 |
| ತಿರುಮಲೆ - ಕಾಲಮಾನಾಚರಣೆಗಳು | - ಶ್ರೀಮತಿ | 49 |
| ನೀತಿ ಕಥೆ - ನವಿಲಿನ ಭಕ್ತಿ | -ಶ್ರೀಮತಿ ಸುಧಾಮಧುಸೂದನ್ | 51 |
| ಚಿತ್ರ ಕಥೆ - ತಿರುಪ್ಪಾಣಿ ಆಳ್ವಾರ್ | -ಕೆ. ತುಳಸೀ ಪ್ರಸಾದ್ | 52 |
| ಕ್ವಿಜ್ | | 54 |


ಮುಖಚಿತ್ರ - ಸ್ವಾಮಿಯವರ ಪುಷ್ಪಯಾಗ ಮಹೋತ್ಸವ

ಹಿಂಬದಿಚಿತ್ರ - ತಿರುಮಲೆ ಸ್ವಾಮಿಯವರ ಆಲಯದಲ್ಲಿ "ದೀಪಾವಳಿ"


### ಗೌರವ ಸಂಪಾದಕರು

ಡಾ ॥ ಕೆ. ಎಸ್. ಜವಹರ್ ರೆಡ್ಡಿ , ಐ.ಎ.ಎಸ್

ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

### ಪ್ರಧಾನ-ಸಂಪಾದಕರು

ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

### ಸಂಪಾದಕರು

ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

### ಮುದ್ರಣ

ಶ್ರೀ .ಪಿ. ರಾಮರಾಜು , ಎಮ್.ಎ.

ವಿಶೇಷಾಧಿಕಾರಿ,

(ಪ್ರಕಾಶನ ಮತ್ತು ಮುದ್ರಣಾಲಯ),

ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

### ಡಿ.ಟಿ.ಪಿ.

ಪ್ರಧಾನ ಸಂಪಾದಕರ -ಕಾರ್ಯಾಲಯ

ತಿ.ತಿ.ದೇ.ತಿರುಪತಿ.

### ಛಾಯಗ್ರಹಣ:

ಶ್ರೀ ಪಿ.ಎನ್.ಶೇಖರ್,

ಛಾಯಗ್ರಹಣ,ತಿ.ತಿ.ದೇ.

ಶ್ರೀ ಬಿ.ವೆಂಕಟರಮಣ,

ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

ಇತರ ವಿವರಗಳಿಗೆ

ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org


ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು www.tirumala.org ಮೂಲಕ ವೀಕ್ಷಿಸಬಹುದು.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ದೀಪಾವಳಿಯ ಪರ್ವಕಾಲ

ಭಾರತೀಯ ಸಂಸ್ಕೃತಿಯಲ್ಲಿ ದೇಶದಾದ್ಯಂತ ವಯಸ್ಸಿನ ಅಂತರವಿಲ್ಲದೇ ಆಚರಿಸುವಂತಹಾ ಹಬ್ಬ ಈ ದೀಪಾವಳಿ ಹೆಸರೇ ತಿಳಿಸುವಂತೆ ದೀಪಗಳಿಂದ ಎಲ್ಲರ ಬದುಕಿನಲ್ಲಿ ಬೆಳಕು ಮೂಡಿಸುವ ಹಬ್ಬ ಈ ದೀಪಾವಳಿ.

ಸಾಮಾನ್ಯವಾಗಿ ಈ ದೀಪಾವಳಿಯನ್ನು ಆಶ್ವೀಜ ತ್ರಯೋದಶಿಯಿಂದ ಕಾರ್ತಿಕ ಪಾಡ್ಯಮಿಯವರೆಗೂ ಆಚರಿಸುತ್ತೇವೆ. ಈ ಹಬ್ಬದಲ್ಲಿ ಹಿಂದೂ ಸಂಪ್ರದಾಯವನ್ನು ಅನುಸರಿಸಿ ಒಂದು ತಿಂಗಳ ಕಾಲ ಎಲ್ಲರ ಮನೆಯ ಮುಂದೆಯೂ ಸಂಜೆಯ ವೇಳೆಯಲ್ಲಿ ದೀಪಗಳನ್ನು ಹಚ್ಚುತ್ತಾರೆ.

ಪ್ರತ್ಯೇಕವಾಗಿ ಆಶ್ವೀಜ ತ್ರಯೋದಶಿಯಂದು ಹಚ್ಚುವ ದೀಪವನ್ನು ಯಮದೀಪ, ಆಕಾಶದೀಪ ಎಂದು ಕರೆಯುತ್ತಾರೆ. ಆ ದಿನ ಮನೆಯ ಮುಂದೆ ದೀಪವನ್ನು ಹಚ್ಚುವುದರಿಂದ ಪಿತೃದೇವತೆಗಳಿಗೆ ಮುಕ್ತಿಮಾರ್ಗ ಸುಲಭವಾಗುತ್ತದೆಂದು ಪುರಾಣಗಳು ತಿಳಿಸುತ್ತಿವೆ. ಆ ದಿನವನ್ನು ಜಲಪೂರ್ಣತ್ರಯೋದಶಿ ಎಂದೂ ಕರೆಯುತ್ತೇವೆ. ಆ ದಿನ ಮನೆಯನ್ನು ಸ್ವಚ್ಛಗೊಳಿಸಿ, ಹೊಸ ನೀರನ್ನು ತುಂಬಿಸಿ ಮನೆಯಲ್ಲಿ, ಹೊರಗಡೆ ದೀಪವನ್ನು ಬೆಳಗಿಸುವ ಸಂಪ್ರದಾಯವಿದೆ. ಈ ದಿನವನ್ನು ನೀರು ತುಂಬುವ ಹಬ್ಬ ಎಂತಲೂ ಕರೆಯುತ್ತೇವೆ.

ಇನ್ನು ಮರುದಿವಸ ನರಕಚತುರ್ದಶಿಯಂದು ಶ್ರೀಕೃಷ್ಣ, ಸತ್ಯಭಾಮೆ ನರಕಾಸುರನನ್ನು ಕೊಂದು , ಹದಿನಾರು ಸಾವಿರ ನಾರಿಯರನ್ನು ಸೆರೆಯಿಂದ ಬಿಡಿಸಿದ ದಿನ. ಆ ಸಂಭ್ರಮವನ್ನು ಎಲ್ಲೆಡೆ ಸಾರುವುದಕ್ಕಾಗಿ ನಾವು ದೀಪಗಳನ್ನು ಬೆಳಗಿಸಿ ಶ್ರೀಕೃಷ್ಣನನ್ನು ಮನೆಗೆ ಆಹ್ವಾನಿಸಿ, ನಮ್ಮ ಮನಸ್ಸಿನಲ್ಲಿರುವ ಅಂಧಕಾರವನ್ನು ಹೋಗಲಾಡಿಸಿ ಬೆಳಕನ್ನು ಹರಡು ಎಂದು ಕೇಳಿಕೊಳ್ಳುತ್ತೇವೆ.

ಇನ್ನು ದೀಪಾವಳಿಯ ಅಮಾವಾಸ್ಯೆ ಲಕ್ಷ್ಮೀದೇವಿ ಪೂಜೆಗೆ ಹೆಸರುವಾಸಿಯಾಗಿದೆ. ಎಲ್ಲರೂ ತಮ್ಮ ಮನೆಗಳಲ್ಲಿ ವ್ಯಾಪಾರಸ್ಥರು ತಮ್ಮ ವ್ಯಾಪಾರದ ಸ್ಥಳಗಳಲ್ಲಿ ಲಕ್ಷ್ಮೀದೇವಿಯನ್ನು ಪೂಜಿಸಿ ದೀಪಗಳನ್ನು ಬೆಳಗಿ ತಮ್ಮ ನಿವಾಸಕ್ಕೆ ಲಕ್ಷ್ಮೀದೇವಿಯನ್ನು ಆಹ್ವಾನಿಸಿ ಸದಾ ನೆಲೆಯಾಗಿರುವಂತೆ ಪ್ರಾರ್ಥಿಸುತ್ತೇವೆ.

ಹಾಗೇಯೇ ಬಲಿಪಾಡ್ಯಮಿ ಎಲ್ಲರಿಗೂ ತಿಳಿದಿರುವಂತೆ ಭಗವಂತನು ಪುಟ್ಟ ವಟುವಾಗಿ ಬಂದು ಭೂದಾನವನ್ನು ಕೇಳಿ ಹೆಜ್ಜೆಯಿಡಲು ಸ್ಥಳಾಭಾವವಾದಾಗ ಬಲಿ ತನ್ನ ತಲೆಯ ಮೇಲೆ ಭಗವಂತನ ಪಾದಗಳಿಗೆ ಜಾಗ ತೋರಿಸಿದ ವಾಮನನು ಬಲಿಯನ್ನು ಪಾತಾಳಕ್ಕೆ ತುಳಿದು ಅವನನ್ನು ಪಾತಾಳ ಲೋಕಕ್ಕೆ ರಾಜನನ್ನಾಗಿಸಿದ. ಎಲ್ಲಕ್ಕಿಂತಲೂ ಮುಖ್ಯವಾಗಿ ದೀಪಗಳನ್ನು ದಾನಮಾಡುವುದು ವಿಶೇಷ ಸಂಪ್ರದಾಯವೆಂದು ಹೇಳಬೇಕು. ಈ ರೀತಿ ದೀಪದಾನ ಮಾಡುವುದರಿಂದ ನಮ್ಮ ಪಿತೃದೇವತೆಗಳು ಸಂತೃಪ್ತಿ ಹೊಂದುತ್ತಾರೆ ಹಾಗೆಯೇ ನಮಗೂ ಮೋಕ್ಷಮಾರ್ಗ ಸುಗಮವಾಗುತ್ತದೆ ಎಂದು ಹಿರಿಯರು ಹೇಳುತ್ತಾರೆ. ಸಾಮಾನ್ಯವಾಗಿ ಕಾರ್ತೀಕಮಾಸದಿಂದ ಪ್ರಾರಂಭಿಸಿ ಕಾರ್ತೀಕ ಹುಣ್ಣಿಮೆಯವರೆಗೂ ದೀಪದಾನವನ್ನು ಮಾಡಬಹುದು ಎಂದು ಪುರಾಣಗಳು ತಿಳಿಸುತ್ತಿವೆ. ದೀಪಾವಳಿಯಲ್ಲಿ ದೀಪದಾನ ಅತ್ಯಂತ ಪುಣ್ಯವಾದ ಕೆಲಸವಾಗಿದೆ.

ಹಾಗೇಯೇ ದೀಪಕ್ಕೆ ಉಪಯೋಗಿಸುವ ಎಣ್ಣೆ ಶುದ್ಧವಾಗಿದ್ದು, ಎಳ್ಳೆಣ್ಣೆ , ಹಸುವಿನ ತುಪ್ಪ ಇವುಗಳನ್ನು ಬಳಸಿದರೆ ಅತ್ಯುತ್ತಮ ಎಂದು ಹೇಳುತ್ತಾರೆ. ದೀಪಗಳನ್ನು ಊರ್ಧ್ವಮುಖದಲ್ಲಿ ಬೆಳಗಿಸಿದರೆ ಅತ್ಯುತ್ತಮ ಅಥವಾ ದೀಪದ ಬತ್ತಿ ಉತ್ತರ ಇಲ್ಲವೆ ಪೂರ್ವ ದಿಕ್ಕಿಗೆ ಮುಖಮಾಡಿರಬೇಕು.

ಇಂತಹ ದಿನಗಳಲ್ಲಿ ವಿಧವಿಧವಾದ ದೀಪಗಳನ್ನು ಹಚ್ಚಿ ನಮ್ಮ ಮನಸ್ಸಿನಲ್ಲಿರುವ ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸಿ ಸುಜ್ಞಾನವೆಂಬ ಬೆಳಕನ್ನು ಹರಡು ಎಂದು ದೇವದೇವನಲ್ಲಿ ಪ್ರಾರ್ಥಿಸುತ್ತಾ ಕಾರ್ತೀಕ ಮಾಸದ ನಿಯಾಮಕನಾದ ರಾಧಾದಾಮೋದರನನ್ನು ಭಕ್ತಿಯಿಂದ ನಮಿಸೋಣ.

ಇನ್ನು ತಿರುಮಲೆಯಲ್ಲಿ ಅಂದು ದೀಪಾವಳಿ ಆಸ್ಥಾನವನ್ನು ನಡೆಸುತ್ತಾ, ಅಂದಿನ ವಿಶೇಷತೆಗಳನ್ನು ದೇವರ ಮುಂದೆ ಅರುಹಿ ಎಲ್ಲವನ್ನೂ ಆ ದೇವದೇವನಿಗೆ ಸಮರ್ಪಿಸುತ್ತಾರೆ.

ಈ ಮಹಾಪರ್ವದಿನದಂದು ಎಲ್ಲರೂ ದೀಪಗಳ ಸಾಲನ್ನು ಬೆಳಗಿಸಿ ಪ್ರಪಂಚವನ್ನೇ ನಡುಗಿಸುತ್ತಿರುವ ಅನೇಕ ಭಯಂಕರ ರೋಗರುಜಿನಗಳಿಂದ ಪ್ರಜೆಗಳನ್ನು ರಕ್ಷಿಸು ಎಂದು ಅಖಿಲಾಂಡ ಕೋಟಿ ಬ್ರಹ್ಮಾಂಡನಾಯಕನಲ್ಲಿ ಕೇಳಿಕೊಳ್ಳೋಣ.


ಸಮಸ್ತ ಓದುಗ ಬಂಧುಗಳಿಗೆ ದೀಪಾವಳಿಯ ಶುಭಾಕಾಂಕ್ಷೆಗಳು. ಆ ಸಪ್ತಗಿರೀಶನ ಕೃಪಾಶೀರ್ವಾದ ಎಲ್ಲರಿಗೂ ದೊರಕಲಿ.

**ಸರ್ವೇಜನಾಃ ಸುಖಿನೋ ಭವಂತು !!**

**ಗೋವಿಂದಾ! ಗೋವಿಂದಾ!! ಗೋವಿಂದಾ !!!**

# ದೀಪಗಳ ಹಬ್ಬ ದೀಪಾವಳಿ

- ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ





ದೀಪಾವಳಿಯು ದೀಪಗಳನ್ನು ಬೆಳಗುವ ಹಬ್ಬ. ಇದನ್ನು ವಿಕ್ರಮ ಶಕೆಯ ವರ್ಷದ ಕೊನೆಯಲ್ಲಿ ಆಚರಿಸ ಲಾಗುತ್ತದೆ. ಆಶ್ವಯುಜಮಾಸ ಕೃಷ್ಣಪಕ್ಷದ ಚತುರ್ದಶಿ ಅಮಾ ವಾಸ್ಯೆ ಹಾಗೂ ಕಾರ್ತೀಕ ಮಾಸದ ಶುಕ್ಲಪಕ್ಷ ಪಾಡ್ಯದಂದು ದೀಪಾವಳಿ ಆಚರಿಸಲಾಗುತ್ತದೆ.

ಹಿಂದೂ ಧರ್ಮದ ಪ್ರಕಾರ ಶ್ರೀರಾಮನು ರಾವಣನನ್ನು ಗೆದ್ದು ಸೀತೆ ಮತ್ತು ಲಕ್ಷ್ಮಣರೊಂದಿಗೆ ಅಯೋಧ್ಯೆಗೆ ಮರಳಿದ ಸಮಯವೆಂದು ದೀಪಾವಳಿ ಆಚರಿಸುವರು.ನರಕಚತುರ್ದ ಶಿಯಂದು ನರಕಾಸುರನನ್ನು ಶ್ರೀಕೃಷ್ಣ ಸಂಹರಿಸಿದ ದಿನ ವೆಂದು ಹೇಳಲಾಗುತ್ತದೆ. ಏನೇ ತೊಂದರೆಗಳಿದ್ದರೂ ದೀಪಾ ವಳಿಯನ್ನು ಶುಭದ ವಿಜಯವೆಂದು ಆಚರಿಸಲಾ ಗುತ್ತದೆ. ಬಲಿವಾಮನರ ಕಥೆಯಂತೆ ಬಲಿಯ ತ್ಯಾಗವನ್ನು ಪಾಡ್ಯದ ದಿನ ಬಲಿಪಾಡ್ಯಮಿಯಾಗಿ ಆಚರಿಸುತ್ತೇವೆ. ಈ ಸಮಯದಲ್ಲೇ ಹೊಸ ಆರ್ಥಿಕ ವರ್ಷದ ಪ್ರಾರಂಭ ಸಹ, ವ್ಯಾಪಾರಿಗಳು ಹೊಸ ಲೆಕ್ಕದ ಪುಸ್ತಕಗಳನ್ನು ಈ ಸಮಯ ದಲ್ಲೇ ತೆರೆಯುತ್ತಾರೆ. ದೀಪಾ ವಳಿ ಹಬ್ಬದ ತ್ರಯೋದಶಿ ಯಂದು ನೀರು ತುಂಬುವ ಹಬ್ಬ, ಸಾಯಂ ಕಾಲ ಸ್ನಾನ, ಗೃಹ ಸ್ವಚ್ಛ ಮಾಡಿ, ನೀರು ತುಂಬಿ, ಪೂಜೆ ಮಾಡಿ,ಆ ನೀರಿನಿಂದಲೇ ಚತುರ್ದಶಿ ಯಂದು ಎಣ್ಣೆಸ್ನಾನ ಮಾಡುತ್ತಾರೆ. ಇದಕ್ಕೆ ಕಾರಣ ಸಮುದ್ರ ಮಥನದ ಸಮಯದಲ್ಲಿ ಶ್ರೀವಿಷ್ಣು ಅಮೃತ ಕಲಶದೊಡನೆ ಧನ್ವಂತರಿಯಾಗಿ ಅವತಾರವೆತ್ತಿದ ಈ ದಿನ ತುಂಬುವ ನೀರಿ ನಲ್ಲಿ ಗಂಗೆಯು,ಎಣ್ಣೆಯಲ್ಲಿ ಧನಲಕ್ಷ್ಮಿಯು ಇರುತ್ತಾಳೆಂಬ ನಂಬಿಕೆ. ಈ ನೀರಿನಿಂದ ಸ್ನಾನ ಮಾಡಿದರೆ ಆಯುರಾರೋಗ್ಯ ವೃದ್ಧಿಸುವುದೆಂಬ, ಸಕಲ ಪಾಪಗಳು ನಿವಾರಣೆಯಾಗುವುದೆಂಬ ನಂಬಿಕೆ ಇದೆ.

ನರಕ ಚತುರ್ದಶಿಯು ಹಬ್ಬದ ಮೊದಲ ದಿನವಾಗಿದ್ದು, ಇದರ ಕೇಂದ್ರ ಬಿಂದು ನರಕಾಸುರ, ಮಹಾವಿಷ್ಣುವು ವರಹಾ ವತಾರದಲ್ಲಿದ್ದಾಗ ಅವನ ಶರೀರದಿಂದ ಒಂದು ತೊಟ್ಟು ಬೆವರು ಭೂಮಿಗೆ ಬೀಳಲಾಗಿ ಭೂದೇವಿಯಲ್ಲಿ ನರಕಾಸುರ ಜನಿಸು ತ್ತಾನೆ. ಇದರಿಂದ ಅವನಿಗೆ ಭೌಮಾಸುರ, ಭೂಮಿಪುತ್ರ ಎಂಬ ಹೆಸರೂ ಇದೆ. ಭೂದೇವಿ ವಿಷ್ಣುವನ್ನು ಬೇಡಿ ತನ್ನ ಮಗ ನರಕಾ ಸುರನಿಗೆ ವೈಷ್ಣವಾಸ್ತ್ರವನ್ನು ವರವಾಗಿ ಕೊಡಿಸುತ್ತಾಳೆ. ಇದರಿಂದ ಬಲಿಷ್ಠನಾದ ನರಕಾಸುರ ಲೋಕಕಂಟಕನಾಗುತ್ತಾನೆ. ಇಂದ್ರ ಅವನ ತಾಯಿ ಅದಿತಿಯನ್ನು ಕಾಡತೊಡಗಿದಾಗ ಇಂದ್ರ ಕೃಷ್ಣನ ಮೊರೆ ಹೋಗುತ್ತಾನೆ.ಅವನ ದುಷ್ಟತನ ಅವನ ತಾಯಿಗೂ ಸಹಿಸಲಾಗದಿರಲು ಅವಳು ಶ್ರೀಕೃಷ್ಣನ ಮೊರೆ ಹೋದಾಗ ನರಕ ಚತುರ್ದಶಿ ಕಗ್ಗತ್ತಲಿನಲ್ಲಿ ಶ್ರೀಕೃಷ್ಣನು ನರಕನನ್ನು ಸಂಹರಿಸುತ್ತಾನೆ. ದುಷ್ಟ ಸಂಹಾರದ ಸಂಕೇತ ವಾಗಿ ಪಟಾಕಿ ಸಿಡಿಸಿ ಸಂಭ್ರಮದ ವಿಜ ಯದ ನಗೆಯಲ್ಲಿ ಎಲ್ಲರೂ ಅಂದು ಖುಷಿಪಡುತ್ತಾರೆ.



## ಶ್ರೀ ವೆಂಕಟೇಶ್ವರ ಸ್ವಾಮಿಯ ಆಶೀರ್ವಾದ ಎಲ್ಲರಿಗೂ ಸಿಗಲೆಂದು ಹಾರೈಸುತ್ತಾ ಓದುಗರಿಗೆ, ಚಂದಾದಾರರಿಗೆ, ದೀಪಾವಳಿ ಹಬ್ಬದ ಹಾರ್ಥಿಕ ಶುಭಾಶಯಗಳು

\- ಪ್ರಧಾನಸಂಪಾದಕರು



ನರಕನ ಬಂಧನದಲ್ಲಿ ಅನೇಕ ಕನ್ಯೆಯರನ್ನು ಶ್ರೀಕೃಷ್ಣ ಬಂಧ ಮುಕ್ತರನ್ನಾಗಿ ಮಾಡಿದ ಪ್ರಯುಕ್ತ ಕನ್ಯೆಯರನ್ನು ಸೆರೆಯಿಂದ ಬಿಡಿಸಿದ ಶ್ರೀಕೃಷ್ಣ ಸ್ವರೂಪಿಯಾದ ಅಳಿಯಂದಿರನ್ನು ಕನ್ಯಾ ಪಿತೃಗಳು ಈ ಹಬ್ಬದಂದು ತಮ್ಮ ಮನೆಗೆ ಆಹ್ವಾನಿಸಿ ವಿಶೇಷವಾಗಿ ಆದರಿಸಿ, ಉಪಚರಿಸುವ ಸಂಪ್ರದಾಯ ಈಗಲೂ ಇರುವುದನ್ನು ನಾವು ನೋಡಬಹುದಾಗಿದೆ.

**ಅಮಾವಾಸ್ಯೆಯ ಲಕ್ಷ್ಮಿ ಪೂಜೆ**

ನರಕಚತುರ್ದಶಿಯ ಮರುದಿನ ದೀಪಾವಳಿ ಅಮಾವಾಸ್ಯೆಯಾಗಿದ್ದು ಮಹಾವಿಷ್ಣುವಿನ ಪತ್ನಿ ಲಕ್ಷ್ಮಿ ಯನ್ನು ಆರಾಧಿಸುವ ಹಬ್ಬವಾಗಿದೆ.

**ಬಲಿಪಾಡ್ಯಮಿ**

ಹಬ್ಬದ ಮೂರನೆಯ ದಿನವನ್ನು ಬಲಿಪಾಡ್ಯಮಿ ಯಾಗಿ ಆಚರಿಸಲಾಗುತ್ತದೆ. ಬಲಿಚಕ್ರವರ್ತಿ ಅಂದು ಭೂಲೋಕ ಸಂಚಾರಕ್ಕೆ ಬರುತ್ತಾನೆ ಎಂಬ ನಂಬಿಕೆ ಇದೆ. ಬಲಿಯ ಭಕ್ತಿ,ದಾನಶೀಲ ಗುಣ ವನ್ನು ಮೆಚ್ಚಿದ ವಿಷ್ಣು ಪ್ರತೀ ವರ್ಷ ಅಂದು ಪೂಜೆ ನೀಡುವಂತೆ ವರ ನೀಡುತ್ತಾನೆ. ಇಂದಿನ ದಿನವೇ ಶ್ರೀಕೃಷ್ಣನು ಇಂದ್ರನನ್ನು ಸೋಲಿಸಿದ ದಿನವೂ ಹೌದು. ಶ್ರೀಕೃಷ್ಣನು ಗೋವ ರ್ಧನ ಗಿರಿಯನ್ನು ಎತ್ತಿದ ದಿನ. ಆದ್ದರಿಂದ ಅಂದು ಗೋ ಪೂಜೆ ಮಾಡುತ್ತಾರೆ. ರೈತರ ಹುಟ್ಟುಹಬ್ಬ ಎಂದು ಪೂಜಿಸುತ್ತಾರೆ.

**ಪುರಾಣದ ಪ್ರಕಾರ ದೀಪಾವಳಿ**

ರಾಮಾಯಣದ ಪ್ರಕಾರ ದೀಪಾವಳಿ ತ್ರೇತಾ ಯುಗದಲ್ಲಿ ಪಿತೃವಾಕ್ಯ.ಪರಿಪಾಲನೆಗಾಗಿ ಹದಿ ನಾಲ್ಕು ವರ್ಷ ವನವಾಸಕ್ಕೆ ತೆರಳಿದ್ದ ಶ್ರೀರಾಮ ಚಂದ್ರ ವಿಜಯದಶಮಿಯಂದು ರಾವಣನನ್ನು ಕೊಂದು ವನವಾಸ ಮುಗಿಸಿ ಅಯೋಧ್ಯೆಗೆ ಮರಳಿದಾಗ ಜನರು ಸಾಲು ದೀಪ ಹಚ್ಚಿ, ಸ್ವಾಗತಿಸಿ ದೀಪಾವಳಿ ಆಚರಿಸಿದ ರಂತೆ, ಅಂದಿನಿಂದ ದೀಪಾವಳಿ ಉತ್ಸವ ಪ್ರಾರಂಭ ವಾಯಿತು ಎನ್ನಲಾಗುತ್ತದೆ. ಈ ರೀತಿಯ ಸಂಭ್ರ ಮದ ಹಬ್ಬದ ದೀಪಾವಳಿಯನ್ನು ಸಂತೋಷ ಮತ್ತು ಸಡಗರದಿಂದ ಆಚರಿಸೋಣ.

# ಕುಬೇರ

ನಮ್ಮ ಪುರಾಣಗಳ ಪ್ರಕಾರ ಕುಬೇರ ಯಕ್ಷ ಮತ್ತು ಹಣದ ದೇವತೆ. ಅಷ್ಟದಿಕ್ಪಾಲಕರಲ್ಲೊಬ್ಬ. ಉತ್ತರ ದಿಕ್ಕಿನ ಅಧಿಪತಿ. ಇವರ ಮುಖ್ಯನಗರ ಅಲಕಾಪುರಿ. ಸಂಪತ್ತನ್ನು ಸೃಷ್ಟಿಸುವ ಲಕ್ಷ್ಮೀದೇವಿಯಿಂದ ಅದನ್ನು ಪಡೆದು ಎಲ್ಲರಿಗೂ ಸಂಪತ್ತನ್ನು ಹಂಚುವ ವ್ಯಕ್ತಿ ಈ ಕುಬೇರ. ಕುಬೇರನು ರಾವಣನಿಗೆ ಅಣ್ಣ. ವಿಶ್ರವಸುನೆಂಬುವವನಿಗೆ ಇಬ್ಬರು ಹೆಂಡತಿಯರು. ಮೊದಲನೆ ಹೆಂಡತಿ ವರವರ್ಣಿನಿ, ಎರಡನೇ ಹೆಂಡತಿ ಕೈಕಸಿ. ಮೊದಲನೇ ಹೆಂಡತಿಗೆ ಜನಿಸಿದವನೇ ಈ ಕುಬೇರ.

ಕೃತಯುಗದಲ್ಲಿ ಈ ಪುಲಸ್ತ್ಯನು ಬ್ರಹ್ಮ ಪುತ್ರನಾಗಿ ಇದ್ದನು. ಇವನು ಮೇರು ಪರ್ವತ ಪ್ರಾಂತ್ಯದಲ್ಲಿನ ತೃಣಬಿಂದುವಿನ ಆಶ್ರಮದಲ್ಲಿದ್ದು, ವೇದಾಧ್ಯಯನ ಮಾಡುತ್ತಿದ್ದನು. ಆಶ್ರಮದ ಪ್ರದೇಶ ಬಹಳ ಸುಂದರ, ರಮಣೀಯವಾಗಿದ್ದುದರಿಂದ, ವಿಹಾರಕ್ಕೆ ಆ ಪ್ರದೇಶಕ್ಕೆ ದೇವಕನ್ಯೆಯರು, ಋಷಿ ಕನ್ಯೆಯರು, ರಾಜರ್ಷಿಕನ್ಯೆಯರು, ಎಲ್ಲರೂ ಬರುತ್ತಿದ್ದರು. ಇವರಿಂದ ತನಗೆ ತಪೋಭಂಗವಾಗುವುದರಿಂದ, ಅಲ್ಲಿಗೇ ಯಾರು ಬರಬಾರದೆಂದು ಹೇಳಿದರು. ಬಂದು ಋಷಿಕನ್ಯೆಯರೇನಾದರೂ ನೋಡಿದರೆ ಅವರು ಗರ್ಭಿಣಿಯಾಗುತ್ತಾರೆಂದು ಶಾಪ ಕೊಟ್ಟನು.

ಈ ವಿಷಯ ಗೊತ್ತಿಲ್ಲದೇ ತೃಣಬಿಂದುವಿನ ಮಗಳು ಒಂದು ದಿನ ಆಶ್ರಮಕ್ಕೆ ಬಂದು ಪುಲಸ್ತ್ಯನನ್ನು ನೋಡಿದುದರಿಂದ ಗರ್ಭಿಣಿ ಆಗುತ್ತಾಳೆ. ಇದನ್ನು ತಿಳಿದುಕೊಂಡ ತೃಣಬಿಂದು ಮಗಳ ಜೊತೆ ಋಷಿ ಹತ್ತಿರ ಹೋಗಿ ನಡೆದುದನ್ನೆಲ್ಲಾ ತಿಳಿಸಿ, ತನ್ನ ಮಗಳನ್ನು ಮದುವೆ ಮಾಡಿಕೋಬೇಕೆಂದು ಬೇಡಿಕೊಳ್ಳುತ್ತಾನೆ. ಋಷಿ ಅದಕ್ಕೆ ಒಪ್ಪುತ್ತಾನೆ. ಇವರಿಗೆ ವಿಶ್ರವಸು ಹುಟ್ಟುತ್ತಾನೆ. ವಿಶ್ರವಸುವೆಂಬ ಬ್ರಹ್ಮನ ಮಗನೇ ಕುಬೇರ. ಇವನಿಗೆ ಸೋಮನೆಂಬುದು ಇವನ ಮತ್ತೊಂದು ಹೆಸರು ಇದೆ. ಈ ಕಾರಣದಿಂದ ಉತ್ತರ ದಿಕ್ಕಿಗೆ ಸೌಮ್ಯೆಯೆಂದು ಹೆಸರು. ಇವನ ಹೆಂಡತಿ ವೃದ್ಧಿ / ಭದ್ರೆ ಹಾಗೂ ಸಮುದ್ರಮಥನ ಕಾಲದಲ್ಲಿ ಬಂದ ರಂಭೆ ಆಗಿದ್ದಾರೆ.

ರಾವಣ, ಕುಂಭಕರ್ಣ, ಶೂರ್ಪನಖಿ, ವಿಭೀಷಣ ಎರಡನೇ ಹೆಂಡತಿಗೆ ಜನಿಸಿದವರು. ಆದರೆ ಕುಬೇರನು ಹುಟ್ಟಿನಿಂದಲೇ ಕುಬ್ಜನಾಗಿರುತ್ತಾನೆ. ದೊಡ್ಡ ಹೊಟ್ಟೆ , ಮೂರು ಕಾಲುಗಳು ಶರೀರವೆಲ್ಲವೂ ವಕ್ರವಾಗಿರುತ್ತದೆ. ಆತನಿಗೆ ಹಲ್ಲುಗಳು ಹೊರಗೆ ಬಂದಿರುತ್ತವೆ, ಲೋಕದಲ್ಲಿನ ಸಂಪತ್ತನ್ನು ಹಂಚುವ ದೇವರು. ಆತನಿಗಾಗಿ ಒಂದು ನಗರ, ಒಂದು ವಾಹನ ಅವಶ್ಯಕವೆಂದು ಶ್ರೀವಿಷ್ಣು ಶಿಲ್ಪಿ ವಿಶ್ವಕರ್ಮನಿಂದ ಲಂಕೆ ಎಂಬ ನಗರವನ್ನು, ಪುಷ್ಪಕ ವಿಮಾನವನ್ನು ತಯಾರಿಸಲು ಹೇಳಿ ಅದೇ ರೀತಿಯಾಗಿ ಮಾಡಿಸಿ,ಅದನ್ನು ಕುಬೇರನಿಗೆ ನೀಡುತ್ತಾನೆ. ಆಗ ಕುಬೇರನು ಲಂಕೆಗೆ ರಾಜನಾಗಿ ಆಳುತ್ತಿರುತ್ತಾನೆ.




ರಾವಣನು ಮತ್ತು ಕುಂಭಕರ್ಣ ಕಾಡಿಗೆ ಹೋಗಿ ತೀವ್ರವಾದ ತಪಸ್ಸನ್ನು ಮಾಡಿ, ಬ್ರಹ್ಮನನ್ನು ಮೆಚ್ಚಿಸಿ ಆತನಿಂದ ಅದೆಷ್ಟೋ ವರಗಳನ್ನು ಪಡೆದುಕೊಳ್ಳುತ್ತಾನೆ. ಬ್ರಹ್ಮನು ನೀಡಿದ ವರಗಳಿಂದ ದೇವತೆಗಳೆಲ್ಲರಿಗೂ ಅಪಾಯದ ಸ್ಥಿತಿ ಎದುರಾಗಿ ಬಿಡುತ್ತದೆ. ಎಲ್ಲಾ ಲೋಕಗಳನ್ನೂ ಆಕ್ರಮಿಸಿಕೊಳ್ಳುತ್ತ ಲಂಕೆಯನ್ನೂ ಸಹ ರಾವಣನು ತನ್ನಕೈ ವಶ ಮಾಡಿಕೊಂಡನು. ಅದರ ಜೊತೆಗೆ ಪುಷ್ಪಕ ವಿಮಾನವನ್ನೂ ಕಸಿದುಕೊಳ್ಳುತ್ತಾನೆ.

ಲಂಕಾನಗರವು, ಪುಷ್ಪಕ ವಿಮಾನವೂ ಎರಡನ್ನೂ ಕಳೆದುಕೊಂಡ ಕುಬೇರನಿಗೆ ಮಹೇಶ್ವರನು ಬೇರೇ ಜವಾಬ್ದಾರಿಗಳನ್ನು ಒಪ್ಪಿಸಿದನು.ಕೈಲಾಸ ಪರ್ವತದಲ್ಲಿ 'ಅಲಕಾನಗರಿ' ನಿರ್ಮಿಸಿಕೊಂಡು,ಯಕ್ಷರಿಗೆ ಅಧಿಪತಿಯಾದನು. ಆತನನ್ನು ಉತ್ತರ ದಿಕ್ಕಿಗೆ ಅಧಿಪತಿಯನ್ನಾಗಿ ಮಾಡಿದರಂತೆ, ಅದಕ್ಕೆ ಉತ್ತರ ದಿಕ್ಕು ಎಂದರೆ ಇಂದಿಗೂ ಧನ, ಸಂಪತ್ತಿಗೆ ನಿಲಯವೆಂದು ಹೇಳುತ್ತಾರೆ. ಇವನ ಮಂತ್ರಿ ಪ್ರವಾಸ, ಮಣಿಭದ್ರ, ಮಣಿಮಂತ, ಮಣಿಕಂಧರ ಮಣಿಭೂಷ ಎನ್ನುವವರಿದ್ದಾರೆ.

ಉತ್ತರದಿಕ್ಕಿನ ಅಧಿಪತಿ ಕುಬೇರ.ಇಲ್ಲಿ ಖಜಾನೆ, ಪೆಟ್ಟಿಗೆಯಲ್ಲಿ ಬೆಲೆಬಾಳುವ ವಸ್ತುಗಳು,ಇತರ ಬೆಲೆ ಬಾಳುವ ವಸ್ತುಗಳನ್ನು ಅಲ್ಮೇರಾದಲ್ಲಿಡಬಹುದು.

-ಪ್ರತ್ಯಗ್ರ






# ಯೋಗೀಶ್ವರ ಯಾಜ್ಞವಲ್ಕ್ಯ ಮಹರ್ಷಿ

– ಡಾ॥ ರಾಮಚಂದ್ರ ದಾಸ್ ಸಿ.ಜಿ.

9483384584

ಯಾಜ್ಞವಲ್ಕ್ಯರು ನಾಲ್ಕೂ ವೇದಗಳಲ್ಲಿ ವಿವಿಧ ಶಾಖೆಗಳ ನಿರ್ಮಾತೃ, ಅನೇಕ ಯಜ್ಞಗಳಲ್ಲಿನ ಯಾಜಕತ್ವ ಇತ್ಯಾದಿಗಳಿಂದ ಪ್ರಸಿದ್ಧರಾದವರು. ಇವರ ಕಾಲವು ಶತಪಥಕ್ಕೆ ಸಂಬಂಧಿಸಿದಂತೆ, 28ನೆಯ ಚತುರ್ಯುಗದಲ್ಲಿ ದ್ವಾಪರದ ಕೊನೆ ಹಾಗೂ ಕಲಿಯ ಪ್ರಾರಂಭದ ಕಾಲವು ಅಂದರೆ ಸುಮಾರು 6000 ವರ್ಷಗಳ ಹಿಂದೆ ಯಾಜ್ಞವಲ್ಕ್ಯರು ಇದ್ದರು ಎಂಬುದು ಆಧಾರಗಳ ರೀತ್ಯ ಸಮಯೋಚಿತವಾಗುತ್ತದೆ.

ಅಂಗೀರಸ ಗೊತ್ರೋತ್ಪನ್ನ ಅಜೀಗರ್ತನ ಪುತ್ರನಾದ ಶುನಃಶೇಪನು ಸ್ವಜನ ಕುಲ ತ್ಯಾಗ ಮಾಡಿ ವಿಶ್ವಾಮಿತ್ರ ಋಷಿಯ ಸ್ವಯಂದತ್ತ ಪುತ್ರನಾಗಿ, ಅವರ ಕುಲ ಸ್ವೀಕರಿಸಿದ ನಿದರ್ಶನವಾಗಿ "ದೇವರಾತನೆಂಬ ಹೆಸರನ್ನು ಧಾರಣೆ ಮಾಡಿದನು. ಈತನ ಮಗ, ಮೊಮ್ಮಗನ ಪರಂಪರೆಯಲ್ಲಿ ಯಾಜ್ಞವಲ್ಕ್ಯರು ಅವತರಿಸಿದರು. ಈ ವಿಷಯವನ್ನು ಇವರ ಪುತ್ರರಾದ ಕಾತ್ಯಾಯನಾಚಾರ್ಯರು, "ಪ್ರತಿಜ್ಞಾ ಪರಿಶಿಷ್ಟವೆಂಬ ಸೂತ್ರ ಗ್ರಂಥದಲ್ಲಿ ಸ್ಪಷ್ಟಪಡಿಸಿದ್ದಾರೆ.

ದೇವರಾತನು ಪುತ್ರಪ್ರಾಪ್ತಿಯ ಇಚ್ಛೆಯಿಂದ ದೀರ್ಘ ಕಾಲದವರೆಗೆ, ಕೃಪಾ ನಿಧಿಯಾದ, ವೇದಮಯನಾದ ಸೂರ್ಯ ನಾರಾಯಣನನ್ನು ಕುರಿತು ತಪಗೈದು ಪ್ರಸನ್ನೀಕರಿಸಿಕೊಂಡು ನೀನೇ ನನ್ನ ಪುತ್ರನಾಗಿ ಅವತರಿಸು ಎಂಬ ವರವನ್ನು ಕೇಳಿ ಪಡೆದುಕೊಂಡದ್ದರಿಂದ ಸೂರ್ಯನಾರಾಯಣನು ಬ್ರಹ್ಮ ದೇವರ ಆವೇಶ ಪೂರಿತನಾಗಿ "ಯಾಜ್ಞವಲ್ಕ್ಯ"ರೆಂಬ ನಾಮದಿಂದ ಅವತರಿಸಿದರೆಂದು ಸ್ಕಾಂದಪುರಾಣದ ನಾಗರಖಂಡದಲ್ಲಿ ವ್ಯಾಸರಿಂದ ವರ್ಣಿತವಾಗಿದೆ. ಯಾಜ್ಞವಲ್ಕ್ಯರ ಅವತಾರವು ಮಾನುಷ ಸ್ವರೂಪದ್ದಾಗಿದ್ದರೂ, ಸರ್ವ ಸಾಮಾನ್ಯ ಮನುಷ್ಯರಂತೆ ಉತ್ಪತ್ತಿಯ ವಿಷಯದಲ್ಲಿ ಮನುಷ್ಯನಿಗಿಂತ ವಿಲಕ್ಷಣವಾಗಿದೆ.

ಪುತ್ರ ಪ್ರಾಪ್ತಿಯ ಇಚ್ಛೆಯಿಂದ ದೇವರಾತ ಋಷಿಯು ಇತರ ಋಷಿ ಮಂಡಳಿಯೊಂದಿಗೆ ಕೂಡಿಕೊಂಡು ಬ್ರಹ್ಮ ತೇಜವನ್ನು ಸಮೃದ್ಧಮಾಡಬಲ್ಲಂಥ "ಬೃಹತ್ಮತೀಸವ" ಎಂಬ ಯಾಗವನ್ನು ಕೈಗೊಂಡರು. ಆ ಸಂದರ್ಭದಲ್ಲಿ ದೇವರಾತ ಋಷಿಗೆ ಸೂರ್ಯ ನಾರಾಯಣನು ಕೊಟ್ಟಂಥ ವರದ ಸ್ಮರಣೆಯಾದ ಕೂಡಲೇ ಯಜ್ಞವೇದಿಕೆಯಲ್ಲಿ ಗಾರ್ಹಪತ್ಯ ಅಗ್ನಿಯಿಂದ, ಸೂರ್ಯ ನಾರಾಯಣನು ಬ್ರಹ್ಮದೇವರ ಆವೇಶ ಪೂರಿತನಾಗಿ ದಿವ್ಯರೂಪ ಧಾರಿಯಾದ ಬಾಲಕನ ರೂಪದಿಂದ ಆವಿರ್ಭವಿತನಾದನು. ಆಗ ದೇವರಾತನು ಆ ಬಾಲಕನನ್ನು ಎತ್ತಿಕೊಂಡು ಆಲಂಗಿಸಿ ತನ್ನ ತೊಡೆಯ ಮೇಲೆ ಕೂಡಿಸಿಕೊಂಡನು. ಆಗ ಬ್ರಹ್ಮಾದಿ ದೇವತೆಗಳು, ಋಷಿಮುನಿಗಳು ಈ ಅಗ್ನಿ ತುಲ್ಯ ಬಾಲಕನನ್ನು ಪ್ರಶಂಸಿಸಿ ಶುಭಾಶೀರ್ವಾದ ಮಾಡಿ, ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಿಸಿದರು. ಆ ಅಯೋನಿಜನಾದ ಬಾಲಕನಲ್ಲಿ ಯೋಗಶಾಸ್ತ್ರಕ್ಕೆ ಉಚಿತವಾದ ಸರ್ವಲಕ್ಷಣಗಳನ್ನು ಕಂಡ ಬ್ರಹ್ಮ ದೇವರು ಆ ಬಾಲಕನಿಗೆ ದೇವರಾತನ ಮಗನಾದ 'ಯಾಜ್ಞವಲ್ಕ್ಯ ಯೋಗೀಶ್ವರನೆಂದು ನಾಮಕರಣ ಮಾಡಿದರು. ಯಾಜ್ಞವಲ್ಕ್ಯರು ಅಯೋನಿಜರಾಗಿದ್ದರೂ, "ಯಾಜ್ಞವಲ್ಕ್ಯ ಪೂಜಾ ವಿಧಾನದ ಅರ್ಘ್ಯ ಮಂತ್ರದಲ್ಲಿ "ಸುನಂದಾಗರ್ಭಸಂಜಾತ " ಎಂಬ ವಿಶೇಷಣ ಪ್ರಯೋಗವಾಗಿದೆ. ಸುನಂದೆಯು ದೇವರಾತನ ಪತ್ನಿಯಾಗಿದ್ದ ಕಾರಣದಿಂದಾಗಿ "ಗರ್ಭಸಂಜಾತ" ಎಂಬ ವಿಶೇಷಣವು ಕೇವಲ ಔಪಚಾರಿಕ ಪ್ರಯೋಗವೆಂದು ನಿರ್ಧರಿತವಾಗುತ್ತದೆ.

ಯಾಜ್ಞವಲ್ಕ್ಯರ ಜಯಂತಿಯ ಬಗ್ಗೆ ನಿಖರವಾದ ಮಾಹಿತಿ ದೊರೆಯುವುದು ಕಠಿಣ. ಇದರ ಆಚರಣೆಯು ವಿವಿಧ ಸ್ಥಳಗಳಲ್ಲಿ, ವಿವಿಧ ಕಾಲಗಳಲ್ಲಿ ಆಚರಿಸಲಾಗುತ್ತದೆ.

1. ವೈಯ್ಯಾಸಿಕ ಚರಣವ್ಯೂಹ ಭಾಷ್ಯದಲ್ಲಿ ಶ್ರಾವಣಶುದ್ಧ ಚತುರ್ದಶೀಯುಕ್ತ ಪೌರ್ಣಿಮಾದಂದು ಯಾಜ್ಞವಲ್ಕ್ಯರಿಗೆ ಶ್ರೀ ಸೂರ್ಯನಾರಾಯಣನಿಂದ ವೇದಜ್ಞಾನ ಪ್ರಾಪ್ತವಾಗಿದೆಯೆಂದು ಉಲ್ಲೇಖಿಸಿದೆ. ಆದ್ದರಿಂದ ಈ ಕ್ಷೇತ್ರ ಪಂಢರಪುರದಲ್ಲಿ ಯಾಜ್ಞ ವಲ್ಕ್ಯರ ಉತ್ಸವವನ್ನು ಆ ದಿನದಲ್ಲಿ ಆಚರಿಸಲಾಗುತ್ತಿದೆ.

2.ಗುರುಲೀಲಾಮೃತ ಗ್ರಂಥದ ಐದನೇ ಅಧ್ಯಾಯದಲ್ಲಿ ಯಾಜ್ಞವಲ್ಕ್ಯ ಜಯಂತಿ ತಿಥಿಯನ್ನು ಫಾಲ್ಗುಣ ಶುದ್ಧಪಂಚಮಿ ಎಂಬುದಾಗಿ ಗ್ರಹಿಸಲಾಗಿದೆ.

3.ತಿಮಿರ ದಿವಾಕರ ಎಂಬ ಗ್ರಂಥದಲ್ಲಿ ಯಾಜ್ಞಲ್ಕ್ಯರು ತ್ರೇತಾಯುಗದಲ್ಲಿ ಮಿಥಿಲಾ ನಗರದಲ್ಲಿ ಜ್ಯೇಷ್ಠ ಶುದ್ಧದಶಮಿ ಯಂದು ಜನ್ಮ ತಳೆದಿದ್ದಾರೆ ಎಂದು ಉಲ್ಲೇಖಿಸಿದ್ದು, ಪುರಾಣ ಪ್ರಸಿದ್ಧ ಅವತಾರ ಕಥೆಯೊಂದಿಗೆ ವಿಸಂಗತವಾಗಿದೆ.

4. ಮದ್ರಾಸ್ ಪ್ರಾಂತ್ಯದಲ್ಲಿ ಕೆಲವಾರು ವರ್ಷಗಳ ಹಿಂದೆ ಭಾಗವತುಲ ಲಕ್ಷ್ಮೀಪತಿಶಾಸ್ತ್ರಿಯವರ ಸಂಪಾದಕತ್ವದಲ್ಲಿ "ಯಾಜ್ಞ ವಲ್ಕ್ಯ"ಎಂಬ ಹೆಸರಿನ ಮಾಸಿಕ ಪತ್ರಿಕೆಯೊಂದು ಪ್ರಕಟವಾಗು ತ್ತಿತು.ಅದರಲ್ಲಿ ಪ್ರಭವ ಸಂವತ್ಸರದ ಕಾರ್ತೀಕ ಮಾಸದ ಅಂಕಣದಲ್ಲಿ ಯಾಜ್ಞವಲ್ಕ್ಯರ ಜನ್ಮದಿನವನ್ನು ಕಾರ್ತೀಕ ಶುದ್ಧ ನವಮಿ ರವಿವಾರ ಎನ್ನಲಾಗಿದೆ.ಆದರೆ ಇದಕ್ಕೆ ಅವರು ಯಾವುದೇ ವಿಶೇಷ ಕಾರಣವನ್ನು ಹೇಳಿಲ್ಲ.

ಈ ಎಲ್ಲ ಕಾರಣಗಳಿಂದ ಯಾಜ್ಞಲ್ಕ್ಯರ ಜನ್ಮತಿಥಿಯು ನಿಶ್ಚಿತವಾಗಿ ಉಪಲಬ್ದವಾದ ನಂತರವೇ ಇದರ ಬಗೆಗಿನ ತುಮುಲ, ಕೊನೆಗಾಣಬಹುದಾಗಿದೆ ಜಯಂತಿಯ ಆಚರಣೆಯ ವಿಷಯ ಆಯಾಯ ಆಸ್ತಿಕ ಮಹಾಶಯರ ವಿವೇಚನೆಗೆ ಬಿಟ್ಟದ್ದು.

### ವಿದ್ಯಾರ್ಥಿ ದೆಸೆ ಹಾಗೂ ಋಗ್ವೇದ ಪರಿತ್ಯಾಗ

ಯಾಜ್ಞವಲ್ಕ್ಯರಿಗೆ ಉಪನಯನಾದಿ ಸಂಸ್ಕಾರಗಳಾದ ನಂತರ ತಂದೆಯ ಆಜ್ಞಾನುಸಾರ ಬ್ರಹ್ಮಚರ್ಯ ವ್ರತಧಾರಣ ಮಾಡಿ ಚಮತ್ಕಾರಪುರ (ವಡನಗರ, ವೃದ್ಧನಗರ, ಇತ್ಯಾದಿ)ದಲ್ಲಿದ್ದ ವಿದಗ್ಧಶಾಕಲ್ಯ ಋಷಿಯಲ್ಲಿ ಶಿಷ್ಯತ್ವವನ್ನು ಸ್ವೀಕರಿಸಿ ಸಂಪೂರ್ಣ ಋಗ್ವೇದದ ಅಧ್ಯಯನ ಮಾಡಿದರು.ಸೂರ್ಯವಂಶ ಸಮುತ್ಪನ್ನ ವಾದ ಅನರ್ತದೇಶದ ಅಧಿಪತಿ ರಾಜಾ "ಸುಪ್ರಿಯ"ನು ಚಮತ್ಕಾರಪುರದಲ್ಲಿ ಚಾತುರ್ಮಾಸ್ಯ ವ್ರತ ಸಂಬಂಧಿ ಶಾಂತಿ ಪೌಷ್ಟಿಕ ನಿತ್ಯ ಕರ್ಮಗಳಿಗಾಗಿ ಶಾಕಲ್ಯ ಋಷಿಯ ಶಿಷ್ಯರು ಪ್ರತಿದಿವಸ ಒಬ್ಬೊಬ್ಬರಂತೆ ಪೌರೋಹಿತ್ಯವನ್ನು ವಹಿಸುತ್ತಿದ್ದರು. ಅದರಂತೆ ಯಾಜ್ಞವಲ್ಕ್ಯರು ಒಂದು ದಿನ ಹೋಗಿ ವೇದ ಮಂತ್ರ ಗಳಿಂದ ಅಭಿಮಂತ್ರಿಸಿದ ಜಲವನ್ನು ರಾಜನ ಮೇಲೆ ಅಭಿಷೇಕಿ ಸಲು ಪ್ರವೃತ್ತರಾದಾಗ ರಾಜನು ಅವರನ್ನು ಅಪಮಾನಿಸಿದನು. ಆಗ ಯಾಜ್ಞಲ್ಕ್ಯರು ಸಂತಪ್ತರಾಗಿ"ನನ್ನಿಂದ ಅಭಿಷೇಕಿಸಿ ಕೊಳ್ಳುವ ಯೋಗ್ಯತೆ ನಿನ್ನಲಿಲ್ಲ"ಎಂದು, ಆ ಜಲವನ್ನು ಅಶ್ವ ಶಾಲೆಯ ಸ್ತಂಭದ ಮೇಲೆ ಹಾಕಿದರು.ಕೂಡಲೇ ಆ ಸ್ತಂಭವು ಚಿಗುರೊಡೆದು ಶಾಖೆ,ಪಲ್ಲವ, ಫಲ, ಪುಷ್ಪಾದಿಗಳಿಂದ ಸುಶೋಭಿ ತವಾಯಿತು.ಇದನ್ನು ಕಂಡ ರಾಜನು ಪಶ್ಚಾತ್ತಾಪದಿಂದ ಶಾಕಲ್ಯರ ಬಳಿ ಬಂದು ಯಾಜ್ಞವಲ್ಕ್ಯರನ್ನು ಪುನಃ ಕಳಿಸುವಂತೆ ಪ್ರಾರ್ಥಿಸಿದಾಗ, ಗುರುಗಳಿಗೆ ವೇದಮಂತ್ರಗಳಿಗೆ, ಮತ್ತು ತಮಗೆ ಅವಮಾನಿಸಿರುವುದರಿಂದ ಗುರುಗಳ ಆಜ್ಞೆಯನ್ನು ಮೀರಿದ ಪರಿ ಣಾಮವಾಗಿ ಗುರುಗಳ ಆದೇಶದಂತೆ ಕಲಿತ ಋಗ್ವೇದದ ಎಲ್ಲ ವಿದ್ಯೆಯನ್ನು ವಮನ ಧರ್ಮದಿಂದ ಹೊರ ಹಾಕಿ ಶಿಷ್ಯತ್ವ ವನ್ನು ತೊರೆದು ಹೊರಟು ಹೋದರು.

### ಯಜುರ್ವೇದ ಪರಿತ್ಯಾಗ

ಪ್ರಭಾಸ ಕ್ಷೇತ್ರದಲ್ಲಿ ಇವರ ತಾಯಿಯ ತಂದೆಯಾದ ವೈಶಂಪಾಯನರ ಬಳಿ ಹಿಂದೆ ನಡೆದ ಎಲ್ಲ ವೃತ್ತಾಂತವನ್ನು ನಿವೇದಿಸಿ ಯರ್ಜುವೇದ ಕಲಿಸುವಂತೆ ಪ್ರಾರ್ಥಿಸಿದರು. ಅದ ರಂತೆ ಸಂಪೂರ್ಣ ಯಜುರ್ವೇದವನ್ನು ಕಲಿಸಿದರು ಕಾರಣಾಂತರಗಳಿಂದ ವೈಶಂಪಾಯನರಿಗೆ ಬಂದ ಬ್ರಹ್ಮಹತ್ಯೆ ಮತ್ತು ಬಾಲಹತ್ಯೆಯ ದೋಷ ಕಳೆದುಕೊಳ್ಳಲು ಪ್ರಾಯಶ್ಚಿತ್ತ ಆಚರಿಸಲು ಎಲ್ಲ ಶಿಷ್ಯರಿಗೆ ಹೇಳಿದಾಗ, ಯಾಜ್ಞವಲ್ಕ್ಯರು "ಎಲ್ಲ ರಿಗೂ ತೊಂದರೆ ಬೇಡ ನಾನೊಬ್ಬನೇ ಆಚರಿಸುತ್ತೇನೆ" ಎಂದಾಗ ಗುರುಗಳು "ಈ ಎಲ್ಲಾ ಬ್ರಾಹ್ಮಣರು ನಿಸ್ತೇಜರೆಂದು ಭಾವಿಸಿ ಅವಮಾನಿಸಿದ್ದೀಯ, ಆದ್ದರಿಂದ ನನ್ನಿಂದ ಕಲಿತ ಎಲ್ಲ ವಿದ್ಯೆಯನ್ನು ತ್ಯಾಗ ಮಾಡಿ ಬಿಡು" ಎಂದರು. ಅದರಂತೆ ವಮ ನದ ರೂಪದಲ್ಲಿ ಎಲ್ಲ ವಿದ್ಯೆಯನ್ನು ಯಾಜ್ಞವಲ್ಕ್ಯರು ಹೊರ ಹಾಕಿ ದರು.ಗುರುಗಳ ಆಜ್ಞೆಯಂತೆ ಉಳಿದ ಎಲ್ಲ ಶಿಷ್ಯರು ತಿತ್ತಿರಿ ಪಕ್ಷಿ ಗಳಾಗಿ ಅದನ್ನು ಸ್ವೀಕರಿಸಿದರು. ಕಾರಣ ಅವರೆಲ್ಲರು ತೈತ್ತ ರೀಯ ಶಾಖೀಯ"ಯ ರೆನಿಸಿ,ಚಕಾರಾದ್ವರ್ಯು ಎಂಬ ಹೆಸರಿನಿಂದ ಪ್ರಸಿದ್ಧರಾದರು.

### ಚತುರ್ವೇದ ಪ್ರಾಪ್ತಿ

ನಡೆದ ಘಟನೆಗಳಿಂದ ಮನುಷ್ಯ ಗುರುಗಳನ್ನು ಸ್ವೀಕರಿಸ ಬಾರದೆಂದು ನಿರ್ಧರಿಸಿ,ಕಠಿಣ ತಪಸ್ಸಿನಿಂದ ಸೂರ್ಯನಾರಾ ಯಣನನ್ನು ಒಲಿಸಿಕೊಂಡು ಆ ದೇವನಿಂದ ಲಘಿಮಾ ಎಂಬ ವಿದ್ಯೆಯನ್ನು ಕಲಿತು, ಲಘು ಸ್ವರೂಪ ಪಡೆದು ಸೂರ್ಯ ದೇವನ ಮುಖ್ಯ ಅಶ್ವದ ಕಿವಿಯಲ್ಲಿ ಲಘುರೂಪದಿಂದ ಕುಳಿತು,ಆ ದೇವ ನಿಂದ ಚತುರ್ವೇದಗಳನ್ನು ಸಾಂಗೋಪಾಂಗವಾಗಿ ಅಧ್ಯ ಯನ ಮಾಡಿ ಆ ದೇವನ ಪ್ರಿಯ ಶಿಷ್ಯರಾದರು. ಆ ದೇವನು ಯಾಜ್ಞವಲ್ಕ್ಯರನ್ನು ಕುರಿತು ನಿನ್ನ ನಾಲಿಗೆ ತುದಿಯಲ್ಲಿ ಸರಸ್ವತಿ ದೇವಿಯ ವಾಗ್ರೂಪದಲ್ಲಿ ನೆಲೆಸಿ ನಿನ್ನ ಮುಖದಿಂದ ಸರಹಸ್ಯ, ಸಂಗ್ರಹ, ಸಪರಿಶೇಷ ಹಾಗೂ ಸೋತ್ತರವಾದ ಶತಪಥ ಬ್ರಾಹ್ಮ ಣದ ಆವಿರ್ಭವವಾಗುತ್ತದೆ,ಹಾಗೂ ಶಾಸ್ತ್ರ ವಿಷಯಕ್ಕೆ ಸಂಬಂ ಧಿಸಿದ ಅನೇಕ ಗ್ರಂಥಗಳು ನಿರ್ಮಾಣವಾಗುತ್ತವೆ ಎಂಬ ವರ

ವನ್ನಿತ್ತರು. ಅಲ್ಲದೆ ನೀನು ಗೃಹಸ್ಥಾಶ್ರಮಿಯಾಗಿ ನನ್ನಿಂದ ಕೊಡಲ್ಪಟ್ಟ ವೇದಗಳ ಶಾಖೆ ಪ್ರಶಾಖೆಗಳನ್ನು ಸಂಪ್ರದಾಯ ಸಿದ್ಧ ಪರಂಪರೆಗಳನ್ನಾಗಿ ಮಾಡು,ಕೊನೆಯಲ್ಲಿ ಸನ್ಯಾಸವನ್ನು ಸ್ವೀಕರಿಸು' ಎಂದು ಹರಸಿದರು.

ಸೂರ್ಯನಾರಾಯಣನ ಆಜ್ಞೆಯಂತೆ ಮಿತ್ರಯೂನನ ಮಗಳು ಮೈತ್ರೇಯಿಯನ್ನು ಹಾಗೂ ಕತಗೋತ್ರೋತ್ಪನ್ನಳಾದ ಕಾತ್ಯಾಯಿನಿಯನ್ನು ವಿವಾಹವಾಗಿ ಪುತ್ರ ಹಾಗೂ ಪುತ್ರಿಯರಿಗೆ ಜನ್ಮ ನೀಡಿದರು. ಸೂರ್ಯನಾರಾಯಣನಿಂದ ಕಲಿತ ನಾಲ್ಕು ವೇದಗಳನ್ನು ಕ್ರಮವಾಗಿ (1) ಶಾಂಖಾಯನ ಅಥವಾ ಕೌಶೀತಕಿ ಎಂಬ ಶಿಷ್ಯನಿಗೆ ಋಗ್ವೇದವನ್ನು (2) ಕಣ್ವಮಾಧ್ಯಂದಿನಾದಿ 15 ಶಿಷ್ಯಂದಿರಿಗೆ 15 ಭಾಗಗಳಾಗಿ ಮಾಡಿದ ಯಜುರ್ವೇದವನ್ನು (3) ಸಾವಶ್ರವಾ, ಕೌಥುಮಿ, ಪ್ರಭೃತಿ ಎಂಬುವರಿಗೆ ಸಾಮವೇದವನ್ನು (4) ಶೌನಕ ಹಾಗೂ ಇನ್ನುಳಿದವರಿಗೆ ಅಥರ್ವವೇದವನ್ನು ಕಲಿಸಿದರು. ಈ ಪರಂಪರೆಯು "ಆದಿತ್ಯ ಸಂಪ್ರದಾಯ " ವೆಂದು ಪ್ರಸಿದ್ಧಿಯಾಯಿತು.

ಯೋಗೀಶ್ವರ ಎಂದು ಬ್ರಹ್ಮದೇವನಿಂದ ನಾಮಕರಣದ ಸಮಯದಲ್ಲಿಟ್ಟ ಹೆಸರು ನಾಮರೂಪದಲ್ಲಿ ಹಾಗೂ ಸಕಲವಿದ್ಯೆಗಳ ಅಧಿಪತಿ ಎಂಬ ಅರ್ಥದಲ್ಲಿ ಶಂಕರನಿಂದ ಪದವೀ ರೂಪದಲ್ಲಿ ಕೊಡಲ್ಪಟ್ಟು ಅನ್ವರ್ಥಕ ನಾಮವಾಗಿ ಯೋಗೀಶ್ವರ ಯಾಜ್ಞವಲ್ಕ್ಯರು" ಎಂದು ಪ್ರಸಿದ್ಧಿಯಾಯಿತು. ವಿದೇಹ ರಾಜನಾದ ಜನಕನು ಯಾಜ್ಞವಲ್ಕ್ಯರ ಶಿಷ್ಯನಾಗಿ ಬ್ರಹ್ಮವಿದ್ಯೆಗೆ ಭಾಜನನಾದನು. ಯಾಜ್ಞವಲ್ಕ್ಯರು ಅನೇಕ ಯಜ್ಞಗಳ ಯಾಜಕತ್ವವನ್ನು ವಹಿಸಿದ್ದರು ಎಂಬ ಉಲ್ಲೇಖವು ಆರ್ಷ ಗ್ರಂಥದಿಂದ ತಿಳಿದು ಬರುತ್ತದೆ.

ಯಾಜ್ಞವಲ್ಕ್ಯರು ಸನ್ಯಾಸಾಶ್ರಮವನ್ನು ಸ್ವೀಕರಿಸಲು ಸಿದ್ಧರಾಗಿ, ಕತ್ಯಾಯನಿಗೆ ಗೃಹ, ವಿತ್ತ, ಭೂಮ್ಯಾದಿಗಳನ್ನಿತ್ತರು. ಮೈತ್ರೇಯಿಗೆ ಆತ್ಮ ಬೋಧವನ್ನು ಮಾಡುತ್ತಾ "ಕೃತಂ ಸ್ಮರ ಕ್ರತೋ ಸ್ಮರ" ಎಂಬ ಉಪದೇಶ ನೀಡಿದರು. ಅಂದರೆ "ಉಪಕಾರ ಮಾಡಿದವರನ್ನು ಸ್ಮರಿಸು, ಏನು ಉಪಕಾರ ಮಾಡಿದ್ದರು ಎಂಬುದನ್ನು ಕೂಡಾ ಸ್ಮರಿಸು.

ಪರಶಬ್ದವಾಚ್ಯನಾದ ಭಗವಂತನು ವಿವಿಧ ರೂಪಗಳಲ್ಲಿ ನಿಂತು ಉಪಕರಿಸುತ್ತಿರುವುದನ್ನು ಸದಾಸ್ಮರಿಸು ಇದೇ ಸಾಧನೆಗೆ ಮೊದಲನೆಯ ಮೆಟ್ಟಿಲು ಆಗಿದೆ. ಇಂತಹ ಮಹಾನುಭಾವರ ಚರಿತ್ರೆಯಿಂದ ತಾತ್ವಿಕ ಹಾಗೂ ಸಾಂಸ್ಕೃತಿಕ ಚಿರಸ್ಥಾಯಿತ್ವವುಂಟಾಗುತ್ತದೆ. ಇದರ ಪರಿಣಾಮವು ಹೆಜ್ಜೆ ಹೆಜ್ಜೆಗೂ ಉದ್ಬೋಧಕವಾಗುವಂತಿದೆ. ಇಂತಹ ಮಹಾ ಮಹಿಮರ ಸ್ಮರಣೆಯೇ ಪಾವನಕರವಾಗಿದೆ.

# ಜಂಬೂದ್ವೀಪ

'ಜಂಬೂದ್ವೀಪೇ ಭರತವರ್ಷೇ ಭರತಖಂಡೇ... ಎಂದು ಶ್ಲೋಕದಲ್ಲಿ ಉಚ್ಚರಿಸುವಂತೆ ಭೂಮಂಡಲ ಏಳು ದ್ವೀಪಗಳನ್ನೊಳಗೊಂಡಿದೆ ಎಂದು ಪುರಾಣಗಳಲ್ಲಿ ಹೇಳಲಾಗಿದೆ. ಪುರಾಣಗಳ ಪ್ರಕಾರ ಆ ಏಳು ದ್ವೀಪಗಳಾದ ಜಂಬೂದ್ವೀಪ, ಪ್ಲಕ್ಷದ್ವೀಪ , ಶಾಲ್ಮಲೀದ್ವೀಪ, ಕುಶದ್ವೀಪ, ಕ್ರೌಂಚದ್ವೀಪ ,ಶಾಕದ್ವೀಪ ಮತ್ತು ಪುಷ್ಕರದ್ವೀಪ ಎಂದು ಹೆಸರಿಸಲಾಗಿದೆ.

ಜಂಬೂದ್ವೀಪದಲ್ಲಿ ಜಂಬೂ ಮರಗಳಿಂದಾವೃತವಾಗಿದ್ದರಿಂದ ಮತ್ತು ಜಂಬೂವೃಕ್ಷದಲ್ಲಿ ಬಿಡುತ್ತಿದ್ದ ಜಂಬೂಹಣ್ಣುಗಳು ಆನೆಗಳ ಗಾತ್ರವಿರುತ್ತಿದ್ದವು ಹಾಗೂ ಮಾಗಿದ ಹಣ್ಣುಗಳು ಬೆಟ್ಟದ ಮೇಲೆ ಬಿದ್ದ ರಸದಿಂದ ಜಂಬೂನದಿ ಉಗಮವಾಯಿತೆನ್ನಲಾಗಿದೆ. ಹೀಗಾಗಿ ಈ ಹೆಸರು ಬಂದಿದೆ ಎನ್ನಲಾಗಿದೆ.

ವಾಯುಪುರಾಣ, ಮಾರ್ಕಂಡೇಯ ಪುರಾಣ, ಬ್ರಹ್ಮಾಂಡ ಪುರಾಣಗಳಲ್ಲೂ ಬರುವ ಉಲ್ಲೇಖಗಳಂತೆ ಜಂಬೂದ್ವೀಪ ಕಮಲದ ಹೂವಿನ ನಾಲ್ಕು ದೊಡ್ಡ ಎಸಳುಗಳಂತೆ ವಿಭಾಗಿಸಲ್ಪಟ್ಟಿದ್ದು ಆ ಹೂವಿನ ಮಧ್ಯಭಾಗದ ದಿಂಡಿನ ಪ್ರದೇಶದಲ್ಲಿ ಬೃಹತ್ ಮೇರು ಪರ್ವತವಿತ್ತು. ಜಂಬೂದ್ವೀಪ ಒಂಬತ್ತು ವಿಭಾಗಗಳು ಮತ್ತು ಎಂಟು ಪ್ರಮುಖ ಪರ್ವತಗಳಿಂದ ಪ್ರಸಿದ್ಧವಾಗಿತ್ತು.

ಜಂಬೂದ್ವೀಪಕ್ಕೆ ಸುದರ್ಶನ ದ್ವೀಪವೆಂತಲೂ ಕರೆಯಲಾಗುತ್ತಿತ್ತು. ಭಾಗವತದ 16 ನೆಯ ಅಧ್ಯಾಯದಲ್ಲೂ ಜಂಬೂದ್ವೀಪದ ವರ್ಣನೆಯಿದೆ. ಜಂಬೂದ್ವೀಪದ ಎಲ್ಲೆಡೆ ಭಾರತದ ಹಿರಿಮೆ, ಗರಿಮೆ ಮತ್ತು ಸಂಸ್ಕೃತಿಯ ಪ್ರಭಾವ ಇತ್ತು. ಭೌಗೋಳಿಕ ಕಾರಣವೂ ಸೇರಿದಂತೆ ಅನೇಕ ಕಾರಣಗಳಿಂದ ಮೇರೆಗಳು, ಭೂರಚನೆಗಳು ಮಾರ್ಪಾಡಾಗಿದೆ.

# ಶ್ರೀ ಪ್ರಸನ್ನವೆಂಕಟ ದಾಸಾರ್ಯ ವಿರಚಿತ "ಏನುಗತಿಯೋ ಮುಂದೆನೆಗೆ ಗೋವಿಂದ" ಕೀರ್ತನೆಯ ಒಳನೋಟ"

- ಡಾ॥ ಸುಭಾಸ್ ಕಾಖಂಡಕಿ
79754 42458

ಏನು ಗತಿಯೋ ಮುಂದೆನೆಗೆ ಗೋವಿಂದ

ಶ್ರೀನಿವಾಸ ರಕ್ಷಿಸಿದರೆ ದಯದಿಂದ ॥ಪ॥

ಎಲ್ಲ ಹರಿದಾಸರು ಭಗವಂತನನ್ನು ಯಾವಾಗಲೂ ಕೇಳಿಕೊಳ್ಳುವುದೆಂದರೆ ಹೇ ಭಗವಂತಾ ! ನಿರಂತರವಾಗಿ ನಿನ್ನ ಸ್ಮರಣೆಯ ಭಾಗ್ಯ ಕೊಡು ಹಾಗೂ ಲೌಕಿಕದ ಭವಾಬ್ಧಿಯಿಂದ, ನನ್ನನ್ನು ರಕ್ಷಿಸು,ಪಾರುಮಾಡು ಎನ್ನು ವುದು ಅಂತಲೇ ಈ ಕೀರ್ತನೆ ಯಲ್ಲಿ ದಾಸರು ಆತ್ಮನಿವೇದನೆ ಎನ್ನುವಂತೆ ಬಹಳ ದೈನ್ಯದಿಂದ ಶ್ರೀಹರಿಯನ್ನು ಕೇಳಿ ಕೊಂಡಿದ್ದಾರೆ.

ಹೇ! ಗೋವಿಂದ ನೀನು ನನ್ನನ್ನು ಕಾಯದಿದ್ದರೆ, ನನಗ್ಯಾರು ಕಾಯುವರಯ್ಯ ನೀನಿಲ್ಲದೆನಗಿಲ್ಲ - ನಿನಗಿಂತ ಬಂಧುವಿಲ್ಲ.ನೀನು ರಕ್ಷಿಸದಿದ್ದರೆ ನಾನಗ್ಯಾರು ಗತಿ ಹೇ ಶ್ರೀನಿ ವಾಸ ಎಂದು ಆರ್ತರವ ಧ್ವನಿಯಲ್ಲಿ ಕೇಳಿತ್ತಿದ್ದಾರೆ.

ಅದು ಎಂಥಾಭವಬಂಧನಗಳು ತಮ್ಮನ್ನು ಕಾಡು ತ್ತಿವೆ ಎಂದು ಬಹಳ ಮಾರ್ಮಿಕ ವಾಗಿ ಮನ ತಟ್ಟು ವಂತೆ ಮಂದಿ ನುಡಿಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

ನಾಚಿಕೆಯಿಲ್ಲದ ವಿಷಯಾಸೆಯ ಸಹ್ಯ

ನೀಚದುರಕ್ತಿಯಸ್ತ್ರದ ಘನಗಾಯ ॥1॥



ನಿಶಿದಿನ ಹಸಿವು ತೃಷೆ ಸುಡುವ ಕುಮರಿಯು

ಮಸಿವರ್ಣ ಮಾಡಿ ಕೇರಿಡಿವ ಮೂರುರಿಯು ॥ 2॥

ಹಗಲು - ರಾತ್ರಿ ಹಸಿವೆ ತೃಷೆ ಎನ್ನುವ ವಿಷಯಾ ಸಕ್ತಿಗಳು ನನ್ನನ್ನು ಬೆಂಕಿಯಂತೆ ಸುಡುತ್ತಿವೆ. ಅವುಗಳಿಂದ ಪಾರಾಗ ಬೇಕೆಂದರೂ ಕೂಡ ಅವೆಲ್ಲೂ ಇಚ್ಛಾಶಕ್ತಿಗಳನ್ನು ಸುಟ್ಟು-ಮಸಿ ವರ್ಣ ಮಾಡಿ ಕೇರಿನಂತೆ ನನ್ನನ್ನು ಸುಡುತ್ತಿವೆ. ಹೇಗೇ ಕೇರನ್ನು ಬೆಂಕಿಗೆ ಹಿಡಿದರೆ ಅದರಿಂದ ಕಪ್ಪು ಬಣ್ಣದ ತೈಲ ಹೊರಬರುತ್ತಲೇ ಇರುತ್ತದೆಯೋ, ಅದರಂತೆ ನನ್ನ ಮನಸ್ಸು ಭವದತ್ತ ಎಳೆದು, ಸುಡುತ್ತಿರುವ ವಿಷಯ ಆಸಕ್ತಿ ಗಳು ಎಂಬ ಬೆಂಕಿಯಿಂದ ನನ್ನ ಮನಸ್ಸಿನ ಕಲ್ಮಶಗಳ ಕಸ ಎಣ್ಣೆಯಂತೆ ಸೋರುತ್ತಲೇ ಇದೇ. ಇಂಥಹ ನಾಚಿಕೆಯಿಲ್ಲದ ಲೌಕಿಕ ಆಸೆಗಳು-ವಿಷಯಾ ಸಕ್ತಿಗಳು ನನಗೆ ಅಸಹ್ಯವಾಗುವಂಥಹ ಘಾಯಗಳನ್ನು ಮಾಡುತ್ತಲಿವೆ. ಭಗವಂತ ಇದರಿಂದ ನನ್ನನ್ನು ರಕ್ಷಿಸು ಎಂದು ಅನನ್ಯವಾಗಿ ಪ್ರಾರ್ಥಿಸಿದ್ದಾರೆ.

ಇನ್ನು ಮುಂದಿನ ನುಡಿಯಲ್ಲಿ -

ಮಾಯದ ಕಡಲೊಳು ಕಟ್ಟಿಹ ಕೊರಳ

ಆಯಾಸ ಬಡುತ ಬಡುತ ಬಿದ್ದಿತುರುಳು ॥3॥

ಎಳ್ಳೆನೆತು ಜ್ಞಾನ ಅಹಂಕಾರ ಬಹಳ

ಘಲ್ಲನೆ ತಗಲುವ ಜ್ಞಾನದ ಶೂಲ ॥4॥

ಶ್ರೀ ಹರಿ ಈ ಜಗತ್ತಿನ ಮಾಯೆಯೆಂಬ ಸಮುದ್ರದಲ್ಲಿ ಕಟ್ಟಿ ಹಾಕಿಕೊಂಡಿರುವೆನು ಇದರಿಂದ ಬಿಡುಗಡೆ ಇಲ್ಲದಂತೆ ಒದ್ದಾಡುತ್ತಿದ್ದೇನೆ ಆಯಾಸ ಬಡುತ್ತಿದ್ದೇನೆ ನನಗೆ ಒಂದಿಷ್ಟು ಜ್ಞಾನವಿಲ್ಲದೆ ಅಹಂಕಾರದಿಂದ-ನಾನೇ ನಾನೆಂಬ ಮೋಹದಲ್ಲಿ ಬಿದ್ದು ಒದ್ದಾಡುತ್ತಿರುವ

ನನ್ನನ್ನು ಘನ್ನವಾದ ಜ್ಞಾನ ಶೂಲದಿಂದ ತಿವಿದು, ನನ್ನೆಲ್ಲಾ ಅಹಂಕಾರವನ್ನು ಸುಟ್ಟು ಭಸ್ಮಮಾಡಿ ನನ್ನನ್ನು ರಕ್ಷಿಸು.

ಇನ್ನು ಮುಂದಿನ ಮೂರು ನುಡಿಗಳಲ್ಲಿ

ಮರಹು ಮದಗಳೆಂಬ ಮುಸುಕಿದ ಮಳೆಯು
ಪರದಾರ ಪರನಿಂದೆಯಾಗ್ನಿಯ ಮಳೆಯು ॥5॥

ಬೇಡಿದ ಬಯಕೆ ಸಾಧ್ಯಾವಾಗದಾಗ ನೋವು
ಮೂಢತನದಿ ದಿನ ಬದುಕುವ ಸಾವು ॥6॥

ಇನ್ನಾರೆ ಸಜ್ಜನ ಸಂಗಧೌಷಧ
ಮುನ್ನ ಕೊಡಿಸೊ ಪ್ರಸನ್ನವೆಂಕಟ ಮುಕುಂದ ॥7॥

**೫ನೇ ನುಡಿಯಲ್ಲಿ** - ಹೇ ಭಗವಂತಾ ! ನನ್ನ ಸೂತ್ತ ಇರುವ ಈ ಸಂಸಾರವೆಂಬ ಬಂಧನದಲ್ಲಿ ನಿನ್ನ ನಾಮ ಸ್ಮರಣೆಯೂ ಕೂಡ ಮರೆತು ಹೋಗುತ್ತದೆ. ಮೇಲೆ ಅಹಂಕಾರ-ಮದ ಮತ್ಸರ, ಮೋಹ ಎನ್ನುವ ಪರಮ ವೈರಿಗಳು ನನ್ನ ಸುತ್ತವರೆದಿದ್ದಾರೆ. ನಿನ್ನ ನಾಮಸ್ಮರಣೆ ಮಾಡಬೇಕಾದ ನನ್ನ ನಾಲಿಗೆ ಪರರ ನಿಂದೆಯಲ್ಲಿ ತೊಡಗಿದೆ, ಅದು ಅಗ್ನಿಯ ಮಳೆಯಂತೆ ಸುಡುತ್ತಿದೆ.

**೬ನೇ ನುಡಿಯಲ್ಲಿ**- ಬದುಕಿನಲ್ಲಿ ಏನೆಲ್ಲಬೇಕು - ಮತ್ತೇಬೇಕು ಎಂದು ಲೌಕಿಕ ಸುಖದ ಚಿಂತನೆಗೆ ತೊಡಗುವ ನನ್ನ ಬೇಡಿಕೆಗಳು ಈಡೇರದೆ ಆ ಮೂಢತನದ ನೋವು - ನನ್ನನ್ನು ಭಾದಿಸುತ್ತಿದೆ. ಹೇ ! ಭಗವಂತ! ಇಂಥ ನಿಶ್ಚರವಾದ ಬದುಕಿನಿಂದ ನನ್ನನ್ನು ಪಾರುಮಾಡಿ ಜ್ಞಾನದ ಮಾರ್ಗದತ್ತ ನಡೆಯುವ ಮನಸ್ಸನ್ನು ಅನುಗ್ರಹಿಸು.

ಇಂಥ ಎಲ್ಲ ವಿಷಾಯಾಸಕ್ತಗಳಿಂದ ಪಾರು ಮಾಡಿ- ನನಗೆ ಯಾವಾಗಲೂ ನಿನ್ನನ್ನು ಆರಾಧಿಸಿ ಸನ್ಮಾರ್ಗದ ಹಾದಿಯತ್ತ ನಡೆಯುತ್ತಿರುವ ಸಜ್ಜನರ ಸಂಗಕೊಡು ಭಗವಂತ ಸಜ್ಜನರ ಸಂಗ ಎನ್ನುವುದೇ ನನ್ನ ಪಾಲಿಗೆ ಎಲ್ಲ ಭಾವಾಬ್ದಿಗಳನ್ನು ಪರಿಹರಿಸುವ ದಿವ್ಯ ಔಷಧಿ ಅಂಥ ಸಜ್ಜನರ ಸಂಗ ಕೊಟ್ಟು ನನ್ನನ್ನು ಮುಕ್ತಿಯ ಮಾರ್ಗಕ್ಕೆ ಹಚ್ಚು ಎನ್ನುವಲ್ಲಿ ದಾಸರು ಭಗವಂತನನ್ನು ಅನನ್ಯವಾಗಿ ನಂಬಿ ರಕ್ಷಿಸು ಎಂದಿದ್ದಾರೆ. ದಾಸರು ಈ ಕೀರ್ತನೆಯಲ್ಲಿ ತಮ್ಮನ್ನು ತಾವೆ ಸಂಬೋಧಿಸಿಕೊಂಡು, ಜನರು ತಮ್ಮ ದುರ್ನಡತೆಗಳನ್ನು ತಿದ್ದಿಕೊಂಡು, ಆಧ್ಯಾತ್ಮಿಕ ಸಾಧನೆಯಲ್ಲಿ ಹೇಗೆ ತೊಡಗಿಕೊಳ್ಳಬೇಕೆಂಬ ಸಂದೇಶ ನೀಡಿದ್ದಾರೆ.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀ ವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ):

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗ ವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

# ಧಾತ್ರಿಯೊಂದಿಗೆ ಧಾರ್ಮಿಕ ಥಳಕು

**- ಹನುಮಂತ.ಮ. ದೇಶಕುಲಕರ್ಣಿ**

ನೆಲ್ಲಿಕಾಯಿ , ಅಮಲಕ, ಧಾತ್ರಿ ಎಂದು ಕರೆಯಿಸಿಕೊಳ್ಳುವ ಸಿಹಿ ಹುಳಿ ರುಚಿಯ ನೆಲ್ಲಿಕಾಯಿ ಹೆಸರು ಕೇಳ್ತಿದ್ದಂತೆ ಅನೇಕರ ಬಾಯಲ್ಲಿ ನೀರೂರುತ್ತೆ. ನೆಲ್ಲಿಕಾಯಿ ನಾಲಿಗೆಯಲ್ಲಿನ ಸ್ವಾದ ಗ್ರಂಥಿಗಳನ್ನು ಚುರುಕುಗೊಳಿಸುವ ವಿಶೇಷ ಶಕ್ತಿಯನ್ನು ಹೊಂದಿದೆ. ಇಂತಹ ನೆಲ್ಲಿಕಾಯಿಗೆ ಆಯುರ್ವೇದ ಶಾಸ್ತ್ರದಲ್ಲಿ ವಿಶೇಷ ಮಹತ್ವವನ್ನು ನೀಡಲಾಗಿದೆ. ಅದರಲ್ಲೂ ಬೆಟ್ಟದ ನೆಲ್ಲಿಕಾಯಿಯಲ್ಲಿ ಹಲವಾರು ಔಷಧೀಯ ಗುಣಗಳಿವೆ.

ಕಾರ್ತಿಕ ಮಾಸದಲ್ಲಿ ನೆಲ್ಲಿಕಾಯಿಗೆ ಸಾಕಷ್ಟು ಪ್ರಾಶಸ್ತ್ಯ ಇದೆ. ಎಲ್ಲಿ ನೆಲ್ಲಿಕಾಯಿ ಇರುತ್ತದೆ ಅಲ್ಲಿ ಲಕ್ಷ್ಮಿಯ ಸಂಪೂರ್ಣ ಕೃಪಾಕಟಾಕ್ಷ ಇರುತ್ತದೆ ಹಾಗಾಗಿ ಪಾವನಾ ಕಾರ್ತೀಕ ಮಾಸದಲ್ಲಿ ನೆಲ್ಲಿಕಾಯಿ ದೀಪಾರಾಧನೆ ಮಾಡಿದರೆ ಸಕಲ ಸನ್ಮಂಗಳ ಉಂಟಾಗುವುದಲ್ಲದೆ ಐಶ್ವರ್ಯ ಸಹ ಪ್ರಾಪ್ತಿ ಆಗುತ್ತದೆ ಹಾಗೂ ಸಕಲ ಗ್ರಹ ದೋಷ ಕೂಡ ಕಡಿಮೆ ಆಗುತ್ತದೆ.

ಪುರಾಣಗಳು ವಿವರಿಸಿದಂತೆ ನೆಲ್ಲಿಕಾಯಿಯನ್ನು ವಿಷ್ಣುಸ್ವರೂಪ ಎನ್ನಲಾಗುತ್ತೆ. ಇದೇ ಕಾರಣಕ್ಕೆ ಶ್ರೀಮನ್ನಾರಾಯಣನು ಪಾಲ್ಗಡಲಿನಲ್ಲಿ ತನ್ನ ಸುಖಶಯನ ದಿಂದ ಮೇಲೆದ್ದು ತನ್ನ ನಿದ್ರಾಮುದ್ರೆಯನ್ನು ಭಕ್ತರಿಗೆ ಸಾಕ್ಷಾತ್ಕರಿಸುವ ದಿನ. ಈ ದಿನ ಸಂಜೆಯ ಸಮಯದಲ್ಲಿ ತುಳಸಿ ವಿವಾಹ ಏರ್ಪಡುವುದು. ಚಾಂದ್ರಮಾನ ಕಾರ್ತಿಕ ಮಾಸದ ಶುಕ್ಲಪಕ್ಷದ 12 ನೇ ದಿನ ಅಂದರೆ ದ್ವಾದಶಿಯಂದು ವಿಷ್ಣು ಸ್ವರೂಪಿ ನೆಲ್ಲಿಕಾಯಿ ಗಿಡದೊಂದಿಗೆ ತುಳಸಿಯ ವಿವಾಹವನ್ನು ಮಾಡಲಾಗುತ್ತದೆ.

ಧಾತ್ರಿ ವೃಕ್ಷದಲ್ಲಿ ನಾವು ಶ್ರೀರಾಧಾ ದಾಮೋದರ ಶ್ರೀಲಕ್ಷ್ಮಿನಾರಾಯಣನನ್ನು ಧನತ್ರಿ , ಶಾಂತಿ, ಕಾಂತಿ ಎನ್ನುವ ಇತರ ಹೆಸರುಗಳೊಂದಿಗೆ ಪೂಜೆಯನ್ನು ಮಾಡುತ್ತೇವೆ. ಧಾತ್ರಿ ಪೂಜೆಯ ನಂತರ ಬ್ರಾಹ್ಮಣರಿಗೆ ಮತ್ತು ಸುವಾಸಿನಿಯರಿಗೆ ಯಥಾಶಕ್ತಿ ಕೈಲಾದಷ್ಟು ದಾನ - ದಕ್ಷಿಣೆಯನ್ನು ನೀಡಬೇಕು.

ಕಾರ್ತಿಕ ಮಾಸದ ಉತ್ಥಾನ ದ್ವಾದಶಿಯಂದು ಆಚರಿಸಲಾಗುವ ಪವಿತ್ರ ತುಳಸಿ ಹಬ್ಬದಲ್ಲಿ ಬೆಟ್ಟದ ನೆಲ್ಲಿಕಾಯಿ ಗಿಡವನ್ನಿಟ್ಟು ಪೂಜಿಸಲಾಗುತ್ತೆ. ತುಳಸಿ ಹಬ್ಬದ ದಿನದಂದೇ ತುಳಸಿಯನ್ನು ಶ್ರೀಕೃಷ್ಣ ಮದುವೆಯಾದನೆಂದು



ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ.ತುಳಸಿ ಹಬ್ಬದ ದಿನದಂದು ಬೆಟ್ಟದ ನೆಲ್ಲಿಕಾಯಿಯ ತುದಿ ಕತ್ತರಿಸಿ ತುಳಸಿಗೆ ಆರತಿಯನ್ನು ಬೆಳಗಲಾಗುತ್ತದೆ.

ಬೆಟ್ಟದ ನೆಲ್ಲಿಕಾಯಿಯ ಮೇಲ್ಭಾಗವನ್ನು ಕತ್ತರಿಸಿ ಅದಕ್ಕೆ ತುಪ್ಪದಿಂದ ಅದ್ದಿದ ಬತ್ತಿಯನ್ನಿಟ್ಟು ಆರತಿ ಬೆಳಗಲಾಗುತ್ತೆ. ಈ ರೀತಿ ಬೆಟ್ಟದ ನೆಲ್ಲಿಕಾಯಿಯಲ್ಲಿ ದೀಪ ಹಚ್ಚಿ, ಆರತಿ ಬೆಳಗಿದರೆ ಇಷ್ಟಾರ್ಥಗಳನ್ನು ಸಿದ್ದಿಸುತ್ತವೆ. ಇನ್ನು ದೇವಿಗೆ ಮಂಗಳವಾರ ಹಾಗೂ ಶುಕ್ರವಾರಗಳಂದು ನೆಲ್ಲಿಕಾಯಿ ದೀಪ ಹಚ್ಚಿ. ಆರತಿ ಮಾಡಲಾಗುತ್ತದೆ. ಹೀಗೆ ಸತತವಾಗಿ ಐದು ಅಥವಾ ಒಂಬತ್ತು ವಾರಗಳ ಕಾಲ ನೆಲ್ಲಿಕಾಯಿ ದೀಪ ಬೆಳಗಿದ್ರೆ ಮನೋಭಿಲಾಷೆಗಳು ಈಡೇರುತ್ತವೆ.

ಜಗದ್ಗುರು ಆದಿ ಶಂಕರಾಚಾರ್ಯರು ಬಡಮಹಿಳೆಯ ಮನೆಗೆ ಭಿಕ್ಷೆಗೆ ಹೋದಾಗ ಅಲ್ಲಿ ಅವಳು ತನ್ನ ಹತ್ತಿರ ಏನೂ ಇರದಿದ್ದರೂ ಮನೆಯೊಳಗೆ ಹೋಗಿ ಒಣಗಿದ ನೆಲ್ಲಿಕಾಯಿಗಳನ್ನು ಭಿಕ್ಷೆ ಹಾಕಿದಾಗ, ಶಂಕರಾಚಾರ್ಯರು ಮಹಾಲಕ್ಷ್ಮಿದೇವಿಯ ಕುರಿತು ಕನಕಧಾರಾ ಸ್ತೋತ್ರ ಪಠಿಸಿ ನೆಲ್ಲಿಕಾಯಿಯ ಬಂಗಾರದ ಮಳೆಯನ್ನು ಸುರಿಸುತ್ತಾರೆ. ಬಡ ಮಹಿಳೆಗೆ ಸಿರಿತನ ಪ್ರಾಪ್ತವಾಗುವಂತೆ ಮಾಡುತ್ತಾರೆ.

ಕಾರ್ತಿಕ ಮಾಸದಲ್ಲಿ ನೆಲ್ಲಿಕಾಯಿಗೆ ಸಾಕಷ್ಟು ಪ್ರಾಶಸ್ತ್ಯವಿದೆ. ನೆಲ್ಲಿಕಾಯಿ ಇಲ್ಲದೆ ಕಾರ್ತಿಕ ಮಾಸದ ಆಧ್ಯಾತ್ಮಿಕ ಕಾರ್ಯಕ್ರಮಗಳು ನಡೆಯುವುದಿಲ್ಲ. ನೆಲ್ಲಿಕಾಯಿ ದೀಪಾರಾಧನೆ ಮಾಡುವಾಗ ಬ್ರಾಹ್ಮೀ ಮೂಹೂರ್ತದಲ್ಲಿ ಅಥವಾ ಗೋಧೂಳಿ ಸಮಯದಲ್ಲಿ ದೀಪಾರಾಧನೆ ಮಾಡಿದರೆ ಬಹಳ ಶ್ರೇಷ್ಠ ಹಾಗೂ ನೆಲ್ಲಿಕಾಯಿ ದೀಪಾರಾಧನೆ ಮಾಡಿದರೆ ನಿಮ್ಮ ಮನೆಯಲ್ಲಿ ಇರುವ ನಕಾರಾತ್ಮಕ ಶಕ್ತಿ ಹೋಗಿ ಸಕಾರಾತ್ಮಕ ಶಕ್ತಿ ಉಂಟಾಗುತ್ತದೆ ಜೊತೆಗೆ ಸುಮಂಗಲಿ ಸೌಭಾಗ್ಯ ದೀರ್ಘವಾಗಿರುತ್ತದೆ.



ಒಂದು ತಟ್ಟೆಯಲ್ಲಿ ಅಕ್ಕಿ ಹಾಕಿ ಅದರ ಮೇಲೆ ನೆಲ್ಲಿ ಕಾಯಿ ದೀಪವನ್ನು ಇಡಬೇಕು ಶುದ್ಧವಾದ ತುಪ್ಪದಲ್ಲಿ ನೆನೆಸಿದ ಹೂಬತ್ತಿ ಇಡಬೇಕು ಯಾವಾಗಲೂ ಎರಡೂ ಬತ್ತಿಯನ್ನೇ ಇಡಬೇಕು. ಈ ರೀತಿ ಇಟ್ಟು ಗಂಧ, ಅರಿಶಿಣ, ಕುಂಕುಮ ಇಟ್ಟು ಹಾಗೂ ಹೂವಿನಿಂದ ಸಿಂಗರಿಸಿ ದೀಪ ಹಚ್ಚಬೇಕು. ದೀಪ ಹಚ್ಚಿ ನಿಮ್ಮ ಇಷ್ಟಾರ್ಥಗಳನ್ನು ಮನಸ್ಸಿನಲ್ಲಿ ಹೇಳಿಕೊಂಡು ದೇವರಿಗೆ ಆರತಿ ಮಾಡುವುದರಿಂದ ನಿಮ್ಮ ಇಷ್ಟಾರ್ಥ ಸಿದ್ಧಿ ಆಗುತ್ತದೆ. ಈ ರೀತಿಯಾಗಿ ತುಳಸಿ ಹಬ್ಬದ ಸಮಯದಲ್ಲಿ ನೆಲ್ಲಿಕಾಯಿಯಿಂದ ಆರತಿ ಮಾಡುವುದು ಇದೇ ರೀತಿ ದೀಪಾರಾಧನೆ ಮಾಡಿ ಶಿವಾಲಯದಲ್ಲಿ ಅಥವಾ ಪಾರ್ವತಿ ಸ್ವರೂಪ ಆದ ಕಾಳಿ ಮಾತೇ ದುರ್ಗಾಮಾತೆ ದೇವಸ್ಥಾನದಲ್ಲಿ ಈ ರೀತಿಯಾಗಿ ದೀಪಾರಾಧನೆ ಮಾಡಿ ಆರತಿ ಮಾಡಿದರೆ ನಿಮ್ಮ ಇಷ್ಟಾರ್ಥಗಳು ಈಡೇರುತ್ತದೆ.

**ಧಾತ್ರಿ ಹೋಮ :**

ಧಾತ್ರಿ ಹೋಮವನ್ನು ಸಾಮಾನ್ಯವಾಗಿ ಕಾರ್ತಿಕ ಶುದ್ಧ ತ್ರಯೋದಶಿ , ಚತುರ್ದಶಿ ಪೂರ್ಣಾವಧಿಯಲ್ಲಿ ಮತ್ತು ಕಾರ್ತಿಕ ಬಹುಳ ಪಂಚಮಿಯಂದು ಮಾಡಲಾಗುತ್ತದೆ. ಬೆಟ್ಟದ ನೆಲ್ಲಿಕಾಯಿಯನ್ನು ಸಾಮಾನ್ಯವಾಗಿ ಸಪ್ತಮಿ ಭಾನುವಾರ, ಮಂಗಳವಾರ, ಶುಕ್ರವಾರ ತಿನ್ನಬಾರದು ಎಂದು ಹೇಳಲಾಗುವುದು ಅಂತೆಯೇ ಸಪ್ತಮಿ, ಭಾನುವಾರ , ಮಂಗಳವಾರ, ಶುಕ್ರವಾರ ಧಾತ್ರಿಹೋಮ ಮತ್ತು ಪೂಜೆಯನ್ನು ಕೈಗೊಳ್ಳುವುದಿಲ್ಲ. ಧಾತ್ರಿ ಹೋಮದ ನಂತರವೇ ಹೊಸ ನೆಲ್ಲಿಕಾಯನ್ನು ಬಳಸಬಹುದು ಎಂದು ಹೇಳಲಾಗುವುದು.

ಧಾತ್ರಿ ಹೋಮಕ್ಕೆ ಪ್ರಮುಖವಾಗಿ ಧಾತ್ರಿ, ಶಾಂತಿ, ಕಾಂತಿ ಮಾಯಾ, ಪ್ರಕೃತಿ, ವಿಷ್ಣುಪತ್ನಿ, ಮಹಾಲಕ್ಷ್ಮಿ, ರಾಮಾ,ಕಮಲಾ ಇಂದಿರಾ, ಲೋಕಮಾತಾ, ಕಲ್ಯಾಣಿ, ಮಂಗಳಾಸಾವಿತ್ರ ಜಗದ್ಧಾತ್ರಿ, ಗಾಯತ್ರಿ, ಸುಧೃತಿ, ಅವ್ಯಕ್ತಾ, ವಿಶ್ವರೂಪ ಸೇರಿದಂತೆ ಒಟ್ಟು 21 ದೇವತೆಗಳನ್ನು ಆಹ್ವಾನಿಸಲಾಗುತ್ತದೆ.

ಧಾತ್ರಿ ಮರ ಹಾಗೂ ಪೂಜೆಯು ವಿಷ್ಣು ದೇವರಿಗೆ ಸಮರ್ಪಿತವಾಗಿರುತ್ತದೆ. ವಿಷ್ಣು ದೇವರನ್ನು ಧಾತ್ರಿಯ ರೂಪದಲ್ಲಿ ಪೂಜಿಸಿದರೆ ಪಾಪ ಕರ್ಮಗಳು ತೊಳೆದು ಹೋಗುತ್ತವೆ. ಈ ಹೋಮವನ್ನು ಮಾಡಿದರೆ ಅಶ್ವಮೇಧಯಾಗ ಮಾಡಿದಷ್ಟು ಪುಣ್ಯ ಪ್ರಾಪ್ತಿಯಾಗುವುದು. ಅಲ್ಲದೆ ಜೀವನದಲ್ಲಿ ಮುಂದೆ ಬರುವಂತಹ ಕಷ್ಟಗಳು ಕೂಡಾ ನಿವಾರಣೆಯಾಗುವುದು.

ಧಾತ್ರಿಹೋಮದ ನಂತರ ಕೈಗೊಳ್ಳುವ ಭೋಜನವು ಅತ್ಯಂತ ಪವಿತ್ರವಾದದ್ದು, ಧಾತ್ರಿ ಹವನದ ಭೋಜನ ಮಾಡಿದರೆ ನಮ್ಮ ಕುಂಡಲಿಯಲ್ಲಿದ್ದ ದೋಷಗಳು ನಿವಾರಣೆಯಾಗುತ್ತವೆ ನೂರಾರು ಮತ್ತು ಅನೇಕ ಬಾರಿ ಗಂಗಾ ಸ್ನಾನ ಮಾಡಿದಷ್ಟು ಪುಣ್ಯ ಫಲಪ್ರಾಪ್ತಿಯಾಗುವುದು.

**ಬೆಟ್ಟದ ನೆಲ್ಲಿಕಾಯಿ ಔಷಧೀಯ ಗುಣಗಳ ಆಗರ:**

ಬೆಟ್ಟದ ನೆಲ್ಲಿಕಾಯಿ ಆಧ್ಯಾತ್ಮಿಕ ಹಾಗೂ ಆಯುರ್ವೇದದ ಮಹತ್ವವನ್ನು ಹೊಂದಿದೆ. ಇಂತಹ ಬಹುಪಯೋಗಿ ನೆಲ್ಲಿಕಾಯಿಯನ್ನು ದಿನಕ್ಕೊಂದರಂತೆ ಸೇವಿಸಿದರೆ ಆರೋಗ್ಯ ಸುಧಾರಿಸುತ್ತೆ ಅಂತಾ ಸಂಶೋಧನೆಗಳಿಂದ ದೃಢಪಟ್ಟಿದೆ. ಕೆಲವು ಪ್ರಮುಖ ಖಾಯಿಲೆಗಳಿಗೆ ರಾಮಾಬಾಣ.

ಬೆಟ್ಟದ ನೆಲ್ಲಿಕಾಯಿಯಲ್ಲಿ ವಿಟಮಿನ್ ಸಿ ಹೇರಳವಾಗಿರುವುದರಿಂದ ತಲೆಕೂದಲಿನ ಆರೈಕೆಗೆ ಇದು ರಾಮಬಾಣ.

ಇದರಲ್ಲಿ ವಿಟಮಿನ್ - ಎ ಹಾಗೂ ಕ್ಯಾರೋಟಿನ್ ಇರುವುದರಿಂದ ಕಣ್ಣಿನ ಆರೈಕೆಗೆ ಸಹಕಾರಿ.

ದೇಹವು ಕ್ಯಾಲ್ಸಿಯಂ ಅಂಶವನ್ನು ಸಹಕಾರಿ ರೀತಿಯಲ್ಲಿ ಹೀರಿಕೊಳ್ಳಲು ಬೆಟ್ಟದ ನೆಲ್ಲಿಕಾಯಿ ಸಹಾಯ ಮಾಡುತ್ತದೆ. ಇದರಿಂದ ಎಲುಬುಗಳು, ಹಲ್ಲುಗಳು ಹಾಗೂ ಉಗುರುಗಳ ಆರೋಗ್ಯ ಉತ್ತಮವಾಗಿರುತ್ತೆ.

ಇದರಲ್ಲಿರುವ ಖನಿಜಗಳು ಹಾಗೂ ಜೀವಸತ್ವಗಳು ಮುಟ್ಟಿನ ಸೆಳೆತವನ್ನು ತಡೆಯುತ್ತೆ.

ಮಧುಮೇಹವನ್ನು ನಿಯಂತ್ರಣಗೊಳಿಸಲು ಬೆಟ್ಟದ ನೆಲ್ಲಿಕಾಯಿ ಸಹಕಾರಿ.

ಮೂತ್ರಪಿಂಡವನ್ನು ಆರೋಗ್ಯಕರವಾಗಿಡಲು ಹಾಗೂ ಗರ್ಭಾಶಯದ ಸೋಂಕುಗಳನ್ನು ತಡೆಗಟ್ಟುವಲ್ಲಿ ಸಹಕಾರಿಯಾಗುತ್ತೆ.

ಸ್ಟ್ರೋಕ್ ಮತ್ತು ಹೃದಯಾಘಾತದ ಸಾಧ್ಯತೆಯನ್ನು ಕಡಿಮೆಗೊಳಿಸುತ್ತೆ.

ಇದರಲ್ಲಿನ ಕಬ್ಬಿಣದ ಅಂಶ ಹೊಸ ಕೆಂಪು ರಕ್ತಕಣಗಳು ಹಾಗೂ ಬಿಳಿರಕ್ತ ಕಣಗಳ ಸೃಷ್ಟಿಗೆ ಉತ್ತೇಜನ ನೀಡುತ್ತೆ.

# ಶ್ರೀ ವೇದವೇದ್ಯ ತೀರ್ಥರು

-ಶ್ರೀಧರ ರಾಯಸಂ
98453 27129

ಭಾವಿ ಸಮೀರ ಶ್ರೀ ವಾದಿರಾಜ ಗುರುಸಾರ್ವಭೌಮರ ಅಪ್ತ ಶಿಷ್ಯರಾದ ಶ್ರೀ ವೇದವೇದ್ಯ ತೀರ್ಥರು ಉಡುಪಿ ಸಮೀಪ ಉಂಡಾರು ಚಿಕ್ಕ ಗ್ರಾಮದಲ್ಲಿ ಅವತರಿಸಿದರು. ಕ್ರಿ.ಶ.1530 ಇವರ ಅವತಾರವಾಯಿತೆಂದು ತಿಳಿದು ಬಂದಿದೆ. ಸಕಲ ಶಾಸ್ತ್ರ ಸಂಪನ್ನರು,ಆಗಮಜ್ಞರು ಆಗಿದ್ದ ಉಂಡಾರು ವಿಷ್ಣು ಮೂರ್ತಿ ದೇವಸ್ಥಾನದ ಅರ್ಚಕರಾಗಿದ್ದ ವಿಷ್ಣು ಮೂರ್ತಿ ಭಟ್ಟರಿಗೆ ವೇದ ವ್ಯಾಸ ಎಂಬ ಹೆಸರಿನ ಪುತ್ರರಾಗಿ ಅವತಾರ ಮಾಡಿದರು. ತಂದೆಯಲ್ಲಿಯೇ ಆರಂಭದಲ್ಲಿ ವಿದ್ಯಾಭ್ಯಾಸ ಮಾಡಿದರು. ಶ್ರೀ ವಾದಿರಾಜರ ದಿವ್ಯ ಉಪಸ್ಥಿತಿಯಲ್ಲಿ ಉಂಡಾರು ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಉಪನಯನವಾಯಿತು. ನಂತರ ಕ್ರಿ.ಶ. 1540 ರಲ್ಲಿ ಉಡುಪಿಯ ಅಷ್ಟಮಠಾಧೀಶರ ದಿವ್ಯ ಸಮ್ಮುಖದಲ್ಲಿ ವೇದವ್ಯಾಸ ಸನ್ಯಾಸಾಶ್ರಮ ಸ್ವೀಕರಿಸಿ, ವೇದವೇದ್ಯ ತೀರ್ಥ ರೆಂದು ನಾಮಾಂಕಿತರಾದರು. ಸಂಪೂರ್ಣ ಅಧ್ಯಯನ ಶ್ರೀವಾದಿ ರಾಜರಲ್ಲಿ ಪೂರೈಸಿ, ಪ್ರಖ್ಯಾತ ಯತಿಗಳಾದರು. ಶ್ರೀವಾದಿರಾಜರ ಸಂಚಾರ ಮಹಿಮೆಗೆ ಇವರು ಸಾಕ್ಷಿಯಾದರು. ಶ್ರೀವಾದಿರಾಜರ, ವೇದವೇದ್ಯರ ಮಹಿಮೆಗಳನ್ನು ಗಂಗಾತೀರ ನಿವಾಸಿಯಾದ ನಾರಾಯಣಾ ಚಾರ್ಯರು ತಾವು ರಚಿಸಿದ "ವಾದಿರಾಜ ಕವಚ ದಲ್ಲಿ" ಅಪಾರವಾಗಿ ಸ್ತುತಿಸಿದ್ದಾರೆ. ವೇದವೇದ್ಯರ ಅಪಾರ ವಿದ್ವತ್,ಅನನ್ಯ ಪ್ರತಿಭೆ,ಅನೇಕ ಅಲೌಕಿಕ ಮಹಿಮೆ, ವಾದಿರಾಜ ರಂತೆ ಕಂಡು ಆಶ್ಚರ್ಯಗೊಂಡು, ಧನ್ಯತೆ ಪಡೆದ ಪರಮ ಭಕ್ತರು.

ಶ್ರೀ ವಾದಿರಾಜರ ಎರಡನೇ ಪರ್ಯಾಯ ಮೂರನೇ ಪರ್ಯಾಯ ಉಡುಪಿಯಲ್ಲಿ ಜರುಗಿದಾಗ (ಕ್ರಿ.ಶ.1548 - 49) (ಕ್ರಿ.ಶ.1564-65) ಎಲ್ಲಾ ಪರ್ಯಾಯದ ನಿರ್ವಹಣೆ ವೇದ ವೇದ್ಯರು ನಿರ್ವಹಿಸಿದರು. ಆ ಸಮಯಗಳಲ್ಲಿ ಅಪರೋಕ್ಷ ಜ್ಞಾನಿಗಳಾದ ಪುರಂದರದಾಸರು, ಕನಕದಾಸರು, ವಿಜಯೀಂದ್ರ ತೀರ್ಥರ ಸಮಾಗಮ ಕಂಡ ಮಹಿಮಾನ್ವಿತರು ವೇದವೇದ್ಯ ತೀರ್ಥರು. ಗುರುಗಳ ಮಾರ್ಗದರ್ಶನದಂತೆ, ಶಿರಸಿ ಸಮೀಪ ಸೋದಾ ಕ್ಷೇತ್ರ ನಿರ್ಮಾಣ, ತ್ರಿವಿಕ್ರಮ ದೇವಾಲಯದ ನಿರ್ಮಾ ಣದ ಉಸ್ತುವಾರಿ ವೇದವೇದ್ಯರು ಮಾಡಿದ್ದು ಇತಿಹಾಸ ವಾಯಿತು.

ಕ್ರಿ.ಶ. 1581 -1582 ರಲ್ಲಿ ಉಡುಪಿಯ ಶ್ರೀಕೃಷ್ಣನ ಸನ್ನಿಧಿ ಯಲ್ಲಿ ಹಾಗೂ ಸೋದೆಯಲ್ಲಿ ಗುರುಗಳಿಗೆ ಪ್ರಥಮ ಸಹಾಯ ಕರಾಗಿ ಎಲ್ಲಾ ಉತ್ಸವಕ್ಕೆ ನೆರವಾದರು. ಶ್ರೀವಾದಿರಾಜರ ಸಶರೀರ ಬೃಂದಾವನ ಪ್ರವೇಶದ, ನಂತರವೂ ಸ್ವತಂತ್ರವಾಗಿ ನಿರ್ವಹಿಸಿ, ಸಮಸ್ತ ಉತ್ಸವಗಳಿಗೆ ಕಾರಣೀಭೂತರಾದರು. ಕ್ರಿ.ಶ. 1585ರಲ್ಲಿ ಯೋಗ್ಯವಟುವಿಗೆ ವೇದವೇದ್ಯರು ಆಶ್ರಮ ನೀಡಿ" ವಿದ್ಯಾನಿಧಿ ತೀರ್ಥರೆಂದು" ನಾಮಾಕರಣ ಮಾಡಿದರು. 1585 ರಲ್ಲಿ ಪೆನುಗೊಂಡದಲ್ಲಿ ಶ್ರೀವಾದಿರಾಜರಿಗೆ ವೀರ ವೆಂಕಟಪತಿರಾಜ ಸರ್ವಜ್ಞಸೂಚಕ" ಪ್ರಸಂಗಾಭರಣ ತೀರ್ಥ"ಬಿರುದು ನೀಡಿ ಗೌರವಿಸಿದ ಸಂದರ್ಭಕ್ಕೆ ವೇದವೇದ್ಯರು ಸಾಕ್ಷಿಯಾದರು. 1593ರಲ್ಲಿ ವಿದ್ಯಾನಿಧಿ ತೀರ್ಥರು, ತಮ್ಮ ಶಿಷ್ಯರಿಗೆ ಸನ್ಯಾಸಾಶ್ರಮ ನೀಡಿ, ಅವರಿಗೆ" ವೇದನಿಧಿ ತೀರ್ಥ ರೆಂದು... ನಾಮಕರಣ ಮಾಡಿದರು.

ಕ್ರಿ.ಶ.1601ರಲ್ಲಿ ಶ್ರೀ ವಾದಿರಾಜರು ಸಶರೀರ ಬೃಂದಾ ವನ ಪ್ರವೇಶ ಮಾಡಿದ ಸಂದರ್ಭದಲ್ಲಿ ಪಂಚ ತೇಜೋರೂಪ ದರ್ಶನ ಮಾಡಿಸಿ, ತಮ್ಮ ಕಾವಿ ಶಾಟಿ, ಸುವರ್ಣಪಾದುಕೆಗಳನ್ನು ವೇದವೇದ್ಯರಿಗೆ ಮೇಲಿನಿಂದ ಕೈಯಲ್ಲಿ ನೀಡಿದ್ದು ಅಪೂರ್ವ ದೃಶ್ಯವಾಗಿತ್ತು.ನಂತರ ಎರಡು ಸಲ ವೇದ ವೇದ್ಯರಿಗೆ ವಾದಿ ರಾಜರು ದರ್ಶನ ಸೌಭಾಗ್ಯ ನೀಡಿದರು. ವಾದಿರಾಜರು ತಮ್ಮ ಅಂತರಂಗದ ಭಕ್ತನಾದ ಲಕ್ಷ್ಮೀಪತಿಗೆ ಸ್ವಪ್ನದಲ್ಲಿ ಮಂತ್ರ ತುಲ್ಯ ಅಖ್ಯಾನ ಉಪದೇಶ ಮಾಡಿದ್ದು, ಆ ಉಪದೇಶ ಲಕ್ಷ್ಮೀಪತಿ ವೇದ 'ನಿಧಿ ತೀರ್ಥರ ಮುಂದೆ ಉಚ್ಚರಿ ಸಿದ್ದು,ತದನಂತರ ಶಿಷ್ಯ ರಾಮ ಚಂದ್ರಾಚಾರ್ಯರು ಲೇಖನ ಮಾಡಿದ್ದು ಹಿರಿದಾದ ದಾಖಲೆ ಯಾಯಿತು.

ಸ್ವತಂತ್ರವಾಗಿ ವೇದವೇದ್ಯರು ಎರಡನೇ ತಮ್ಮ ಪರ್ಯಾಯ (1612-1613) ವೇದನಿಧಿ ತೀರ್ಥರ ಚಿಕ್ಕ ಪಟ್ಟದಲ್ಲಿ ನೆರವೇರಿಸಿದರು. ಶ್ರೀಕೃಷ್ಣನ ಗರ್ಭಗುಡಿ ಶಿಲಾಮಯ ಜೀರ್ಣೋದ್ಧಾರ, ಶ್ರೀಕೃಷ್ಣನ ಪುನಃ ಪ್ರತಿಷ್ಠಾ ಒಂದು ಅಕ್ಷಾ ವರ್ತಿ ಭಗವದ್ಗೀತಾ ಪಾರಾಯಣ ಮಾಡಿಸಿದರು. ಪುಸ್ತಕ ನಿರ ಪೇಕ್ಷ ಸಮಗ್ರ ಮಹಾಭಾರತ ಪ್ರವಚನ ರೂಪೇಣ ಅನುವಾದ ಮಾಡಿದರು. ತಂತ್ರಸಾರ ಟೀಕಾ, ಶ್ರೀವಾದಿರಾಜರ ಸ್ತುತಿ ಪ್ರಕ

ಟಿತ ಕೃತಿಗಳನ್ನು ರಚಿಸಿದರು. ತಂತ್ರಸಾರ ಟೀಕಾ ಈಗ ಉಪಲಬ್ಧವಿಲ್ಲ.

ಶ್ರೀ ವಾದಿರಾಜರ ಸ್ವಪ್ನೋಪದೇಶದ ಅಖ್ಯಾನ ವನ್ನು ಸಮಗ್ರವಾಗಿ ವೇದವೇದ್ಯರ ಅನುಗ್ರಹದಿಂದ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. 86 ವರ್ಷ ಜೀವಿತ ಅವಧಿಯಲ್ಲಿ ಗವ್ಯ ಪದಸ್ಥ ಋಜುಗಳಾಗಿ, ಶ್ರೀವಾದಿರಾಜರ ಅಲೌಕಿಕ ಋಜುಮಹಿಮೆ ಕಂಡ ಯತಿಗಳು ಶ್ರೀವಾದಿರಾಜರು ಬೃಂದಾವನ ಪ್ರವೇಶ ಪಡೆದ ತಕ್ಷಣ, ಋಜುತ್ವಾ ಘೋಷಕ ಪರಾಕು ಹೇಳಿದ ಪರಮಾನ್ವಿತರು!! ವಾದಿರಾಜರ ವೃಂದಾವನದ ಸಮೀಪದಲ್ಲಿ ಹನುಮ, ಭೀಮ, ಮಧ್ವ ಸಮಯೋಚಿತ ಪೂಜೆ ಪ್ರಾರಂಭಿಸಿ ಮುಂದುವರೆಸಿದರು.

**ಇವರ ಮಹಿಮೆಗಳು**

ದರ್ಶನ ಮಾತ್ರದಿಂದ ಹೆಡೆಯೆತ್ತಿದ್ದ ಸರ್ಪ ಅಪಸರಣನಾಗಿದ್ದು ಗೋದಾವರಿಯಲ್ಲಿ ಅಭಿಮಾನಿ ದೇವತೆ ಹಾಗೂ ನಿಯಾಮಕ ಭಗವದ್ರೂಪ ದರ್ಶನ ವಾದಿರಾಜರಂತೆ ವಿಷ್ಣುತೀರ್ಥರ ದರ್ಶನ ಶ್ರೀರಂಗದಲ್ಲಿ ದೇವ ಮಹಿಮೆ ತೋರಿಸಿದ್ದು,ಧವಳ ಗಂಗಾದಲ್ಲಿ ತೀರ್ಥಾಭಿಮಾನಿಗಳ ಹಾಗೂ ಹಯಗ್ರೀವಾತ್ಮಕ ಧನ್ವಂತರಿ ದರ್ಶನ, ಜನ್ಮಾರಭ್ಯ ಮೂಕನಿಗೆ ಹಯಗ್ರೀವ ತೀರ್ಥ ಪ್ರಾಶನ ಮಾಡಿಸಿ, ಅವನಿಗೆ ಮಾತು ಬರಿಸಿದ್ದು, ಪರಿಚಾರಕನಿಗೆ ಕೌಟುಂಬಿಕ ಸ್ವಾಸ್ಥ್ಯ ಅನುಗ್ರಹಿಸಿದ್ದು ಮುಂತಾದವು ಇವರ ಅಲೌಕಿಕ ಮಹಿಮೆಗಳು ಇತಿಹಾಸ ವಾಯಿತು.

ಕ್ರಿ.ಶ. 1616 ರಲ್ಲಿ ಕಾರ್ತಿಕ ಬಹುಳ ತ್ರಯೋದಶಿ, ಸೋದೆಯ ಶ್ರೀ ವಾದಿರಾಜರ ಮೂಲ ವೃಂದಾವನದ ಪಕ್ಕದಲ್ಲಿ ವೇದವೇದ್ಯರು ವೃಂದಾವನಸ್ಥರಾದರು. ಪ್ರತಿ ವರ್ಷ ಸೋದೆಯಲ್ಲಿ ಉಡುಪಿಯಲ್ಲಿ ಮತ್ತಿತರ ಸ್ಥಳದಲ್ಲಿ ಇವರ ಆರಾಧನೆ ಜರುಗುತ್ತದೆ.

ವಿಮಲ ಸಕಲಗಾತ್ರಂ ಶುದ್ಧ ಕೈವಲ್ಯ ಪಾತ್ರಂ
ಶುಭ ಗುಣ ಗಣ ಸಾಂದ್ರಂ ಭೂಮಿ ಭೂಷಾಮಣೇಂದ್ರಮ್!
ವಿದಿತ ಸಕಲ ಶಾಸ್ತ್ರಂ ಸಾಧುಚಿತ್ತಂ ಯತೀಂದ್ರಂ
ತುರುಗವದನಭಾಜಂ ನೌಮಿ ಸದ್ವೇದವೇದ್ಯಮ್!!!



# ಶ್ರೀರಾಮ ಮೆಚ್ಚಿದ ಅಳಿಲು ಸೇವೆ

ಸೇತುವೆ ನಿರ್ಮಾಣ ಕಾರ್ಯದಲ್ಲಿ ವಾನರಸೇನೆ ತೊಡಗಿದ್ದ ಅಲ್ಲಿ ತನ್ನ ಶಕ್ತ್ಯಾನುಸಾರ ಶ್ರೀರಾಮಕಾರ್ಯದಲ್ಲಿ ಪಾಲ್ಗೊಂಡಿದ್ದ ಪುಟ್ಟ ಅಳಿಲು ಮಾತ್ರ ಯಾರ ಗಮನಕ್ಕೂ ಬಂದಿರಲಿಲ್ಲ, ಅಳಿಲು ಸಣ್ಣ ಸಣ್ಣ ಕಲ್ಲುಗಳನ್ನು ತೆಗೆದುಕೊಂಡು ಹೋಗಿ ಅದು ಎಲ್ಲಿ ಸಾಧ್ಯವೋ ಅಲ್ಲಿ ಕೊಂಡು ಹೋಗಿ ಇಡುತ್ತಲಿತ್ತು.

ಈ ಮೂಲಕ ಅದು ಕೂಡ ಸೇತುವೆ ನಿರ್ಮಾಣಕ್ಕೆ ತನ್ನ ಸೇವೆ ನೀಡಲು ಬಯಸಿತ್ತು. ಈ ಪ್ರಾಣಿಯ ಗಾತ್ರವು ತುಂಬಾ ಸಣ್ಣದಾಗಿದ್ದರೂ ಸೇತುವೆ ನಿರ್ಮಾಣದ ಕಾರ್ಯ ಮತ್ತು ಸೇನೆಯಲ್ಲಿದ್ದ ಇತರರ ಸೇವೆಗೆ ಇದನ್ನು ಹೋಲಿಸಿದರೆ ತುಂಬಾ ಸಣ್ಣದು ಎಂದು ಅನಿಸಿದರೂ ಈ ಸೇವೆಯನ್ನು ಕಡೆಗಣಿಸುವಂತಿಲ್ಲ. ಆ ಅಳಿಲು ತನ್ನಷ್ಟಕ್ಕೆ ತನ್ನ ಸೇವೆ ಮಾಡುತ್ತಲಿತ್ತು. ಸಣ್ಣ ಅಳಿಲು ತನ್ನ ಸೇವೆ ನೀಡುತ್ತಿರುವುದನ್ನು ನೋಡಿದ ಕಪಿಯೊಂದು ಅದರ ಬಗ್ಗೆ ತಮಾಷೆ ಮಾಡಿತು. ಅಳಿಲನ್ನು ನೋಡಿದ ಕಪಿಯು, ನಿನ್ನ ಸೇವೆಯನ್ನು ಯಾರೂ ಗಮನಿಸದೆ ಇರುವ ಕಾರಣದಿಂದ ಈ ಕಾರ್ಯವನ್ನು ನಿಲ್ಲಿಸಿ ಬಿಡು ಮತ್ತು ನೀವು ಕೆಲಸ ಮಾಡದೆ ಇದ್ದರೂ ಅದರಿಂದ ಯಾವುದೇ ತೊಂದರೆ ಆಗದು ಎಂದು ಕಪಿಯು ಗೇಲಿ ಮಾಡಿ, ಕೆಲಸ ನಿಲ್ಲಿಸಿ ಹೋಗಿ ವಿಶ್ರಾಂತಿ ಪಡೆಯುವಂತೆ ಅದು ಸೂಚಿಸುತ್ತದೆ.

ಅಳಿಲು ತನ್ನನ್ನು ಸಮರ್ಥಿಸಿಕೊಂಡ ವೇಳೆ ಬೇರೆ ಕಪಿಗಳು ಕೂಡ ಅದರತ್ತ ನೋಡಿ ಗೇಲಿ ಮಾಡಲು ಆರಂಭಿಸಿದರು. ತನ್ನನ್ನು ಗೇಲಿ ಮಾಡಿದ ಕಾರಣ ನೊಂದ ಅಳಿಲು ಶ್ರೀರಾಮನ ಬಳಿಗೆ ಹೋಯಿತು. ಸೇನೆಯಲ್ಲಿ ಇರುವವರ ಬಗ್ಗೆ ದೂರು ನೀಡಿದ ಅಳಿಲು, ಅವರೆಲ್ಲರಿಗೂ ಶಿಕ್ಷೆ ನೀಡುವಂತೆ ಕೇಳಿಕೊಂಡಿತು.ಸೇತುವೆ ಬಳಿ ಸೇನೆಯ ಎಲ್ಲರೂ ಜತೆ ಸೇರುವಂತೆ ಶ್ರೀರಾಮನು ಸೂಚಿಸುತ್ತಾನೆ. ಎಲ್ಲರು ಅಲ್ಲಿ ಬಂದ ಸೇರಿದ ವೇಳೆ ಶ್ರೀರಾಮನು ಬಂದು ಎರಡು ಕಲ್ಲುಗಳು ಜಾರಿ ಬಿದ್ದಿರುವುದರತ್ತ ಬೆಟ್ಟು ಮಾಡುವನು. ಯಾಕೆಂದರೆ ಇವು ಗಳನ್ನು ಸಣ್ಣ ಸಣ್ಣ ಕಲ್ಲುಗಳ ನೆರವಿಲ್ಲದೆ ನಿಲ್ಲಿಸಲಾಗಿತ್ತು. ಸಣ್ಣ ಸಣ್ಣ ಕಲ್ಲುಗಳನ್ನು ಅಳಿಲು ಅಲ್ಲಿಗೆ ತಂದು ಹಾಕಿದೆ ಮತ್ತು ಅದು ಜೋಡಣೆಗೆ ನೆರವಾಗಿದೆ ಎಂದು ರಾಮನು ಹೇಳುವನು.

ಸಣ್ಣ ಸಣ್ಣ ಕಲ್ಲುಗಳು ದೊಡ್ಡ ಕಲ್ಲುಗಳ ಜೋಡಣೆಯಲ್ಲಿ ಹೇಗೆ ನೆರವಾಗಿದೆ ಎಂದು ನೋಡಿ ಎಲ್ಲರಿಗೂ ಅಚ್ಚರಿಯಾಗಿದೆ. ಯಾವುದೇ ಕಾರ್ಯವು ಸಣ್ಣದು ಅಥವಾ ದೊಡ್ಡದು ಎಂದು ಇರುವುದಿಲ್ಲವೆಂದು ಅವರು ಮನವರಿಕೆ ಮಾಡಿ ಕೊಂಡರು. ಪ್ರಾಮಾಣಿಕ ಉದ್ದೇಶದಿಂದ ಸದುದ್ದೇಶದಿಂದ ಮಾಡಿರುವಂತಹ ಯಾವುದೇ ಕಾರ್ಯವು ಒಳ್ಳೆಯದಾಗಿರುವುದು. ಅಳಿಲಿನ ಬಗ್ಗೆ ಗೇಲಿ ಮಾಡಿದ ವರೆಲ್ಲರೂ ತುಂಬಾ ಮುಜುಗರಕ್ಕೆ ಒಳಗಾದರು ಮತ್ತು ಕ್ಷಮೆ ಕೇಳಿದರು.

ಅಳಿಲಿನ ಪ್ರಶಂಸೆ ಮಾಡಲು ಶ್ರೀರಾಮನು ಅದರ ಬೆನ್ನನ್ನು ಸವರುತ್ತಾನೆ. ಇದರಿಂದ ಅಳಿಲಿನ ಬೆನ್ನ ಮೇಲೆ ಮೂರು ಬೆರಳಿನ ಗುರುತು ಈಗಲೂ ಇದೆ ಎಂದು ಹೇಳಲಾಗುತ್ತದೆ. ಅಳಿಲು ಸೇವೆ ಎನ್ನುವುದು ಚಿಕ್ಕಕಾರ್ಯವಿದ್ದರೂ ಅದು ಪ್ರಶಂಸೆಗೋಸ್ಕರ ಮಾಡಿಲ್ಲ, ಅಂತಹ ನಿಸ್ವಾರ್ಥ ಸೇವೆಯನ್ನು ಹೀಯಾಳಿಸುವ ಮಟ್ಟಕ್ಕೆ ಹೋಗಬಾರದು ಎಂದು ಶ್ರೀರಾಮ ಸೂಚ್ಯವಾಗಿ ಹೇಳಿದ್ದಾನೆ.



# ಉತ್ಥಾನ ದ್ವಾದಶಿ

ಡಾ॥ ಲೀಲಾಬಸವರಾಜ್
87628 35104

ದೀಪಾವಳಿ ಕಾರ್ತಿಕಮಾಸದಲ್ಲಿ ಶುಕ್ಲ ಪಕ್ಷದ 12 ನೇ ದಿನ ಅಂದರೆ ದ್ವಾದಶಿಯೆಂದು "ಉತ್ಥಾನದ್ವಾದಶಿ'' ಹಬ್ಬವನ್ನು ಆಚರಿಸಲಾಗುತ್ತದೆ. ಈ ಪವಿತ್ರ ದಿನದಂದು ವಿಷ್ಣು ತುಲಸಿಯರ ವಿವಾಹ ಮಾಡುವುದು ಪಾರಂಪರ್ಯವಾಗಿ ಆಚರಿಸಲಾಗುತ್ತದೆ.

ತುಳಸಿ ಗಿಡದೊಂದಿಗೆ ಬೆಟ್ಟದ ನೆಲ್ಲಿಕಾಯಿ ತುಂಬಿರುವ,ಗಿಡದ ಕೊಂಬೆಯನ್ನು ನೆಟ್ಟು ಪೂಜಿಸಲಾಗುತ್ತದೆ. ದೀಪಗಳಿಂದ ತುಳಸಿ ಬೃಂದಾವನವನ್ನು ಅಲಂಕರಿಸಲಾಗುವುದು. ಮಣ್ಣಿನ ಹಣತೆ, ನೆಲ್ಲಿಕಾಯಿಯ ದೀಪ ಹಚ್ಚುವುದನ್ನು ನೋಡುವುದೇ ಸಂತೋಷ ತುಲಸಿಯ ಜೊತೆಯಲ್ಲಿ ಭಗವಾನ್ ಶ್ರೀ ಕೃಷ್ಣನ ಮೂರ್ತಿಯನ್ನು ಇಟ್ಟು ಪೂಜಿಸಲಾಗುವುದು. ಅಂದು ದೀಪಾವಳಿ ಹಬ್ಬದಂತೆ ಪಟಾಕಿ-ಬಿರುಸು ಬಾಣ ಹಚ್ಚಿ ಸಂತೋಷಿಸುತ್ತಾರೆ.ಇದನ್ನು ಕಿರು ದೀಪಾವಳಿ ಎಂದು ಹೇಳುತ್ತಾರೆ.ಅಂದು ನಾಡಿನಾದ್ಯಂತದ ದೇವಾಲಯಗಳಲ್ಲಿ ದೀಪೋತ್ಸವ ನಡೆಸಲಾಗುತ್ತದೆ. ಉತ್ಥಾನ ದ್ವಾದಶಿಯನ್ನು ಕ್ಷೀರಾಬ್ಧಿ ದ್ವಾದಶಿ, ಚಿಲೂಕು ದ್ವಾದಶಿ, ಯೋಗೇಶ್ವರ ದ್ವಾದಶಿ ಎಂದು ಕರೆಯುತ್ತಾರೆ. ಕಾರ್ತೀಕ ಮಾಸದಲ್ಲಿ ವಿಶೇಷವಾಗಿ ಶಿವನನ್ನು ವಿಷ್ಣುವನ್ನು ಪೂಜಿಸಲಾಗುವುದು.

ಪುರಾಣಗಳ ಪ್ರಕಾರ ಭಗವಾನ್ ವಿಷ್ಣು ಆಷಾಢದ ಮಾಸದಿಂದ 4 ತಿಂಗಳ ಕಾಲ ಸ್ವಾಮಿ ಯೋಗನಿದ್ರೆಯಲ್ಲಿ ಇರುತ್ತಾನೆ. ಕ್ಷೀರಾಬ್ಧಿ ಏಕಾದಶಿಯಂದು ಎಚ್ಚರವಾಗುತ್ತಾನೆ. ದ್ವಾದಶಿಗೆ ಒಂದು ದಿನ ಮುಂಚಿತವಾಗಿ ಉತ್ತಿಷ್ಠನಾಗುತ್ತಾನೆ. ಪುರಾಣಗಳಲ್ಲಿ ಉಲ್ಲೇಖವಿದೆ. ಈ ದ್ವಾದಶಿಯಲ್ಲಿ ಕ್ಷೀರಾಬ್ಧಿ ಶಯನ ಮೂರ್ತಿ , ಶೇಷಶಾಯಿಯ ದ್ವಾದಶಿ ಎಂದು ಪ್ರಖ್ಯಾತವಾಗಿದೆ. ತುಲಶೀ ಸಹಿತ ಧಾತ್ರೀ, ದಾಮೋದರ ಲಕ್ಷ್ಮೀ ನಾರಾಯಣನ ಪ್ರೀತ್ಯರ್ಥವಾಗಿ ಈ ವ್ರತವನ್ನು ಆಚರಿಸಲಾಗುತ್ತದೆ. ಇದರ ದ್ಯೋತಕವಾಗಿ ಅಂದು ಸುಪ್ರಭಾತ ಸಮಯದಲ್ಲಿ ಕಾಯಿ ಸಹಿತವಾದ ಧಾತ್ರಿಯನ್ನು ನೆಟ್ಟು ಅಲ್ಲಿ ಲಕ್ಷ್ಮೀನಾರಾಯಣರನ್ನು ಅವಾಹನೆ ಮಾಡಿ ಪೂಜಿಸಲಾಗುವುದು. ಅಂದು ರಾತ್ರಿ ಪರಮಾತ್ಮನಿಗೆ ಕ್ಷೀರಾನ್ನ ನೈವೇದ್ಯ ಮಾಡಿ ಪ್ರಸಾದವಾಗಿ ಸ್ವೀಕರಿಸಿ ನಿರಾಹಾರವನ್ನು ಅಂತ್ಯಗೊಳಿಸಲಾಗುವುದು. ಬಹಳ ನೇಮ ನಿಯಮದಿಂದ ಪೂಜೆ ಮಾಡುವ ಹಿರಿಯರು, ಚಾತುರ್ಮಾಸ ಮಾಡುವವರು ಅಂದು ವ್ರತವನ್ನು ಪೂರ್ಣಗೊಳಿಸುತ್ತಾರೆ ಹಾಗೆಯೇ ಅಂದಿನಿಂದ ನೆಲ್ಲಿಕಾಯಿ ಉಪಯೋಗಿಸುತ್ತಾರೆ. ಕ್ಷೀರಸಾಗರದಲ್ಲಿ ಪಡವಡಿಸಿರುವ ಶ್ರೀ ಚಕ್ರಾಂಕಿತ ವಾಸುದೇವ ದ್ವಾದಶಿಯೆಂದು ತುಲಸಿ ಮಂದಿರದಲ್ಲಿ ಯೋಗನಿದ್ರೆ ಇಂದ ಲಕ್ಷ್ಮೀ ಅಂಶಗಳಾದ ತುಳಸಿ ಸಮೇತನಾಗಿ ಲಕ್ಷ್ಮೀನಾರಾಯಣನ ಸ್ವರೂಪನಾಗಿ ಏಳುವನು ಎಂಬುದರ ಸಂಕೇತವಾಗಿ ಈ ವಿಶೇಷ ಪೂಜೆ. ಅಂದು ಭಕ್ತಿಯಿಂದ ಮಾಡುವ ಪೂಜೆಯಿಂದ ಸಕಲ ಪಾಪಗಳೂ ಪರಿಹಾರ ಆಗುವುದು ಎಂಬುದಾಗಿ ತುಳಸಿ ವ್ರತ ಮಹಾತ್ಮೆಯಲ್ಲಿ ಉಲ್ಲೇಖವಿದೆ ಎಂಬುದು ವಿದ್ವಾಂಸರ ಹೇಳಿಕೆ. "ಉತ್ಥಾನ'' ಈ ಶಬ್ದ ನಮ್ಮದೇವ ಭಾಷೆ ಆದ ಸಂಸ್ಕೃತದಲ್ಲಿ ಹೆಚ್ಚು ಬಳಸಲಾಗಿದೆ. ಈಗ ಆ ಪದ ಕನ್ನಡದಲ್ಲಿಯೂ ಬಳಸುತ್ತೇವೆ. "ಉತ್ಥಾನ'' ಎಂದರೆ ಮೇಲಕ್ಕೆ ಏಳುವುದು, ಎದ್ದು ನಿಲ್ಲುವುದು ಎಂಬ ಅರ್ಥವಿದೆ. ದೇವರ ವಿಚಾರ ಮಾಡುತ್ತಿರುವುದರಿಂದ ಯೋಗನಿದ್ರೆಯಲ್ಲಿ ಇರುವ ಜಗದ್ದೋದಾರನನ್ನು ಎಬ್ಬಿಸುವುದು. ಎಲ್ಲ ದೇವರಿಗೂ ಸಾಮಾನ್ಯವಾಗಿ ದೇವಾಲಯಗಳಲ್ಲಿ ಬೆಳಗಿನ ಜಾವ , ಸೂರ್ಯನ ಮೊದಲ ಕಿರಣ ಬಾನಲ್ಲಿ ಮೂಡುತ್ತಿರುವಂತೆಯೇ ಆಯಾ ದೇವರ ಸುಪ್ರಭಾತವನ್ನು ಹೇಳಲಾಗುವುದು ಸಪ್ತಗಿರಿವಾಸನ ತಿರುಪತಿ ದೇವಸ್ಥಾನದಲ್ಲಿ ಸ್ವಾಮಿಗೆ ರಾತ್ರಿ ಶಯನೋತ್ಸವ ಸೇವೆ, ಸುಪ್ರಭಾತ ಸಮಯದಲ್ಲಿ ಸುಪ್ರಭಾತ ಸೇವೆ ಬಹಳ ವಿಶೇಷ.

ಧರ್ಮಧ್ವಜ - ಮಾಧವಿಯವರ ಸುಪುತ್ರಿ "ತುಳಸಿ'' ಯೌವ್ವನಕ್ಕೆ ಅಡಿಯಿಟ್ಟು ತನ್ನ ಪತಿಯನ್ನು ತಾನೇ ಅರಸುತ್ತ ಎಲ್ಲ ಶ್ರೀ ಕ್ಷೇತ್ರಗಳಿಗೆ ಹೋಗಿ ಅಲ್ಲಿ ಧ್ಯಾನ ಮಾಡುತ್ತಿದ್ದಳು. ಹೀಗೆ ಕ್ಷೇತ್ರ ದರ್ಶನ ಮಾಡುತ್ತಾ ಕಾಶಿಕ್ಷೇತ್ರಕ್ಕೆ ಬಂದಳು . ಅಲ್ಲಿ ಕಾನನದ ಮಧ್ಯದಲ್ಲಿ ತನ್ನ ಧ್ಯಾನಕ್ಕಾಗಿ ಪ್ರಶಾಂತ ವಾತಾವರಣವನ್ನು ಅರಸುತ್ತ ಹೊರಟಳು. ಅಲ್ಲಿ ಸುಂದರನೂ, ಶಾಂತಮೂರ್ತಿಯೂ ಆದ ಉಮಾಪುತ್ರ ಶ್ರೀ ಗಣೇಶ ಧ್ಯಾನಾಸಕ್ತನಾಗಿರುವುದನ್ನು ಕಂಡಳು.ಹಾಗೆಯೇ ಮೂಕ ವಿಸ್ಮಿತಳಾಗಿ, ವಿನಾಯಕನನ್ನು ತದೇಕ ಚಿತ್ತಳಾಗಿ ನೋಡುತ್ತಾ ನಿಂತಳು. ಅವನ ಹತ್ತಿರಕ್ಕೆ ಹೋಗಿ ನಿಂತಳು. ತಾನು ಧರಿಸಿದ್ದ ಕಂಕಣ - ಕೇಯೂರವನ್ನು ಸದ್ದು ಮಾಡಿದಳು. ಆದರೂ ವಿದ್ಯಾ ಪ್ರದಾಯಕನು ತನ್ನ ಧ್ಯಾನದಿಂದ ವಿಚಲಿತನಾಗಲಿಲ್ಲ.

ತುಳಸಿ ತನ್ನ ಬಾಲಿಶಃ ಸಹಜವಾದ ಹುಡುಗುತನದ ಚೇಷ್ಠೆಗಳನ್ನು ಮಾಡುತ್ತಾ ಗಣನಾಥನ ಕಿವಿಯ ಬಳಿ, ನಿನಗೆ ಏಕೆ ಆನೆಮುಖ? ಏಕೆ ನೀನು ಏಕದಂತನಾಗಿರುವೆ? ನೀನು ಯಾಕೆ ಲಂಬೋಧರ? ನಿನ್ನ ಕಿವಿಗಳು ಏಕೆ ಮೊರದಗಲ ಎಂದು ಒಂದೇ ಸಮನೆ ವಟವಟ ಮಾತಾಡುತ್ತಲೇ ಇದ್ದಳು. ಆದರೂ ಶಿಪಿವಿಷ್ಟ ಗಣಪತಿ ಧ್ಯಾನದಿಂದ ವಿಮುಖನಾಗಲಿಲ್ಲ. ಕಡೆಗೆ ತುಳಸಿ ಬೊಗಸೆಯಲ್ಲಿ ಜಲತಂದು ಅವನ ಮೇಲೆ ಪ್ರೋಕ್ಷಣೆ ಮಾಡಿದಳು. ಜಲಸ್ಪರ್ಶದಿಂದ ಉಚ್ಚಿಷ್ಟ ಗಣಪ ಅವನ ಧ್ಯಾನಕ್ಕೆ ಭಂಗವಾಗಲು ನಿಧಾನವಾಗಿ ಕಣ್ಣು ತೆರೆದು ಶಾಂತ ಚಿತ್ತದಿಂದಲೇ ಎದುರಿಗಿದ್ದ ತುಳಸಿಗೆ ನೀನು ಮಾಡಿದ್ದು ಒಳ್ಳೆಯದಲ್ಲ ತಾಯಿ? ಯಾವ ಕಾರಣಕ್ಕಾಗಿ ಹೀಗೆ ನನ್ನ ಧ್ಯಾನಕ್ಕೆ ತೊಂದರೆ ಮಾಡದೆ ಹೇಳು ತಾಯಿ ? ಎಂದು ತುಳಸಿಯನ್ನು ಮಾತೃಸ್ಥಾನದಲ್ಲಿ ಕಂಡನು.

ಆದರೆ ತುಳಸಿಯ ಮನಸ್ಥಿತಿ ಬೇರೆಯೇ ಆಗಿತ್ತು. ಎದುರಿಗಿದ್ದ ಸುಮುಖನನ್ನು "ಶಂಕರಬಾಲ, ಗಣೇಶಪ್ರಭು ನಾನು ಧರ್ಮಧ್ವಜನ ಮಗಳು ತುಳಸಿ. ಪತಿಯನ್ನು ಅರಸುತ್ತ ಇಲ್ಲಗೆ ಬಂದಿರುವೆ. ದಯಮಾಡಿ ನೀನು ನನ್ನ ಪತಿಯಾಗು ಪ್ರಭು'' ಎಂದು ಬೇಡಿದಳು.

ತುಳಸಿಯ ಮಾತು ಕೇಳಿ '' ಮಾತೆ, ನಾನು ನಿನ್ನನ್ನು ಮಾತೆ ಎಂದು ತಾಯಿಯ ಸ್ಥಾನಕೊಟ್ಟೆ . ನನಗೆ ಮದುವೆ ಆಗುವ ಇಚ್ಛೆಯಿಲ್ಲ, ಇದು ನಿನಗೆ ಶೋಭಿಸದು, ಈ ಮಾತಿನಿಂದ ಕುಪಿತಳಾದ ತುಳಸಿ ಕ್ರೋಧದಿಂದ ಸರ್ವಾತ್ಮಕವಾದ ಗೌರಿಪುತ್ರನಿಗೆ ಶಾಪವಿತ್ತಳು.

ಈ ಶಾಪವನ್ನು ಕೇಳಿದ ಸರ್ವಾತ್ಮಕನಾದ ಗಣಪತಿ "ದೇವಿ, ನಿನ್ನ ಈ ವರ್ತನೆಯಿಂದ ನೀನು ರಾಕ್ಷಸನನ್ನು ವರಿಸುವಂತಾಗಲಿ, ಹಾಗೆಯೇ ಮುಂದೆ ದೇವಾನುದೇವತೆಗಳ ಶಾಪಕ್ಕೆ ಗುರಿಯಾಗಿ ಭೂಲೋಕದಲ್ಲಿ ವೃಕ್ಷವಾಗುವೆ ' ಎಂದು ಮರು ಶಾಪವನ್ನಿತ್ತನು. ಬ್ರಹ್ಮಕಲ್ಪದಲ್ಲಿನ ಈ ಗಣಪತಿಯ ಶಾಪ ತುಲಸಿಗೆ ಅನುಗ್ರಹವೇ ಆಯಿತು.

## ಧಾರಾವಾಹಿ - 5

# ಆಳ್ವಾರರ ಭಗವದನುಭವ

ಡಾ॥ ಸಿ. ಎಸ್. ಊರ್ಮಿಳಾ
93804 26830

ಪೆರಿಯಾಳ್ವಾರರು ತಮ್ಮನ್ನು ಯಶೋದೆ ಎಂದು ಭಾವಿಸಿ ಬಾಲಕೃಷ್ಣನ ಲೀಲೆಗಳನ್ನೆಲ್ಲಾ ಅನು ಭವಿಸಿ ಚಿತ್ರಿಸಿದ್ದಾರೆ. ಇದು ಪಿಳ್ಳೈ ತಮಿಳ್ ಎಂದೇ ಪ್ರಸಿದ್ಧವಾಗಿದೆ.

ಎನ್ನಿದು ಮಾಯಮ್ ಎನ್ನಪ್ಪನರಿಂದಿಲನ್
ಮುನ್ನೈಯ ವಣ್ಣಮೇ ಕೊಣ್ಡಳವಾಯೆನ್ನ
ಮುನ್ನ ನಮುಚಿಯೈ ವಾನಿಲ್ ಶುಳತ್ತಿಯ
ಮಿನ್ನು ಮುಡಿಯನೇ ಅಚ್ಚೋವಚ್ಚೋ
ವೇಂಗಡವಾಣನೇ ಅಚ್ಚೋವಚ್ಚೋ
(ಪೆರಿಯಾಳ್ ವಾರ್ ತಿರುಮೊಳಿ ೧-೮-೮)

ಶ್ರೀಜಯಂತಿಯ ಆ ದಿನ ಗೋಕುಲದ ವರೆಲ್ಲಾ ಆನಂದದಿಂದ ಹಾರಾಡಿದರು. ಅಂದು ಮಗುವನ್ನು ನೋಡಲು ತನ್ನ ಎಳೆಗಂದ ಕೃಷ್ಣನ ಒಂದಕ್ಕೊಂದು ಒಪ್ಪುವ ಆ ಎರಡು ಕಾಲುಗಳನ್ನು ತೋರಿಸುವುದರಿಂದ ಹಿಡಿದು ಕಣೆಗಾಲು ಮಂಡಿ, ತೊಡೆ, ಬುಲ್ಲಿ ನಡುಹೊಕ್ಕಳು, ಹೊಟ್ಟೆ, ಎದೆ, ತೋಳು, ಕೈ,ಕಾಲು, ತುಟಿ, ಮೂಗು, ಕಣ್ಣು ಕಿವಿ, ನೆತ್ತಿ ಮುಂಗುರುಳು ಹೀಗೆ ಆಪಾದಚೂಡಮಸ್ತಕ ಎಲ್ಲ ಅಂಗಾಂಗಗಳನ್ನು ಅವುಗಳ ಚೆಲುವುಗಳನ್ನು ಒಲವಿನಿಂದ ತೋರಿಸಿದ್ದು ತೊಟ್ಟಿಲು ಕಟ್ಟಿ


ಕೃಷ್ಣನಿಗೆ ತಾಲೇಲೋ ಜೋಗುಳ ಹಾಡಿದ ಚಂದಮಾಮನನ್ನು ಬೇಗ ಅವನ ಕೈಗೆ ಬರುವಂತೆ ಕರೆದದ್ದು , ನಂದಕಿಶೋರನೊಂದಿಗೆ ತಾನು ತೋಳ ಕೊಟ್ಟು ಆಟವಾಡಿದ್ದು, ಅವನ ಕೈಗಳಿಂದ ಚಪ್ಪಾಳೆ ತಟ್ಟಿಸಿ,ತಪ್ಪಳತಟ್ಟಿಸಿ ಯಶೋದ ನಂದಗೋಪರಿಬ್ಬರೂ ಆನಂದಿಸಿದ್ದು ಮಗು ತೆತ್ತಾಪೆತ್ತಾ ಎಂದು ಹೆಜ್ಜೆ ಇಟ್ಟು ನಡೆದಾಗ ಅದರೊಂದಿಗೆ ತಾನೂ ನಡೆದದ್ದು ಹೀಗೆ ನಾನಾ ವಿಧವಾದ ಕೃಷ್ಣನ ಬಾಲಲೀಲೆಗಳನ್ನು ಪೆರಿಯಾಳ್ವಾರರು ಅನು ಭವಿಸಿ ಆನಂದಿಸಿ ಸಂತಸ ಪಟ್ಟಿದ್ದಾರೆ. ಶ್ರೀಕೃಷ್ಣನ ಬಾಲಲೀಲೆಗಳು ಎಂತಹವರನ್ನು ಮೈಮರೆ ಸುತ್ತದೆ.

ಈ ಬಲರಾಮ ನನ್ನ ತಂದೆ ಬಹಳ ಉದಾರಿ , ಪೂರ್ವಾಪರ ತಿಳಿಯದೆ ಎಲ್ಲವನ್ನೂ ದಾನ ಮಾಡಿದ,ಎಲ್ಲೈ ಕಳ್ಳ ಕುಳ್ಳ ಮೊದಲಷ್ಟೇ ಪುಟಾಣಿಯ ಅಳತೆಯ ಕಾಲಿನಿಂದ ಅಳೆದುಕೋ ಎಂದ.

ಆದರೆ ತೋರಿದ್ದೊಂದು ಅಳೆದದ್ದು ಒಂದು ಇದು ಮೋಸ! ಇದು ವಂಚನೆ ಮೊದಲೇ ನಿನ್ನ ಮೋಸಗಾರತನವನ್ನು ಆ ಬಲಿ ಚಕ್ರವರ್ತಿ ಒಪ್ಪಿಕೊಳ್ಳಲಿಲ್ಲ ಅವನು ಅಣೋರಣೀಯಾನ್ ಮಹತೋ ಮಹಿಯಾನ್ ಎಂದು ತಿಳಿದುಕೊಳ್ಳಲ್ಲಿಲ್ಲ. ಅಷ್ಟೇ ಅಲ್ಲ ಬಲಿಯ ಮಗನಾದ ನಮುಚಿಯನ್ನು ಬಾಯಲ್ಲಿ ಗಿರಗಿರನೆ ತಿರುಗಿಸಿ ಎಸೆದೆ ಎಲ್ಲೈ ದೇವ ನಿನ್ನ ಮಹಿಮೆ ಅಪಾರವಾದುದು ಎಂದು ಪ್ರಶಂಸಿಸುತ್ತಾರೆ ಪೆರಿಯಾಳ್ವಾರ್.

ಶ್ರೀಕೃಷ್ಣನ ಅಪಾರ ಮಹಿಮೆಯನ್ನು ಹೀಗೆ ಪೆರಿಯಾಳ್ವಾರರು ಪ್ರಶಂಸಿಸುತ್ತಾ ಪೋದರ್ ಕಂಡಾಯ್

ಇಂಗೇ ಪೋದರ್ ಕಂಡಾಯ್ ಪೋದರೇನ್ ಎನ್ನುದೇ ಪೋದರ್ಕಣ್ಡಾಯ್
ಏದೇನುಮ್ ಶೊಲ್ಲಿ ಅಶಲಹತ್ತಾಹ್, ಏದೇನುಮ್ ಪೇಶ ನಾನ್ ಕೇಟ್ಕ ಮಾಟ್ಟೇನ್
ಕೋದಕುಲಮುಡ್ಯೈ ಕುಟ್ಟನೇಯೋ ಕುನ್ರೆಡುತ್ತ್ಯಾಯ್ ಕುಡ ಮಾಡಕುತ್ತಾ
ವೇದಪ್ಪೊರುಳೇ ಎನ್‌ವೇಂಗಡವಾ ಎತ್ತಹನೇ ಎಂಗೇ ಪೋದರಾಯೇ
(ಪೆರಿಯಾಳ್ವಾನ್ ತಿರುಮಾಳಿ 2-9-6)



ಗೋಕುಲದ ಗೊಲ್ಲರು ಹಾಗೂ ಅವರ ಮಡದಿಯರು ಯಶೋದೆಯ ಬಳಿ ಬಂದು ದೂರು ಹೇಳಿದರು. ಅವರೆಲ್ಲ ನೀನು ಹೇಗೆ ರಕ್ಷಿಸುವೆ ಎಂಬುದನ್ನು ತಿಳಿದಿಲ್ಲ. ಅಂದು ದೇವೇಂದ್ರನು ಸುರಿಸಿದ ಘೋರ ಮಳೆಯಿಂದ ರಕ್ಷಿಸಲು ಗೋವರ್ಧನ ಗಿರಿಯನ್ನೇ ಕೊಡೆಯನ್ನಾಗಿ ಎತ್ತಿಕೊಂಡು ಏಳು ದಿನಗಳ ಕಾಲ ರಾತ್ರಿ - ಹಗಲು ಅಖಂಡನಾಗಿ ಅನಾಯಾಸವಾಗಿ ಹಿಡಿದೆ. ಅದನ್ನೂ ತಿಳಿಯದ ಪರದೇಶಿಗಳು ಅವರು, ಏನೇನೋ ಅಪವಾದ ಹೊರೆಸುತ್ತಾರೆ ಅದನ್ನೆಲ್ಲಾ ಕೇಳಲು ನನ್ನ ಕಿವಿಯಿಂದಲಾಗದು. ನಾನಿದೋ ನಿನ್ನ ಮಹಿಮೆಯ ಉಭಯ ಮುಖವನ್ನು ತಿಳಿದವಳು ಎಂದು ಯಶೋದಾ ಭಾವದಲ್ಲಿ ಪೆರಿಯಾಳ್ವಾರರು ಭಗವಂತನನ್ನು ಕಂಡು ಅನುಭವಿಸಿದ್ದಾರೆ. ಮತ್ತೆ ತ್ರಿವಿಕ್ರಮನ ಅವತಾರವನ್ನು ಸ್ಮರಿಸುತ್ತಾ ಹೀಗೆ ನ್ನುತ್ತಾರೆ. ಮೂನ್ರೆಳುತ್ತದನ್ನೈ ಮುನ್ರೆಳುತ್ತದನಾಲ್ ಮೂನ್ರೆಳುತಾಕ್ಕಿ ಮೂನ್ರೆಳುತ್ತೆ

ಏನ್ರೊ ಕೊಂಡಿರುಪ್ಪಾರ್ಕು ಇರಕ್ಕಮ್‌ನ್ನುಡ್ಡೈಯ ಎಮ್ ಪುರುಷೋತ್ತ ಮುನಿರುಕ್ಕೈ

ಮೂನ್ರಡಿ ನಿಮಿರ್ತ ಮೂನ್ರಿನಿಲ್ ತೋನಿ, ಮೂನ್ರಿನಿಲ್ ಮೂನ್ರುರು ವಾನಾನ್

ಸಾವ್‌ತಡಮ್ ಸೇಲೀನೂಲ್ ಗಂಗೆಯಿನ್ ಕರೆಮೇಲ್ ಕಣ ಮೆನೂಮ್

ಕಾನ್‌ತಡಮ್ ಪ್ರೊಳಿಲ್ ಶೂಲ್ ಗಂಗೈಯಿನ್ ಕರೈಮೇಲ್ ಕಣ್ಡಮೆನ್ನುಮ್ ಕಡಿನಹರೇ

(ಪೆರಿಯಾಳ್ವಾರ್ ತಿರುಮೊಳಿ 4.7.10)

ಶೋರ್ವಿನಾಲ್ ಪ್ರೊರುಳ್‌ವೈತ್ತ ದುಂಡಾಹಿಲ್ ಶೆಲ್ಲು ಶೋಲ್ಲೆನ್ರು ಶತ್ತುಮಿರಂದು

ಆರ್ವಿನವಿಲುಮ್ ವಾಯ್ ತಿರುವಾದೇ ಅಂತಕಾಲ ಮಡ್ಡೈವದನ್ ಮುನ್ನಮ್

ಮಾರ್ವಮೆನ್ಬದೋರ್ ಕೋಯಿಲಮೈತ್ತು ಮಾದವನೆನ್ನುಮ್ ತೆಯ್‌ವತ್ತೈನಾಟ್ಟಿ

ಆರ್ವಮೆನ್ಬದೋರ್ ಪೂವಿಡವಲ್ಲಾರ್ಕು ಅರವದಂಡತ್ತಿ ಲುಯ್ಯಲು ಮಾಮೇ

(ಪೆರಿಯಾಳ್ ತಿರುಮೊಳಿ)

ಹೃದಯಮಂಟಪದಲ್ಲಿ ಮಾದವನೆಂಬ ದೈವವನ್ನಿಟ್ಟು ಜಿಜ್ಞಾಸೆ ಎಂಬ ಹೂವನ್ನಿಟ್ಟುಪೂಜಿಸಿ ಕೃತಾರ್ಥರಾಗಬೇಕೆಂದು ಆಳ್ವಾರರು ಇಲ್ಲಿ ತಿಳಿಸಿದ್ದಾರೆ.

ಶೆನ್ನಿಯೊಂಗು ತಣ್ ತಿರುವೇಂಗಡಮುಡ್ಡೈಯಾಯ್ ಉಲಹು

ತನ್ನೈ ವಾಳ ನಿನ್ರನಂಬೀ ದಾಮೋದರಾ ಶದಿರಾ

ಎನ್ನೈಯುಮ್ ಎನ್ನುಡಮ್ಮೈಯುಮ್ ಉನ್‌ಶಕ್ಕರಪ್ಪೊರಿಯೆತ್ತಿ ಕ್ಕೊಂಡು

ನಿನ್ನರುಳೇ ಪುರಿಂದಿರುಂದೇನ್ ಇನಿಯೇನ್ ತಿರುಕ್ಕುರುಪ್ಪೇ

(ಪೆರಿಯಾಳ್ವಾರ್ ತಿರುಮೊಳಿ 5-4-1)

ಶಿಖರೋನ್ನತ ಶ್ರೀತಳ ಶ್ರೀ ವೆಂಕಟಗಿರಿವಾಸಾ - ಈ ಜಗವು ಜೀವಿಸಲೆಂದೇ ನಿಂತಿರುವವನೇ ! ಎಲ್ಲೈ ಪೂರ್ಣಾ ದಾಮೋದರಾ ಚತುರಾ, ಎನ್ನನ್ನೂ ನನ್ನ ಒಡವೆಯನ್ನೂ ನಿನ್ನ ಚಕ್ರದ ಮುದ್ರೆಯನ್ನು ಒತ್ತಿಸಿಕೊಂಡು ನಿನ್ನ ಅನುಗ್ರಹವನ್ನೆ ನಿರೀಕ್ಷಿಸುತ್ತಾ ನಾನು ಬಿದ್ದಿರುವೆ ಇದಕ್ಕೆ ಮೇಲೆ ನಿನ್ನ ಸಿರಿಚತ್ತ ಎಂದು ಮನಸಾರೆ ಪೆರಿಯಾಳ್ವಾರರು ಸ್ತುತಿಸಿದ್ದಾರೆ. ಈ ಶೆನ್ನಿಯೊಂಗುದಲ್ಲಿ ಪರಮಾತ್ಮನ ಪರತತ್ವವನ್ನು ಚೆನ್ನಾಗಿ ವರ್ಣಿಸಿದ್ದಾರೆ.

ಶ್ರೀ ವೈಷ್ಣವ ಧರ್ಮದಲ್ಲಿ ಪಂಚಸಂಸ್ಕಾರ ಅರ್ಥಪೂರ್ಣವಾಗಿದೆ. ಅವುಯಾವುವೆಂದರೆ ತಾಪ, ಪುಂಡ್ರ ನಾಮ, ಮಂತ್ರ ಮತ್ತು ಇಜ್ಯಾ ತೋಳುಗಳ ಮೇಲೆ ಗುರುಮುಖೇನ ಮಾಡಿಕೊಳ್ಳುವ ಶಂಖ ಚಕ್ರಧಾರಣೆ ತಾಪ ಎನ್ನಿಸಿಕೊಳ್ಳುತ್ತದೆ ವಿಷ್ಣುವಿನ ದ್ವಾದಶ ನಾಮಗಳನ್ನು ಕೀರ್ತನೆ ಮಾಡಿಕೊಂಡು ಧರಿಸುವ ದ್ವಾದಶನಾಮ ಶ್ರೀವೈಷ್ಣವ ಚಿಹ್ನೆಯು ಆಗಿ ಅಂತರಾರ್ಥದಲ್ಲಿ ವಿಷ್ಣು ಭಕ್ತರ ರಕ್ಷಾಕವಚವಾಗಿಯೂ ಉಳಿದು ಬಂದಿದೆ.ವಿಷ್ಣುವಿನ ಸ್ಮರಣೆಯನ್ನು ವಿಷ್ಣು ಭಕ್ತರು ಮಾಡುತ್ತಾರೆ. ಶ್ರೀವೈಷ್ಣವರು ದ್ವಯ, ಅಷ್ಟಾಕ್ಷರಿ ಮಂತ್ರ, ಮತ್ತು ಚರಮಶ್ಲೋಕವನ್ನು ಪ್ರತಿದಿನವೂ ಜಪಿಸುತ್ತಾರೆ. ಈ ಮಂತ್ರಗಳಲ್ಲಿ ವಿಷ್ಣು ಪಾರಮ್ಯ ತತ್ವವನ್ನು ನಾವು ಗುರುತಿಸಬಹುದು. ಇಜ್ಯ ಎಂದರೆ ಪ್ರತಿದಿನವೂ ಮಾಡುವ ಪೂಜಾವಿಧಾನ ಇದನ್ನೇ ಪೆರಿಯಾಳ್ವಾರರು ತಮ್ಮ ಪಾಶುರದಲ್ಲಿ ಹೇಳಿದ್ದಾರೆ. ಸಮಾಶ್ರಯಾಣ ಮತ್ತು ಭರನ್ಯಾಸ ಎಂಬೆರಡು ಸಂಸ್ಕಾರಗಳು ತಾವು ನಿಜವಾಗಿಯೂ ಶ್ರೀಮನ್ನಾರಾಯಣನ ಪರಮ ಭಕ್ತರೆಂದು ತಿಳಿಸುತ್ತದೆ.

ಪರಿಯಾಳ್ವಾರರು ತನ್ನನ್ನು ತಮ್ಮೊಡಮ್ಮೈಯುಮ್ ತನ್ನ ಸರ್ವಸ್ವವನ್ನು ನಿನ್ನ ಸುದರ್ಶನ ಚಕ್ರದ ಚಿನ್ಹದಿಂದ ತಪ್ತ ಚಕ್ರಾಂಕನ ಮಾಡಿಸಿಕೊಂಡು ನಿನ್ನ ಅನುಗ್ರಹವನ್ನೇ ನಿರೀಕ್ಷಿಸುತ್ತಾ ಬಿದ್ದಿದ್ದೇನೆ. ಇದಕ್ಕಿಂತಲೂ ಪರಮ ಭಾಗ್ಯ ಮತ್ತಾವುದಿದೆ ಎಂದು ಭಗವಂತನನ್ನೇ ಕೇಳುತ್ತಾರೆ. ಹೀಗೆ ಶೆನ್ನಿಯೊಂಗು ಎಂಬ ದಶಕದಲ್ಲಿ ಆಳ್ವಾರರು ಪೂರ್ಣ ಸಮರ್ಪಣ ಯೋಗಕ್ಕೆ ತಕ್ಕಂತೆ ಶೋದಿನಂಬಿ ಜ್ಯೋತಿಪೂರ್ಣ ಎಂದು ಹೇಳಿರುವುದು ಗಮನಾರ್ಹವಾಗಿದೆ.

ಪೊನ್ನೈ ಕೊಂಡುರೈಕಲ್ಮ್ರೀದೆ ನಿರಮೆಳುತ್ತಾರ್ಪ್ಪೋಲ್


ಉನ್ನೈಕೊಂಡು ಎನ್ನಾವಹಂಬಾಲ್ ಮಾತ್ತಿನಯುರೈತ್ತು ಕೊಂಡೇನ್

ಉನ್ನೈಕೊಂಡು ಎನ್ನುಳ್ ಮೈತ್ತೇನ್ ಎನ್ನೇಯುಮ್ ಉನ್ನಲಿಟ್ಟೇನ್

ಎನ್ನಪ್ಪಾ ಎನ್ನರುಡಿಕೇಶಾ ಎನ್ನುಯರ್ ಕಾವಲನೆ

(ಪೆರಿಯಾಳ್ವಾರ್ ತಿರುಮೊಳಿ 5. 4-5)

ಚಿನ್ನವನ್ನು ಒರೆಗಲ್ಲಿನಲ್ಲಿ ಉಜ್ಜಿ ಅಪರಂಜಿ ಚಿನ್ನವೆಂದು ಪರೀಕ್ಷಿಸುವಂತೆ ನಾನೂ ಸಹ ನಿನ್ನ ಗುಣಾತಿಶಯಗಳನ್ನು ಕಂಡು ಕೊಂಡೆ ನಿನ್ನಲ್ಲಿ ನನ್ನನ್ನು ಸಹ ನಿನ್ನಲಿಟ್ಟೆ, ಅಂದರೆ ಇಟ್ಟೆ ನನ್ನನ್ನೂ ತಾನೇ ಎಂದಿದ್ದಾರೆ. ಪರಸ್ಪರಾ ಒಂದಾಗಿರುವೆವು ನನ್ನ ಜೀವಕ್ಕೆ ರಕ್ಷಕನು ನೀನೇ ತಾನೇ ಎಂದಿದ್ದಾರೆ.



# ಆನೆಕೆರೆ ಹಾಗೂ ಚೆನ್ನರಾಯಪಟ್ಟಣದ ಕೇಶವ ದೇವಾಲಯಗಳು

**ಕರ್ನಾಟಕದ ವೈಷ್ಣವ ದೇವಾಲಯಗಳು**

- ಕೆಂಗೇರಿ ಚಕ್ರಪಾಣಿ
9448386886

13



ಹಾಸನ ಜಿಲ್ಲೆಯ ಚೆನ್ನರಾಯಪಟ್ಟಣ ತಾಲ್ಲೂಕಿನ ಆನೆಕೆರೆಯು ಚನ್ನರಾಯಪಟ್ಟಣದಿಂದ ಕೇವಲ 8 ಕಿ.ಮೀ. ದೂರದಲ್ಲಿದೆ. ಶಾಸನಗಳಲ್ಲಿ ಆನೆಗಳ ಕೆರೆ,ಕೇಶವಪುರ ಎಂದು ಕರೆದಿರುವ ಆನೆಕೆರೆಯಲ್ಲಿ ಶ್ರೀ ಚನ್ನಕೇಶವ ದೇವಾಲಯವಿದೆ. ದೇವಾಲಯವು ಏಕಕೂಟವಾಗಿದ್ದು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಸಣ್ಣ ಮುಖಮಂಟಪವಿದೆ. ಗರ್ಭಗುಡಿಯಲ್ಲಿರುವ ಕೇಶವನ ವಿಗ್ರಹವು ಹಾಳಾಗಿದ್ದು, ಕಳೆದ ಶತಮಾನದ ಮಧ್ಯ ಭಾಗದಲ್ಲಿ ಹೊಸ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಸುತ್ತಲೂ ಸೋಮನಾಥಪುರ, ಹುಲ್ಲೇಕೆರೆಯಲ್ಲಿರುವಂತೆ ಕೈಸಾಲೆ ಮಂಟಪವಿದೆ.ದೇವಾಲಯದ ನವರಂಗದ ಮಧ್ಯದ ಭುವನೇಶ್ವರಿಯಲ್ಲಿ ಕೆಳಗೆ ಜೋಲಾಡುತ್ತಿರುವ ದೊಡ್ಡ ಶಂಖವಿದೆ. ದೇವಾಲಯದ ಹೊರಭಿತ್ತಿಯೂ ನಿರಾಲಂಕೃತವಾಗಿದ್ದು ಅಲ್ಲಲ್ಲಿ ಅರೆಕಂಬ ಗಳಿವೆ.ದೇವಾಲಯವು ಶಿಖರವನ್ನು ಹೊಂದಿದ್ದು ಅಲಂಕೃತವಾದ ಸುಂದರ ಕಳಶವಿದೆ. ಈ ದೇವಾಲಯದ ಉಲ್ಲೇಖವು ಕ್ರಿ.ಶ.1191ರ ತಾಮ್ರ ಶಾಸನದಲ್ಲಿ ಶ್ರೀಕರಣ ಹೆಗ್ಗಡೆ ಮಾಚಯ್ಯನ ಶಾಸನದಲ್ಲಿ ಬರುವುದರಿಂದ ಅದಕ್ಕೂ ಮೊದಲು ದೇವಾಲಯವು ನಿರ್ಮಾಣ ವಾಗಿರಲೇಬೇಕು. ಪ್ರಸಿದ್ಧ ಕವಿ ಜನ್ನನು ತಾಮ್ರ ಶಾಸನದ ಕರ್ತೃ.

**ಹೀಗೆ ಬನ್ನಿ:**

ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ಆನೆಕೆರೆಯು ಚನ್ನರಾಯ ಪಟ್ಟಣದಿಂದ ಸುಮಾರು 8ಕಿ.ಮೀ.ದೂರದಲ್ಲಿದೆ. ಬೆಂಗಳೂರು - ಹಾಸನ ರಸ್ತೆಯಲ್ಲಿ ಚನ್ನರಾಯಪಟ್ಟಣದ ನಂತರ 3 ಕಿ.ಮೀ ಸಾಗಿದರೆ ಎಡಕ್ಕೆ ಆನೆಕೆರೆ ಚನ್ನ ಕೇಶವ ದೇವಾಲಯಕ್ಕೆ ದಾರಿ ಎಂಬ ನಾಮಫಲಕವಿದೆ. ಅಲ್ಲಿ ತಿರುಗಿ ಸುಮಾರು 3 ಕಿ.ಮೀ.ಸಾಗಿದರೆ ಆನೆಕೆರೆಯು ಸಿಗುವುದು. ಆನೆ ಕೆರೆಯ ಚನ್ನಕೇಶವನ ದೇವಾಲಯವನ್ನು ದರ್ಶಿಸಿ ಹೊಳೆನರಸೀಪುರದ ರಸ್ತೆಯನ್ನು ಸೇರಬಹುದು. ಹೊಳೇನರಸೀಪುರದ ಲಕ್ಷ್ಮೀನರಸಿಂಹಸ್ವಾಮಿ, ಮಾವಿನ ಕೆರೆಯ ರಂಗನಾಥ ಸ್ವಾಮಿ ದೇವಾಲಯಗಳನ್ನು ಸಹಾ ಪ್ರವಾಸಿಗರು ದರ್ಶಿಸ ಬಹುದು.

**ಚನ್ನರಾಯಪಟ್ಟಣದ ಕೇಶವ ದೇವಾಲಯ:**

ಚನ್ನರಾಯಪಟ್ಟಣದ ಕೋಟೆಯ ಪ್ರದೇಶದಲ್ಲಿ ಚನ್ನಕೇಶವ ದೇವಾಲಯವಿದೆ. ದೇವಾಲಯವು ಹೊಯ್ಸಳ ಕಾಲದ ಆಲಯ ವಾಗಿರುತ್ತದೆ. ಚನ್ನಕೇಶವ ದೇವಾಲಯವು ಗರ್ಭಗೃಹ, ಸುಖನಾಸಿ, ನವರಂಗ, ಸಣ್ಣ ಮುಖಮಂಟಪ ಹಾಗೂ ಪ್ರವೇಶದ್ವಾರ ಗಳನ್ನು ಹೊಂದಿದೆ. ದೇವಾಲಯದ ಪ್ರವೇಶದ್ವಾರದ ಇಕ್ಕೆಡೆಗಳಲ್ಲಿ ನಗಾರಿ ಕೋಣೆ ಇದೆ. ಕ್ರಿ.ಶ. 1478 ರಲ್ಲಿ ವಿಜಯ ನಗರದ ವೀರ ಪ್ರತಾಪ ವಿರೂಪಾಕ್ಷನ ಕಾಲದಲ್ಲಿ ಮಾಂಡಳೀಕ ನಾಗಿದ್ದ ಶಾಂತಿಗ್ರಾಮದ ಸೋಮಣ್ಣ ಒಡೆಯರ ಮನೆಯ ತಳವಾರ ಬೊಮ್ಮಯ ನಾಯಕನು ಗೋಪುರವನ್ನು ಕಟ್ಟಿಸಿದ್ದನು. ಆದರೆ ಈಗ ಗೋಪುರವು ನಾಶವಾಗಿ ಪ್ರವೇಶದ್ವಾರ ಮಾತ್ರವೇ ಉಳಿದಿವೆ.

ಕೇಶವ ದೇವಾಲಯವು ಎರಡು ಕಂಬಗಳನ್ನು ಹೊಂದಿ ರುವ ಸಣ್ಣ ಮುಖಮಂಟಪವನ್ನು ಹೊಂದಿದೆ. ಮುಖ ಮಂಟಪ ದಿಂದ ಒಳಗೆ ಪ್ರವೇಶಿಸಿದರೆ ನವರಂಗವು ಸಿಗುತ್ತದೆ. ನವರಂಗದಲ್ಲಿ ತಿರುಗಣೆಯಿಂದ ಮಾಡಿದ ನಾಲ್ಕು ಕಂಬವಿದ್ದು ನಡುವೆ ಅತ್ಯಂತ ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ಆಳವಾದ ಭುವನೇಶ್ವರಿಯಿದೆ. ವೃತ್ತಾಕಾರದ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು ತಮ್ಮ ವಾಹನ ಗಳ ಮೇಲೆ ಆಸೀನರಾಗಿರುವಂತೆ ಚಿತ್ರಿಸಲಾಗಿದೆ. ಭುವನೇಶ್ವರಿ ಯಲ್ಲಿ ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳನ್ನು ಸೊಗಸಾಗಿ ಬಿಡಿಸಲಾಗಿದೆ.ಬಹುವೃತ್ತಾಕಾರದ ವಿನ್ಯಾಸದ ನಡುವೆ ಜೋತು ಬಿದ್ದಂತಿರುವ ಕಮಲದ ಮೊಗ್ಗಿದೆ.ನವರಂಗದ ಮಧ್ಯ ದಲ್ಲಿರುವ ಪ್ರಧಾನ ಭುವನೇಶ್ವರಿಯ ಸುತ್ತಲೂ ಎಂಟು ಭುವನೇಶ್ವರಿಗಳು ಸುತ್ತುವರೆದಿವೆ. ಅವುಗಳ ವಿನ್ಯಾಸವೂ ಒಂದಕ್ಕೊಂದು ಭಿನ್ನ ವಾಗಿದ್ದು ಅಂದವಾಗಿ ಮೂಡಿ ಬಂದಿವೆ. ನವರಂಗದಲ್ಲಿ ಒಂದು ಕಡೆ ರಂಗನಾಥನ ಶಿಲ್ಪವಿದ್ದರೆ ಮತ್ತೊಂದು ಕಡೆ ಕಾಳಿಂಗ ಮರ್ಧನ ಕೃಷ್ಣನ ಮೂರ್ತಿಗಳನ್ನಿಡಲಾಗಿದೆ. ಇವುಗಳು ಹೊಯ್ಸಳರ ನಂತರ ಕಾಲದ ಶಿಲ್ಪಗಳಾಗಿರುತ್ತವೆ. ಗರ್ಭಗೃಹದಲ್ಲಿ ಶಂಖ, ಚಕ್ರ, ಗದಾ ಧಾರಿಯಾದ ಚನ್ನಕೇಶವನ ಸೊಗಸಾದ ಮೂರ್ತಿಇದೆ.



ದೇವಾಲಯವು ತ್ರಿತಳ ಶಿಖರವನ್ನು ಹೊಂದಿದೆ ಹಾಗೂ ದೇವಾಲಯದ ಹೊರಭಿತ್ತಿಯು ನಿರಲಂಕೃತವಾಗಿ ಸರಳವಾಗಿದೆ.

ಕೇಶವ ದೇವಾಲಯದ ಬಲಗಡೆ ಗೋಡೆಯ ಮೇಲಿರುವ ಶಾಸನದಲ್ಲಿ ಹೊಯ್ಸಳರ ಬಲ್ಲಾಳನ ಕಾಲದಲ್ಲಿ ಕ್ರಿ.ಶ. 1136 ರಲ್ಲಿ ಸ್ಥಳೀಯ ನಾಯಕರುಗಳು ಅಮೃತಾಪುರ ಅಥವಾ ಕೊಳತ್ತೂರು ಅಗ್ರ ಹಾರವನ್ನು ಸ್ಥಾಪಿಸಿ ಅಲ್ಲಿರುವ ಶ್ರೀರಾಮೇಶ್ವರ, ಸಾತೇಶ್ವರ, ಮಾಚಳೇಶ್ವರ ಹಾಗೂ ಕೇಶವ ದೇವರುಗಳ ನಿತ್ಯ ನೈವೇದ್ಯಕ್ಕಾಗಿ ದತ್ತಿ ಬಿಟ್ಟಿರುವ ಉಲ್ಲೇಖ ದೊರೆಯುತ್ತದೆ. ಹೀಗಾಗಿ ಕೇಶವ ದೇವಾಲಯದ ಕಾಲವನ್ನು 12 ನೇ ಶತಮಾನಕ್ಕೆ ಸೇರಿಸಬಹುದು.



ಕ್ರಿ.ಶ.1670 ರಲ್ಲಿ ಕಾನಕಾನಹಳ್ಳಿಯ ಪ್ರಭು ದೊಡ್ಡಯ್ಯನ ಮಗ ಬಸವಯ್ಯನು ದೀಪಮಾಲೆ ಕಂಬವನ್ನು ಮಾಡಿಸಿ ಕೊಟ್ಟಿರುವ ವಿಷಯ ಕೇಶವ ದೇವಾಲಯದಲ್ಲಿರುವ ಶಾಸನದಲ್ಲಿ ತಿಳಿದುಬರುತ್ತದೆ. ಶಾಸನದಲ್ಲಿ ಕೇಶವ ದೇವರನ್ನು ಚನ್ನರಾಯಸ್ವಾಮಿ ಎಂದು ಕರೆಯಲಾಗಿದೆ.ಕೊಳತ್ತೂರು ಅಗ್ರಹಾರವೆಂಬ ಹೆಸರಿನ ಊರು ಚೆನ್ನರಾಯಸ್ವಾಮಿ ದೇವಾಲಯದಿಂದ ಚನ್ನರಾಯಪಟ್ಟಣವಾಗಿ ನಂತರ ಕಾಲದಲ್ಲಿ ಪುನರ್ ನಾಮಕರಣಗೊಂಡಿದೆ. ವಿನಾಶದ ಅಂಚಿನಲ್ಲಿದ್ದ ಆಲಯವು ರಾಜ್ಯ ಸರ್ಕಾರದ ವತಿಯಿಂದ ಜೀರ್ಣೋದ್ಧಾರವಾಗಿದೆ.

ಚನ್ನರಾಯಪಟ್ಟಣದ ಕೇಶವ ದೇವಾಲಯದ ಸಮೀಪದಲ್ಲಿಯೆ ಚಂದ್ರಮೌಳೇಶ್ವರ ದೇವಾಲಯವಿದ್ದು.ಈ ದೇವಾಲಯದ ಗರ್ಭಗುಡಿಯಲ್ಲಿ ಪರಶಿವನು ಲಿಂಗರೂಪದಲ್ಲಿರದೆ ಮೂರ್ತಿರೂಪದಲ್ಲಿದ್ದು ಬಹಳ ಆಕರ್ಷಕವಾಗಿದೆ. ಶಿವನ ಲೀಲಾ ಮೂರ್ತಿಗಳಲ್ಲೊಂದಾದ ಚಂದ್ರ ಶೇಖರನು ಪ್ರಧಾನ ಗರ್ಭಗುಡಿಯಲ್ಲಿರುವುದು ಈ ದೇವಾಲಯದ ವಿಶೇಷತೆ.

ಚನ್ನರಾಯಪಟ್ಟಣದ ಶ್ರೀಚನ್ನಕೇಶವ ದೇವಾಲಯ ಹಾಗೂ ಚಂದ್ರಮೌಳೇಶ್ವರ ದೇವಾಲಯಗಳು ಕೋಟೆ ಪ್ರದೇಶದಲ್ಲಿವೆ. ಬೆಂಗಳೂರು - ಮಂಗಳೂರು ರಸ್ತೆಯಲ್ಲಿ ಸಂಚರಿಸುವ ಪ್ರವಾಸಿಗರು ಹೆದ್ದಾರಿಗೆ ಅತಿ ಸಮೀಪದಲ್ಲಿರುವ ಈ ಎರಡು ಸುಂದರ ದೇವಾಲಯಗಳನ್ನು ದರ್ಶಿಸಿ ಮುಂದೆ ಪಯಣಿಸಬಹುದು.



ಧಾರಾವಾಹಿ - 8

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

- ಇಂಗ್ಲೀಷ್ ಮೂಲ : ಡಾ॥ ಎನ್.ರಮೇಶನ್

- ಕನ್ನಡಾನುವಾದ : ದಿ॥ ಜಿ.ಎನ್. ಶ್ರೀನಿವಾಸನ್

## ಕ್ರಿ.ಶ.1260-1360 ವರೆಗೆ ತಿರುಮಲೆ.

ಕ್ರಿ.ಶ.1336 ರಲ್ಲಿ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯದಲ್ಲಿ,ಅದು ಹುಟ್ಟಿದಾಗಲೇ ತೊಂಡಮಂಡಲವೂ ಅದರಲ್ಲಿ ಸೇರಿದ್ದಿತು. ಆದರೂ ತಿರುಮಲೆ-ತಿರುಪತಿ ಪ್ರಾಂತ್ಯದಲ್ಲಿ ದೊರಕಿರುವ ವಿಜಯನಗರದ ಮೊದಲಶಾಸನ ಕ್ರಿ.ಶ.1359 ರ ಕಾಲದ್ದು.ಸುಂದರಪಾಂಡ್ಯನ ಕಾಲ ಹಾಗೂ ವಿಜಯನಗರದ ಕಾಲದ ದಾಖಲೆಯ ಈ ವರ್ಷದ ಮಧ್ಯ ಕಾಲವನ್ನು ಪರಿವರ್ತನ ಕಾಲವೆಂದು ಕರೆಯಲಾಗಿದೆ. ಈ ಕಾಲದಲ್ಲಿ ಚೋಳ ರಾಜರ ದೌರ್ಬಲ್ಯದ ಪ್ರಯೋಜನ ಪಡೆದು ಅನೇಕ ಸಾಮಂತರು ಸ್ವತಂತ್ರರಾದರು. ಈ ಕಾಲದಲ್ಲಿ ಅವರುಗಳೆಲ್ಲ ಯಾವ ಒಡೆತನವನ್ನೂ ಹೇಳದೆಯೇ ಶಾಸನಗಳಲ್ಲಿ ಕಂಡು ಬರುತ್ತಾರೆ.

ಈ ಸಾಮಂತ-ಸ್ವತಂತ್ರರಲ್ಲಿ ಇಬ್ಬರು-ತಂದೆ ಮಗ-ಅರ್ವಾಚೀನ ಪಲ್ಲವರಕೊಪ್ಪೆರುಂಜಿಂಗರು ಸಾಕಷ್ಟು ಗೊಂದಲವನ್ನುಂಟು ಮಾಡಿದರು. ಹಿರಿಯಕೊಪ್ಪರುಂಜಿಗ-ಕಾಡವ ರಾಯನು ಸೆಂಡಮಂಡಲದ ಸುತ್ತಣ ಸಣ್ಣ ರಾಜ್ಯದ ಅಧಿಪತಿಯಾಗಿದ್ದ, ಈತ ತೊಂಡಮಂಡಲದ ಒಂದು ಭಾಗವನ್ನು ಹಿಡಿದು ಕ್ರಿ.ಶ.1220ರಲ್ಲಿ ಆಳಿದ.ಅವನ ಮಗ ಪ್ರಸಿದ್ಧ ಕೊಪ್ಪರುಂಜಿಂಗ-ಖಡ್ಗದೇವನು ಕ್ರಿ.ಶ. 1243ರಲ್ಲಿ ಸಿಂಹಾಸನಾರೋಹಣ ಮಾಡಿ,ತೊಂಡಮಂಡಲವನ್ನು ಆಕ್ರಮಿಸಿ ನರಸಿಂಗಯಾದವರಾಯನೊಡನೆ ಉರಟ್ಟೂರಿನ ಬಳಿ ಯುದ್ಧ ಮಾಡಿದ.ಇನ್ನೂ ಮುಂದುವರಿದು ಪೂರ್ವಗೋದಾವರಿಯ ದ್ರಾಕ್ಷಾರಾಮದವರೆಗೆ ದಂಡೆತ್ತಿ ಹೋಗಿ ಕಾಕತೀಯರ ಗಣಪತಿ ದೇವನಿಂದ ಸೋಲಿಸಲ್ಪಟ್ಟು ಅವಮಾನಿತನಾಗಿ ಹಿಂದಿರುಗಿದ. ನಂತರ ಇವನನ್ನು ಮೊದಲನೇ ಸುಂದರಪಾಂಡ್ಯನು ಅಧೀನಗೊಳಸಿಕೊಂಡನು. ಇವನ ಎರಡು ಶಾಸನಗಳು (ಟಿ.ಟಿ.226,227) ತಿರುಮಲೆಯಲ್ಲಿ ಕಂಡು ಬರುತ್ತದೆ.

ಚೋಳರ ಅಧೀನರಾಗಿ ತೊಂಡಮಂಡಲವನ್ನು ಹಲವಾರು ತೆಲುಗು ಪಲ್ಲವರು ಆಳುತ್ತಿದ್ದರು.ಈಗಣ ನೆಲ್ಲೂರು, ಕಡಪ,ಕರ್ನೂಲು.ಚಿತ್ತೂರು,ಉತ್ತರ ದಕ್ಷಿಣ ಆರ್ಕಾಟುಗಳು,ಚೆಂಗಲ್ಪಟ್ಟು ಜಿಲ್ಲೆಗಳು ಅಂದಿನ ತೊಂಡಮಂಡಲದ ಭಾಗಗಳಾಗಿದ್ದವು.ಇವರೂ ಸಹ ಸಮಕಾಲೀನ ಚೋಳ ರಾಜರ ದುರ್ಬಲತೆಯ ಕಾರಣದಿಂದಾಗಿ

ಸ್ವತಂತ್ರರಾದರು. ಪಾಂಡ್ಯರಾಜನು ರಂಗ ಪ್ರವೇಶ ಮಾಡಿದಾಗ ಆ ಸಮಯಕ್ಕೆ ಅವನ ಸಾರ್ವ ಭೌಮತೆ ಯನ್ನು ಒಪ್ಪಿದರು. ಈ ಭಾಗದಲ್ಲಿ ಆಳಿದ ವಂಶಾವಳಿಯಲ್ಲಿ ತಿರುಮಲೆಯ ಆಲಯ ದಾಖಲಿಸುವ ರಾಜರೆಂದರೆ ವಿಜಯಗಂಡಗೋಪಾಲ, ರಾಜಗಂಡಗೋಪಾಲ ಹಾಗೂ ತ್ರಿಪುರಾಂತಕರುಗಳು,(ಟಿ.ಟಿ. 173,285, 143, 73,431,128,196,111,137,139,141,129, 125,134,652,134,119,123,126,443, 221,72, ಹಾಗೂ ಜಿ.ಟಿ.127)

ತೊಂಡಮಂಡಲದಲ್ಲಿ ಸಾಕಷ್ಟು ಪ್ರಭಾವ ಬೀರಿದ ಮತ್ತೊಂದು ಕುಟುಂಬವೆಂದರೆ ನೆಲ್ಲೂರು ತೆಲುಗು ಚೋಳ ಮನೆತನ. ಅಲ್ಲುನ್ ತಿರುಕಾಳತ್ತಿದೇವ ಈ ವಂಶದವನಾಗಿ ಕೆಲವು ಕಾಲ ಸನಿಹದ ಕಂಚಿಯನ್ನೂ ಹಿಡಿದಿದ್ದನು. ಈತ ತಿರುಮಲೆಯ ಶಾಸನಗಳಲ್ಲಿ ಹೆಸರಿಸಲ್ಪಟ್ಟಿದ್ದಾನೆ.

ತಿರುಮಲೆ ತಿರುಪತಿ ಪ್ರಾಂತದ ಸಾಮಂತರಲ್ಲಿ ಅತಿ ಹೆಚ್ಚು ಪ್ರಮುಖರಾದ ಯಾದವರಾಯರು, ಇಲ್ಲಿನ ಆಲಯಗಳೊಡನೆ ಅತಿ ಸಮೀಪ ಸಂಬಂಧ ಹೊಂದಿ ಹಲವಾರು ಆಲಯೋಪಯೋಗಿ ಕಾರ್ಯಗಳನ್ನು ನಿರ್ವಹಿಸಿದರು. ನೆಲ್ಲೂರು,ಚಿತ್ತೂರುಜಿಲ್ಲೆಗಳ ವೆಂಕಟಗಿರಿ,ಶ್ರೀಕಾಳಾಹಸ್ತಿ, ಚಂದ್ರಗಿರಿ ತಾಲೂಕುಗಳನ್ನು ಆಳಿದರು. ಇವರಲ್ಲಿ ಮೊದಲಿಗನೆಂದರೆ ಚೋಳಸಾಮಂತನಾಗಿ ಕ್ರಿ.ಶ.1184 ಲಿಂದ 1227 ರ ವರೆಗೆ ಆಳಿದ ಘಟ್ಟಿದೇವ. ತಿರುಮಲೆಯಲ್ಲಿ ಶೈವ ವೈಷ್ಣವರ ನಡುವಣ ವಿವಾದವನ್ನು ಬಗೆಹರಿಸಲು ರಾಮಾನುಜಾಚಾರ್ಯರನ್ನು ಆಹ್ವಾನಿಸಿದವನು ಇವನೇ ಎಂಬ ಮಾತೂ ಇದೆ. ಆದರೆ ರಾಮಾನುಜಾಚಾರ್ಯರು ಕ್ರಿ.ಶ. 1130 ರಲ್ಲಿ ವೈಕುಂಠವಾಸಿಗಳಾದ ಮೇಲೆ ಕ್ರಿ.ಶ. 1184 ರಲ್ಲಿ ಘಟ್ಟದೇವನು ರಾಜನಾದನೆಂಬ ಕಾರಣದಿಂದ ಈ ಮಾತಿನಲ್ಲಿ ಹುರುಳಿಲ್ಲವೆಂಬುದು ಸಿದ್ಧ. ಘಟ್ಟಿದೇವನ ಮಗ ರಾಜಮಲ್ಲನು ಕ್ರಿ.ಶ. 1208-1237 ರ ವರೆಗೆ ಆಳಿದ, ಇವನು ಪ್ರಾಯಶಃ ಯಾದವನಾರಾಯಣ ಮೂರ್ತಿಯನ್ನು ಪ್ರತಿಷ್ಠಾಪಿಸಿದ. ನಂತರದ ರಾಜನೆಂದರೆ ಕ್ರಿ.ಶ. 1237 ಲಿಂದ 1246 ವರೆಗೆ ಆಳಿದ ತಿರುಕಾಳತ್ತಿ ದೇವ. ತಿರುವಣ್ಣಾಮಲೈಯಿಂದ ಕಾಳಹಸ್ತಿಯವರಗಿನ ವಿಶಾಲ ಭೂಭಾಗವನ್ನು ಆಳಿದ. ಇವನ ಮಗ ವೀರರಾಕ್ಷಸನು ಒಂದನೇ ಕುಲೋತ್ತುಂಗನ ಕಾಲದಲ್ಲಿ ಪ್ರಸಿದ್ಧನಾದ. ನಂತರ ಬಂದವನು ಯಾದವರಾಯ ಕುಲದಲ್ಲಿ ಅತಿ ಶ್ರೇಷ್ಠನಾದ ವೀರ ನರಸಿಂಗ ದೇವ, ಈತ ಮೊದಲಿಗೆ ಚೋಳ ಸಾಮಂತನಾದರೂ ನಂತರ ಪಾಂಡ್ಯರ ಅಧೀನನಾದನು. ತಿರುಮಲೆ-ತಿರುಪತಿ ಆಲಯಗಳಿಗಾಗಿ ಅನೇಕ ಕೆಲಸಗಳನ್ನು ಮಾಡಿದ. ವೀರನರಸಿಂಗನ ಮಗ ತಿರುವೆಂಕಟನಾಥನು ಕ್ರಿ.ಶ. 1310-ಲಿಂದ 1336 ರ ವರೆಗೆ ಆಳಿದ. ಈ ಕಾಲದಲ್ಲಿ ತೊಂಡಮಂಡಲದ ಹೊರಗೆ ಹಲವಾರು ಪರಿವರ್ತನೆಗಳಾದವು. ಉತ್ತರ ಭಾರತದಲ್ಲಿ 12 ನೇ ಶತಮಾನದ ಕೊನೆಗೆ ದೆಹಲಿ ಸುಲ್ತಾನರು ದೆಹಲಿಯಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿ,ಶೀಘ್ರವಾಗಿ ಹರಡುವ ತಮ್ಮ ಧಾಳಿಗಳನ್ನು ಆರಂಭಿಸಿದರು. ಹಿಂದೂ ಮತವೂ,ತುಸುವೇ ಆಗಿದ್ದ ಬೌದ್ಧಮತವೂ ಈ ಧಾಳಿಗಳಿಂದ ಬಹುವಾದ ಹೊಡೆತ ಆಕ್ರಮಣವನ್ನೆದುರಿಸಬೇಕಾಯಿತು. 13ನೇ ಶತಮಾನದ ಕೊನೆಗೆ ದೆಹಲಿಯಲ್ಲಿ ಖಿಲ್ಜಿ ಸಾಮ್ರಾಜ್ಯ ಉದಯವಾಯಿತು. ಈ ವೇಳೆಗೆ ದಕ್ಷಿಣದಲ್ಲಿ ಎರಡು ಹಿರಿಯ ಹಿಂದೂ ಸಾಮ್ರಾಜ್ಯಗಳು-ಆಧುನಿಕ ದೌಲತಾ ಬಾದ್ ಆದ ದೇವಗಿರಿಯಲ್ಲಿ ಯಾದವ ರಾಜ್ಯವೂ,ತೆಲುಗು ಮಾತನ್ನಾಡುತ್ತಿದ್ದ ಇಡೀ ಪ್ರದೇಶವನ್ನು ಒಳಗೊಂಡ ಕಾಕತೀಯ ಸಾಮ್ರಾಜ್ಯವೂ,ಮೈಸೂರಿನ ದ್ವಾರ ಸಮುದ್ರವನ್ನು ರಾಜಧಾನಿಯಾಗಿಸಿಕೊಂಡ ಹೊಯ್ಸಳ ಸಾಮ್ರಾಜ್ಯ ಹಾಗೂ ಮಧುರೆಯಲ್ಲಿ ಪ್ರಬಲರಾಗಿದ್ದ ಪಾಂಡ್ಯ ರಾಜ್ಯದೊಡೆನೆ ಪ್ರಸಿದ್ಧವಾಗಿದ್ದವು. ಅಲಹಾದಾಬಾದ್ ಹಾಗೂ,ಖಾರ್‌ಗಳಲ್ಲಿನ ರಾಜ್ಯಪಾಲ ಆಗಿದ್ದ ಅಲ್ಲಾವುದ್ದೀನನು ದೇವಗಿರಿಯ ಮೇಲೆ ಕ್ರಿ.ಶ.1296 ರಲ್ಲಿ ದಂಡೆತ್ತಿ ಬಂದು ಅಸಾಧಾರಣ ಸಂಪದವನ್ನು ಸೂರೆ ಮಾಡಿದ. ನಂತರ ಬಹು ಬೇಗನೆ ದೆಹಲಿಯ ಸಿಂಹಾಸನವನ್ನೂ ಆಕ್ರಮಿಸಿ ಸಾಮ್ರಾಟನಾದ. ಕ್ರಿ.ಶ. 1303 ರಲ್ಲಿ ಆಂಧ್ರಪ್ರದೇಶದ ಮೇಲೆ ಧಾಳಿಮಾಡಿದ್ದರೂ ನಿಷ್ಫಲವಾಗಿ ಹಿಂದಿರುಗಬೇಕಾ ಯಿತು. ನಂತರ ಕ್ರಿ.ಶ. 1309 ರಲ್ಲಿ ತನ್ನ ಸೇನಾನಿ ಮಲ್ಲಿಕ್ ಕಾಫರ್‌ನ ನೇತೃತ್ವದಲ್ಲಿ ಮತ್ತೆ ದಂಡು ಕಳುಹಿಸಿದ, ಮಲ್ಲಿ ಕಾಫರ್‌ನು ಕಾಕತೀಯ ರಾಜಧಾನಿ ಓರುಗಲ್ ಅನ್ನು ಆಕ್ರಮಿಸಿ ರಾಜ ಪ್ರತಾಪರುದ್ರದೇವನಿಂದ ಅಪಾರವಾದ ಐಶ್ವರ್ಯವನ್ನು ವಶಪಡಿಸಿಕೊಂಡ. ನಂತರ ದಕ್ಷಿಣದ ಹೊಯ್ಸಳ ರಾಜಧಾನಿಯನ್ನು ಮುತ್ತಿ ಅದನ್ನು ಲೂಟಿ ಮಾಡಿದ. ಆಮೇಲೆ ಪಾಂಡ್ಯ ರಾಜಧಾನಿಯನ್ನು ಬಳಸಿ ಸೂರೆಗೈದ. ಕ್ರಿ.ಶ.1310ರಲ್ಲಿ ಅಗಣಿತ ಸಂಪತ್ತಿನೊಡನೆ, ಅವನು ಹಿಂದಿರುಗಿದ. ತಿರುಮಲೆ-ತಿರುಪತಿ ಪ್ರಾಂತ್ಯಗಳು ಅವನ ಆಕ್ರಮಣದ ಹಾದಿಯಲ್ಲಿ ಇಲ್ಲದ್ದರಿಂದ ಉಳಿದು ಹೋದವು.

ಶ್ರೀರಂಗದಲ್ಲಿನ ಶ್ರೀರಂಗನಾಥಸ್ವಾಮಿ ಆಲಯದ ಪರಂಪರೆಯನ್ನು ಚಿತ್ರಿಸುವ-ಕೋಯಿಲ್‌ಒಳಗು-ಈ ಕಾಲದಲ್ಲಿ ನಡೆದ ಒಂದು ಘಟನೆಯನ್ನು ವಿವರಿಸುತ್ತದೆ. ಕ್ರಿ.ಶ.1327 ರಲ್ಲಿ ತನ್ನ ದಕ್ಷಿಣದ ದಂಡಯಾತ್ರೆಯಲ್ಲಿ ಮಲ್ಲಿ ಕಾಫರ್‌ನು ಶ್ರೀರಂಗದ ಆಸುಪಾಸಿನಲ್ಲಿ ಬಂದಿದ್ದ. ಆಗ

ಸ್ಥಳೀಯರು ಆಲಯದ ವಾರ್ಷಿಕ ಉತ್ಸವವನ್ನು ನಡೆಸುತ್ತಲಿದ್ದದ್ದರಿಂದ ಅವರಿಗೆ ತಿಳಿದುಬಂದ ಈ ವಿಷಯವನ್ನು ತೀವ್ರವಾಗಿ ಪರಿಗಣಿಸಲಿಲ್ಲ. ಆದರೆ ಅವನು ಬಹು ಸಮೀಪಕ್ಕೆ ಬಂದಾಗ ವಿಷಯದ ಗಂಭೀರತೆಯನ್ನರಿತ ಅವರು ಹಲವು ತುರ್ತು ಕ್ರಮಗಳನ್ನು ಕೈಗೊಂಡರು. ಆಲಯದ ಗರ್ಭಗುಡಿಯನ್ನು ಮುಚ್ಚಿ, ಆಭರಣಗಳನ್ನು ಮುಚ್ಚಿಡಲಾಯಿತು. ಪಿಳ್ಳೈ ಲೋಕಾಚಾರ್ಯ ಮತ್ತಿತರ ಭಕ್ತರು ಶ್ರೀರಂಗನಾಥನ ಉತ್ಸವ ವಿಗ್ರಹನ್ನು ಶ್ರೀರಂಗದಿಂದ ಹೊರಕ್ಕೆ ಸಾಗಿಸಿ, ಸ್ಥಳದಿಂದ ಸ್ಥಳಕ್ಕೆ ಸಾಗಿಸುತ್ತ ಕಡೆಗೆ ತಿರುಮಲೆಯನ್ನು ತಲುಪಿದರು. ಇಲ್ಲಿನ ಕಮರಿಯೊಂದರಲ್ಲಿ ಆ ಮೂರ್ತಿಯನ್ನು ಬಹುಕಾಲ ಇಡಲಾಗಿದ್ದಿತು. ಕೋಯಿಲ್ ಒಳಗು ಹೇಳುವ ಕಾಲ ಮಾತ್ರ ತಪ್ಪು-ಕಾರಣ ಮಲ್ಲಿಕಾಫರ್‌ನ ದಂಡಯಾತ್ರೆ ನಡೆದಿದ್ದು ಕ್ರಿ.ಶ. 1309-10 ರಲ್ಲಿ,ಕ್ರಿ.ಶ.1327ರಲ್ಲಿ ಅಲ್ಲ.ಈ ಆಲಯ ಚರಿತ್ರೆಯಲ್ಲಿ ನಡೆದ ಘಟನೆಯ ಕಾಲವನ್ನು ಕ್ರಿ.ಶ.1310 ಎನ್ನಬೇಕು.

ಮಲ್ಲಿಕಾಫರ್‌ನು ದೆಹಲಿಗೆ ಹಿಂದಿರುಗಿದ ನಂತರದಲ್ಲಿ ದಕ್ಷಿಣದ ಹೈಂದವ ಸಾಮ್ರಾಜ್ಯಗಳ ತೊಂದರೆಗಳು ತೀರಲಿಲ್ಲ. ದೆಹಲಿಯ ಸಿಂಹಾಸನ ಖಿಲ್ಜಿಗಳಿಂದ ತೊಗ್‌ಲಖರಿಗೆ ಸೇರಿತು. ಕ್ರಿ.ಶ. 1321 ರಲ್ಲಿ ತನ್ನ ಮಗ ಉಲಗ್‌ಖಾನನ ನೇತೃತ್ವದಲ್ಲಿ ಒಂದು ಸೈನ್ಯವನ್ನು ಕಾಕತೀಯರ ಮೇಲೆ ದಂಡೆತ್ತಿ ಹೋಗಲು ಘಿಯಾಸುದ್ದೀನನು ಕಳುಹಿಸಿದ. ಆಂಧ್ರದ ಸೇನಾನಿಗಳು ತೀವ್ರ ವಿರೋಧವನ್ನೊಡ್ಡಿ,ದಂಡನ್ನು ಹಿಮ್ಮರಳಿಸಿದರು. ಉಲಗ್ ಖಾನನು ಕ್ರಿ.ಶ.1323 ರಲ್ಲಿ ಕಾಕತೀಯರು ಯಾವುದೇ ಸಿದ್ಧತೆಯನ್ನೂ ನಡೆಸದೆ ಇದ್ದಾಗ, ಪುನಃ ಧಾಳಿಯನ್ನು ಆರಂಭಿಸಿದ.ಯುದ್ಧ ಕೋಲಾಹಲ ಭರಿತರಾಗಿ ಕಾಕತೀಯರ ರಾಜ ಸೆರೆಯಾಳಾದ. ಕಾಕತೀಯರ ಮೇಲಣ ವಾರಂಗಲ್ ಯುದ್ಧದ ನಂತರ ಸೈನ್ಯವು ಕರ್ನೂಲು, ಕಡಪಗಳನ್ನು ಮುತ್ತಿತು. ಉಲಗ್‌ಖಾನನು ಪೂರ್ವದ ನೆಲ್ಲೂರು ಪಶ್ಚಿಮದ ಕ್ವಿಲಾನ್ ನಡುವಣ ಮಲಬಾರನ್ನು ಹಿಡಿದು,ಆಂಧ್ರ ಒರಿಸ್ಸಾಗಳ ತೀರ ಪ್ರದೇಶದಿಂದ ದೆಹಲಿಗೆ ಹಿಂದಿರುಗಿದ. ಹೀಗಾಗಿ ಎರಡನೆಯ ಬಾರಿಯೂ ತಿರುಪತಿ-ತಿರುಮಲೆಗಳು ಆಕ್ರಮಣಕಾರರ ಹಾದಿಯಲ್ಲಿಲ್ಲದೆ ಉಳಿದುಹೋಯಿತು.

ಉಲಗ್‌ಖಾನನು ತಾನು ಆಕ್ರಮಿಸಿದ ಪ್ರದೇಶಗಳಲ್ಲಿ ಸಮರ್ಥರಾದ ರಾಜಪ್ರತಿನಿಧಿಗಳನ್ನು ನೇಮಿಸಿದ. ದೆಹಲಿಗೆ ಹಿಂದಿರುಗಿದ ನಂತರ ತನ್ನ ತಂದೆಯನ್ನು ಹತ್ಯೆಗೈದು ಮಹಮದ್ ಬಿನ್ ತೊಗ್ಲಖ್ ನಾಮಧಾರಿಯಾಗಿ ಸಿಂಹಾಸನವನ್ನೇರಿದ. ಆ ನಂತರ ಆಂಧ್ರ ರಾಜ್ಯದವರು ತಮ್ಮ ಈ ಪರಾಧೀನತೆಯನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು.ಕಾಕತೀಯ ಪ್ರತಾಪರುದ್ರನ ಸೇನಾನಿಗಳು, ಸಾಮಂತರು ಪ್ರಜೆಗಳನ್ನು ಸೇರಿಸಿಕೊಂಡು ತಮ್ಮ ಮೇಲಣ ಸುಲ್ತಾನನ ರಾಜಪ್ರತಿನಿಧಿಗಳನ್ನು ಪದಚ್ಯುತಗೊಳಿಸಿ ಓಡಿಸಿದರು. ಹೀಗಾಗಿ ಆಂಧ್ರದ ತೀರಪ್ರದೇಶ, ತೆಲಂಗಾಣ,ರಾಯಲಸೀಮೆಗಳು ಸ್ವತಂತ್ರವಾದವು. ಉಲಗ್‌ಖಾನನು ಓರುಗಲ್ಲನ್ನು ಆಕ್ರಮಿಸಿದಾಗ ತಲೆ ತಪ್ಪಿಸಿ ಕೊಂಡವರಲ್ಲಿ,ಸಂಗಮ ವಂಶದವರೂ, ಕಾಕತೀಯ ಪ್ರತಾಪರುದ್ರನ ಕೋಶಾಧಿಕಾರಿಗಳೂ ಆಗಿದ್ದ ಹರಿಹರ. ಬುಕ್ಕ ಸೋದರರರೂ ಇದ್ದರು. ಇವರಿಬ್ಬರೂ ತುಂಗಭದ್ರೆಯ ದಡದಲ್ಲಿದ್ದ ಕಿರುರಾಜ್ಯ ಕಂಪಿಲದಲ್ಲಿ ಆಶ್ರಯ ಪಡೆದರು. ಕಂಪಿಲರಾಯನ ಮೇಲೆ ಮಹಮದ್ ಬಿನ್ ತುಗ್ಲಖ್‌ನು ಕ್ರಿ.ಶ.1327 ರಲ್ಲಿ ಒಂದು ಸೈನ್ಯವನ್ನು ಕಳುಹಿಸಿದನು. ಕಂಪಿಲರಾಯನನ್ನು ಕೊಂದು ಹಲವರನ್ನು ಸೆರೆ ಹಿಡಿಯಲಾಯಿತು.ಕಂಪಿಲ ರಾಜ್ಯವನ್ನಾಳಲು ಮುಸಲ್ಮಾನ ರಾಜ ಪ್ರತಿನಿಧಿಯೋರ್ವನ ನೇಮಕವಾಯಿತು. ಆದರೆ ಕೆಲವೇ ದಿನಗಳಲ್ಲಿ ಸ್ಥಳೀಯರು ದಂಗೆಯೆದ್ದು ರಾಜ ಪ್ರತಿನಿಧಿಯನ್ನು ಓಡಿಸಿದರು.ದೆಹಲಿಗೆ ಹೊರಟ ಸೆರೆಯಾದವರಲ್ಲಿ ಹರಿಹರನನ್ನು ಬುಕ್ಕರೂ ಇದ್ದು, ಸುಲ್ತಾನನು ಹರಿಹರರನ್ನು ರಾಜಪ್ರತಿನಿಧಿಯನ್ನಾಗಿಯೂ ಬುಕ್ಕನನ್ನು ಸೇನಾನಿಯಾಗಿಯೂ ಮಾಡಿ ಕೈ ತಪ್ಪಿದ ಕಂಪಿಲರಾಜ್ಯದಲ್ಲಿ ಶಾಂತಿ ಭದ್ರತೆಗಳನ್ನು ಸ್ಥಾಪಿಸಲು ಕಳುಹಿಸಿದ. ಈ ಸೋದರರು ದಂಗೆಯನ್ನಡಗಿಸಿ,ಇಡೀ ರಾಯಲಸೀಮೆಯ ಪ್ರಾಂತ್ಯದಲ್ಲಿ ಶಾಂತಿಯನ್ನು ಸ್ಥಾಪಿಸಿದರು. ನಂತರ ಸಂತ ವಿದ್ಯಾರಣ್ಯರ ಸಂಪರ್ಕಕ್ಕೆ ಬಂದ ಇವರು ಅವರ ಸ್ಫೂರ್ತಿಯಿಂದ ಒಂದು ಹೊಸ ಸಾಮ್ರಾಜ್ಯವನ್ನು ಕಟ್ಟಿ,ಹಿಂದೂ ಧರ್ಮ, ಸಂಸ್ಕೃತಿಗಳನ್ನು ವಿಧರ್ಮೀಯರ ಹೊಡೆತಗಳಿಂದ ರಕ್ಷಿಸಲು ಮುಂದಾದರು. ಹೀಗೆ ಕ್ರಿ.ಶ.1336 ರಲ್ಲಿ ತುಂಗಭದ್ರೆಯ ದಕ್ಷಿಣ ದಡದಲ್ಲಿ ವಿಜಯನಗರವೆಂಬ ನಗರವನ್ನು ಸ್ಥಾಪಿಸಿ,ಅದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿದರು. ಸುಲ್ತಾನನು ತೀವ್ರವಾದ ಇತರ ಸಮಸ್ಯೆಗಳ ಒತ್ತಡದಲ್ಲಿದ್ದುದರಿಂದ ಹರಿಹರ ಬುಕ್ಕರ ಅವಿಧೇಯತೆಯನ್ನು ತಡೆಯಲು ಯಾವ ಕ್ರಮವನ್ನೂ ಕೈಕೊಳ್ಳಲಾಗಲಿಲ್ಲ.

(ಮುಂದುವರೆಯುತ್ತದೆ.)




11-10-2021 ತಿರುಮಲೆ ಬ್ರಹ್ಮೋತ್ಸವಗಳ ಸಂದರ್ಭದಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಗೌ॥ ಶ್ರೀ ವೈ.ಎಸ್. ಜಗನ್ ಮೋಹನ್ ರೆಡ್ಡಿಯವರು ಗರುಡಸೇವೆಯಲ್ಲಿ ಪಾಲ್ಗೊಂಡು ಆಂಧ್ರಪ್ರದೇಶದ ವತಿಯಿಂದ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸಿದರು, ಅನಂತರ ದೊಡ್ಡಜೀಯರ್, ಚಿಕ್ಕ ಜೀಯರ್ ರವರಿಂದ ಆಶೀರ್ವಾದ ಪಡೆದರು.




11-10-2021 ರಂದು ತಿರುಪತಿ ಅಲಿಪಿರಿ ಬಳಿ "ಶ್ರೀ ವೆಂಕಟೇಶ್ವರ ಸಪ್ತ ಗೋ ಪ್ರದಕ್ಷಿಣಾ ಮಂದಿರ" ಸಮುದಾಯವನ್ನು ಪ್ರಾರಂಭಿಸಿ, ಗೋವಿಗೆ ಹುಲ್ಲ (ಗ್ರಾಸ) ನ್ನು ನೀಡುತ್ತಿರುವ ಗೌರವ ಮುಖ್ಯಮಂತ್ರಿ ಶ್ರೀ ವೈ.ಎಸ್.ಜಗನ್ ಮೋಹನ್ ರೆಡ್ಡಿಯವರು, ನಂತರ ಪ್ರಾಂಗಣವನ್ನು ಪರಿಶೀಲಿಸುತ್ತಿರುವ ದೃಶ್ಯ.





11-10-2021 ರಂದು ಪುನಃ ನಿರ್ಮಿಸಿದ ಅಲಿಪಿರಿಯ ನಡೆಯುವ ದಾರಿಯನ್ನು ಪ್ರಾರಂಭಿಸಿ, ಅನಂತರ 12-10-2021 ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ ತುಲಾಭಾರದಲ್ಲಿ ಪಾಲ್ಗೊಂಡ ಗೌರವ ಮುಖ್ಯಮಂತ್ರಿ ಶ್ರೀ ವೈ.ಎಸ್.ಜಗನ್‌ಮೋಹನ್‌ರೆಡ್ಡಿಯವರು, ಅನಂತರ ಅವರನ್ನು ಆಶೀರ್ವದಿಸುತ್ತಿರುವ ಅರ್ಚಕರು.

## ತಿರುಮಲೆ ತಿರುಪತಿ ದೇವಸ್ಥಾನಗಳು

## ತಿರುಮಲೆ ಸ್ವಾಮಿಯವರ ಆಲಯದಲ್ಲಿ 07-10-2021 ರಿಂದ 15-10-2021 ರ ವರೆಗೆ ಏಕಾಂತವಾಗಿ ನಡೆದ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವದ ದೃಶ್ಯಗಳು



ಸೇನಾಧಿಪತಿ ಉತ್ಸವ



ಧ್ವಜಾರೋಹಣ



ದೊಡ್ಡಶೇಷವಾಹನ



ಸಿಂಹವಾಹನ



ಕಲ್ಪವೃಕ್ಷವಾಹನ



ಸರ್ವಭೂಪಾಲವಾಹನ

# ತಿರುಮಲೆ ಸ್ವಾಮಿಯವರ ಆಲಯದಲ್ಲಿ 07-10-2021 ರಿಂದ 15-10-2021 ರ ವರೆಗೆ ಏಕಾಂತವಾಗಿ ನಡೆದ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವದ ದೃಶ್ಯಗಳು



ಗರುಡವಾಹನ



ಹನುಮದ್ವಾಹನ



ಗಜವಾಹನ



ಸೂರ್ಯಪ್ರಭವಾಹನ



ಚಂದ್ರಪ್ರಭ ವಾಹನ



ಚಕ್ರಸ್ನಾನ

# ತಿರುಮಲೆ ತಿರುಪತಿ ದೇವಸ್ಥಾನಗಳು



11-10-2021 ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ 2022 ರ ನೂತನ ಸಂವತ್ಸರ ಕ್ಯಾಲೆಂಡರ್ ಡೈರಿಗಳನ್ನು ಆವಿಷ್ಕರಿಸುತ್ತಿರುವ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಗೌ॥ ಶ್ರೀ ವೈ.ಎಸ್. ಜಗನ್ ಮೋಹನ್ ರೆಡ್ಡಿಯವರು ಈ ಕಾರ್ಯಕ್ರಮದಲ್ಲಿ ಮಂತ್ರಿಗಳು, ತಿ.ತಿ.ದೇ. ಆಡಳಿತಮಂಡಳಿ ಅಧ್ಯಕ್ಷರು ಮತ್ತು ತಿ.ತಿ.ದೇ. ಉನ್ನತಾಧಿಕಾರಿಗಳು ಪಾಲ್ಗೊಂಡ ದೃಶ್ಯ.



11-10-2021 ರಂದು ತಿರುಪತಿ ಬರ್ಡ್ ಆಸ್ಪತ್ರೆಯ ಪ್ರಾಂಗಣದಲ್ಲಿ ಶ್ರೀಪದ್ಮಾವತಿ ಚಿಕ್ಕಮಕ್ಕಳ ಹೃದಯಾಲಯ ಆಸ್ಪತ್ರೆಯನ್ನು ಪ್ರಾರಂಭಿಸಿದ ಮುಖ್ಯ ಮಂತ್ರಿ ಶ್ರೀ. ವೈ.ಎಸ್. ಜಗನ್ ಮೋಹನ್ ರೆಡ್ಡಿಯವರು. ಈ ಕಾರ್ಯಕ್ರಮದಲ್ಲಿ ಮಂತ್ರಿಗಳು, ತಿ.ತಿ.ದೇ. ಆಡಳಿತಮಂಡಳಿ ಅಧ್ಯಕ್ಷರು ಮತ್ತು ತಿ.ತಿ.ದೇ. ಉನ್ನತಾಧಿಕಾರಿಗಳು ಪಾಲ್ಗೊಂಡರು.






12-10-2021 ರಂದು ತಿರುಮಲೆ ಎಸ್.ವಿ.ಬಿ.ಸಿ. ಕನ್ನಡ , ಹಿಂದಿ ಚಾನಲ್‌ಗಳನ್ನು ಪ್ರಾರಂಭಿಸುತ್ತಿರುವ ಗೌರವ ಮುಖ್ಯಮಂತ್ರಿ ಶ್ರೀ ವೈ.ಎಸ್. ಜಗನ್ ಮೋಹನ್ ರೆಡ್ಡಿಯವರು. ಚಿತ್ರದಲ್ಲಿ ಮಂತ್ರಾಲಯ ಶ್ರೀರಾಘವೇಂದ್ರ ಪೀಠಾಧಿಪತಿ ಶ್ರೀ ಶ್ರೀ ಶ್ರೀ ಸುಬುಧೇಂದ್ರ ತೀರ್ಥ ಸ್ವಾಮಿಯವರು, ಈ ಕಾರ್ಯಕ್ರಮದಲ್ಲಿ ಮಂತ್ರಿಗಳು ತಿ.ತಿ.ದೇ. ಆಡಳಿತಮಂಡಳಿ ಅಧ್ಯಕ್ಷರು ಮತ್ತು ತಿ.ತಿ.ದೇ. ಉನ್ನತಾಧಿಕಾರಿಗಳು ಪಾಲ್ಗೊಂಡರು.



12-10-2021 ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ ನೂತನ ಬೂಂದಿ ಪೋಟು ಅನ್ನು ಪ್ರಾರಂಭಿಸಿದ ಗೌರವ ಮುಖ್ಯಮಂತ್ರಿ ಶ್ರೀ ವೈ.ಎಸ್.ಜಗನ್ ಮೋಹನ್ ರೆಡ್ಡಿಯವರು, ಈ ಕಾರ್ಯಕ್ರಮದಲ್ಲಿ ಮಂತ್ರಿಗಳು , ತಿ.ತಿ.ದೇ. ಆಡಳಿತ ಮಂಡಳಿ ಅಧ್ಯಕ್ಷರು ಮತ್ತು ತಿ.ತಿ.ದೇ. ಉನ್ನತಾಧಿಕಾರಿಗಳು ಪಾಲ್ಗೊಂಡರು.



25-09-2021 ರಂದು ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಯಾಗಿ ಶ್ರೀ ವಿ. ವೀರಬ್ರಹ್ಮಂ, ಐ.ಎ.ಎಸ್., ರವರ ಪ್ರಮಾಣ ಸ್ವೀಕರಣೆಯ ದೃಶ್ಯ.

# ತಿರುಮಲೆ - ತಿರುಪತಿಯ ವೆಂಕಟೇಶ ಮತ್ತು ವಿಜಯನಗರದ ಅರಸರು

- ಡಾ|| ಎಸ್.ನಂಜುಂಡಸ್ವಾಮಿ

ಕರ್ನಾಟಕ ರಾಜಮನೆತನಗಳಿಗೂ ತಿರುಮಲೆ-ತಿರುಪತಿಯ ವೆಂಕಟೇಶ್ವರನಿಗೂ ಅವಿನಾಭಾವ ಸಂಬಂಧವಿದೆ. ಅದರಲ್ಲೂ ಮುಖ್ಯವಾಗಿ ವಿಜಯನಗರ ಸಾಮ್ರಾಜ್ಯದ, ಸಾಳುವ ಮತ್ತು ತುಳುವ ಮನೆತನದವರಿಗೂ,ಕೆಲವು ಪಾಳೆಯಗಾರರಿಗೂ ತಿರುಮಲೆಯ ವೇಂಕಟರಮಣ ಆರಾಧ್ಯ ದೈವವಾಗಿದ್ದನು.ಸಾಳುವ ಮತ್ತು ತುಳುವ ವಂಶದವರು ಸಂಪೂರ್ಣವಾಗಿ ವೈಷ್ಣವ ಧರ್ಮದ ಅನುಯಾಯಿಗಳಾಗಿದ್ದರು. ಆದರೂ ಕೂಡಾ ಶೈವಪಂಥಕ್ಕೂ ಕೂಡಾ ಅವರು ಸಮಾನವಾದ ಭಕ್ತಿ ಗೌರವಗಳಿಂದ ನಡೆದುಕೊಳ್ಳುತ್ತಿದ್ದರು.

ಸಾಳುವ ನರಸಿಂಹನು ತಿರುಪತಿಯ ಬಳಿಯ ಚಂದ್ರಗಿರಿಯಿಂದ ಮಹಾ ಮಂಡಲೇಶ್ವರನಾಗಿ ಆಳುತ್ತಿದ್ದನು, ಮುಂದೆ ವಿಜಯನಗರ ಸಾಮ್ರಾಜ್ಯದ ಅಧಿಪತಿಯಾದನು.ಸಾಳುವ ನರಸಿಂಹನು ತಿರುಮಲೆಯ ವೆಂಕಟೇಶನ ಮಹಾಭಕ್ತನಾಗಿದ್ದು, ತಿರುಮಲೆ ಮತ್ತು ತಿರುಪತಿಯ ದೇವಾಲಯಗಳಿಗೆ ಅನೇಕ ದಾನದತ್ತಿಗಳನ್ನು ನೀಡಿದನು. ವೆಂಕಟೇಶ್ವರನ ಉತ್ಸವಗಳ ಆಚರಣೆ, ದೇವಾಲಯಗಳ ಜೀರ್ಣೋದ್ಧಾರ, ವಿಸ್ತರಣೆ ಮತ್ತು ನೂತನ ದೇವಾಲಯಗಳ ನಿರ್ಮಾಣ,ಕಲ್ಯಾಣಿ ಮತ್ತು ತಿರುನಂದನವನಗಳನ್ನು (ಹೂದೋಟ) ನಿರ್ಮಾಣ ಮಾಡಿದನು. ಇವನು ತಿರುಮಲೆಯಲ್ಲಿ ಶ್ರೀವೈಷ್ಣವ ಭಕ್ತರ ಭೋಜನಕ್ಕಾಗಿ ರಾಮಾನುಜ ಕೂಟಗಳನ್ನು ಏರ್ಪಡಿಸಿದ ವಿಷಯಗಳು ಶಾಸನಗಳಿಂದ ತಿಳಿದುಬರುತ್ತದೆ. ತಿರುಮಲೆ ಮತ್ತು ತಿರುಪತಿಯಲ್ಲಿ ದೇವಾಲಯಗಳ ಪೂಜಾಕೈಂಕರ್ಯಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಕಂದಾಡೆ ರಾಮಾನುಜ ಅಯ್ಯಂಗಾರ್ ಎಂಬ ತನ್ನ ಗುರುಗಳಿಗೆ ಅಧಿಕಾರ ನೀಡಿ ನೇಮಿಸಿದ್ದನು. ತಿರುಪತಿ ಗೋವಿಂದರಾಜ ದೇವಾಲಯದಲ್ಲಿರುವ ಕ್ರಿ.ಶ.1467 ರ ಶಾಸನದಲ್ಲಿ, ಸಾಳುವ ನರಸಿಂಹನು ರಾಮಾನುಜ ಕೂಟವನ್ನೂ ಏರ್ಪಡಿಸಿದ ಉಲ್ಲೇಖವಿದೆ. ತಿರುಮಲೆಯ ಅರ್ಚಕರು ದೇವಾಲಯದ ಧನಕನಕ ವಸ್ತು ವಾಹನಗಳನ್ನು




ಸ್ವಂತಕ್ಕೆ ಬಳಸಿಕೊಂಡಾಗ ಸಾಳುವ ನರಸಿಂಹನು ಅವರನ್ನು ಶಿಕ್ಷಿಸಿದನೆಂದು ತಿಳಿದು ಬರುತ್ತದೆ.

ತುಳುವ ವಂಶದ ಕೃಷ್ಣದೇವರಾಯ (1509 - 1529), ಅಚ್ಯುತದೇವರಾಯ (1529 - 1542), ಸದಾಶಿವರಾಯರ (1542 - 1565 ) ಅವಧಿಯಲ್ಲಿ ಶ್ರೀವೈಷ್ಣವ ಪಂಥಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಕರ್ನಾಟಕ ರಾಜ್ಯ ರಮಾರಮಣ, ಆಂಧ್ರಭೋಜ, ಶ್ರೀ ಕೃಷ್ಣದೇವರಾಯನು ಕ್ರಿ.ಶ.1509 ರಲ್ಲಿ ಪಟ್ಟಕ್ಕೆ ಬಂದನು.ಶ್ರೀಕೃಷ್ಣದೇವರಾಯನು ತಿರುಮಲೆಯ ವೆಂಕಟೇಶನು ಪರಮಭಕ್ತ,ಅವನ ಅನುಜ್ಞೆಯಿಂದಲೇ ರಾಯನು ವೆಂಕಟೇಶನ ಪರಮಭಕ್ತಳಾದ ಗೋದಾದೇವಿಯ ಕಥೆಯನ್ನು ಒಳಗೊಂಡ“ವಿಷ್ಣು ಚಿತ್ತೀಯ ಅಥವಾ ಅಮುಕ್ತ ಮಾಲ್ಯದ”ಎಂಬ ತೆಲುಗು ಕಾವ್ಯವನ್ನು ಬರೆದನು. ಕೃಷ್ಣದೇವರಾಯನು ಉತ್ಕಲ ಅಥವಾ ಕಳಿಂಗ ದೇಶದ ಮೇಲೆ ದಂಡೆತ್ತಿ ಹೋಗುವಾಗ, ಬೆಜವಾಡದಲ್ಲಿ ತಂಗಿದ್ದು, ಅಲ್ಲಿಂದ ಒಂದು ದಿನ ಶ್ರೀಕಾಕುಳಂ ಕ್ಷೇತ್ರಕ್ಕೆ ಹೋಗಿ, ಆಂಧ್ರ ವಿಷ್ಣುವೆಂದು ಪ್ರಸಿದ್ಧನಾದ ಮಧುಮಥನ ಸ್ವಾಮಿಯನ್ನು ದರ್ಶನ ಮಾಡಿ, ಅಲ್ಲಿಯೇ ಹರಿವಾಸದ ನಿಮಿತ್ತ ಉಪವಾಸವನ್ನು ಆಚರಿಸಿ ನಿದ್ರಿಸುತ್ತಿದ್ದನಂತೆ. ಆಗ ಮಹಾ ವಿಷ್ಣುವು ಸ್ವಪ್ನದಲ್ಲಿ ಕಾಣಿಸಿಕೊಂಡು “ರಾಯನೇ ನೀನು ನನ

ಗಾಗಿ ಆಂಧ್ರ ಭಾಷೆಯಲ್ಲಿ ಅಂದರೆ ತೆಲುಗಿನಲ್ಲಿ ಒಂದು ಕೃತಿಯನ್ನು ರಚಿಸು.ನನಗೆ ಪ್ರಿಯಳಾದ ಶ್ರೀರಂಗದ ಗೋದಾ ದೇವಿಯ ವೃತ್ತಾಂತವನ್ನು ಕಾವ್ಯ ರೂಪದಲ್ಲಿ ರಚಿಸು. ಕನ್ನಡ ರಾಯ ದೇಶ ಭಾಷೆಗಳಲ್ಲಿ ತೆಲುಗು ಚೆನ್ನ ಎಂಬುದು ನಿನಗೆ ಗೊತ್ತಿಲ್ಲವೇ ಆದುದರಿಂದ ಈ ಕಾವ್ಯವನ್ನು ತೆಲುಗು ಭಾಷೆ ಯಲ್ಲಿಯೇ ರಚಿಸು,ಆ ಕಾವ್ಯವನ್ನು ನಿನ್ನ ಇಷ್ಟ ದೈವವಾದ ವೇಂಕಟಾದ್ರಿಯ ವೆಂಕಟೇಶ್ವರನಿಗೆ ಅಂಕಿತ ಮಾಡು ಎಂದು ಅಪ್ಪಣೆ ಕೊಡಿಸಿದನಂತೆ". ಆಂಧ್ರ ಮಹಾವಿಷ್ಣುವೇ ಸ್ವಪ್ನದಲ್ಲಿ ಬಂದು ಕಥಾವಸ್ತು ಮತ್ತು ಭಾಷೆಯನ್ನು ಸೂಚಿಸಿದ ಮೇಲೆ,ರಾಯನು ದೇವರ ಆಜ್ಞೆಯನ್ನು ಬಹಳ ಸಂತೋಷದಿಂದ ಸ್ವೀಕರಿಸಿ, ಅಮುಕ್ತಮಾಲ್ಯದ ಎಂಬ ಕಾವ್ಯ ರಚನೆ ಮಾಡಿ ಅದನ್ನು ತಿರುಮಲೆಯ ವೆಂಕಟೇಶ್ವರನಿಗೆ ಅಂಕಿತ ಮಾಡಿದ್ದಾನೆ.

ಶ್ರೀಕೃಷ್ಣದೇವರಾಯನು ಸುಮಾರು ಏಳು (7) ಬಾರಿ ತಿರುಪತಿಗೆ ಭೇಟಿ ನೀಡಿದ್ದನೆಂಬುದು ದಾಖಲೆಗಳಿಂದ ತಿಳಿದು ಬರುತ್ತದೆ. ಕೃಷ್ಣದೇವರಾಯನ ಸುಮಾರು 30 ಶಾಸನಗಳು, ಇವನ ರಾಣಿಯರಾದ ತಿರುಮಲದೇವಿ ಮತ್ತು ಚಿನ್ನಾದೇವಿ ಯರ ಹೆಸರಿನಲ್ಲಿಯೂ ತಲಾ 13 ಶಾಸನಗಳು ತಿರುಮಲೆ. ತಿರುಪತಿಯಲ್ಲಿರುವುದು ಕಂಡು ಬರುತ್ತದೆ.ತಿರುಮಲೆಯ ವೇಂಕಟರಮಣನಿಗೆ ಸೇವೆ ಮಾಡಿ, ವೆಂಕಟೇಶ್ವರನಿಗೆ ನಾನಾ ಬಗೆಯ ಅಮೂಲ್ಯ ಆಭರಣಗಳನ್ನು ಕಾಣಿಕೆಯಾಗಿ ಅರ್ಪಿಸಿ, ವೆಂಕಟೇಶ್ವರನ ಸನ್ನಿಧಿಯಲ್ಲಿ ತುಲಾ ಪುರುಷವೇ ಮೊದಲಾದ ದಶದಾನಗಳನ್ನು ಮಾಡಿ, ಪೂಜೆಗೆ, ಅನ್ನ ಸಂತರ್ಪಣೆಗೆ ಅನೇಕ ಹಳ್ಳಿಗಳನ್ನು ದತ್ತಿಯಾಗಿ ನೀಡಿದ ವಿಚಾರ ಶಾಸನಗಳಿಂದ ತಿಳಿದು ಬರುತ್ತದೆ. ಪಟ್ಟಕ್ಕೆ ಬಂದ ನಂತರ ಮೊದಲ ಬಾರಿಗೆ ಅವನು ವೆಂಕಟೇಶನ ದರ್ಶನಕ್ಕೆ ತಿರುಮಲೆಗೆ ಹೋದಾಗ, ಉಮ್ಮತ್ತೂರು ಯುದ್ಧದಲ್ಲಿ ಜಯಗಳಿಸಿದರೆ ವಜ್ರಹಾರವನ್ನು, ರಾಯಚೂರು ಕೈವಶವಾದರೆ ಸ್ವರ್ಣ ಕಿರೀಟವನ್ನು, ಮುತ್ತಿನ ಕಂಠೀಹಾರವನ್ನು ಕೊಡುವುದಾಗಿ ತನ್ನ ಆರಾಧ್ಯ ದೈವ ವೆಂಕ ಟೇಶನಿಗೆ ಹರಕೆ ಹೊತ್ತುಕೊಂಡನೆಂದು ತಿಳಿದು ಬರುತ್ತದೆ. ಶಿವನ ಸಮುದ್ರ (ಉಮ್ಮತ್ತೂರು), ರಾಯಚೂರು, ಕಲಬುರ್ಗಿಗಳ ಮೇಲಿನ ದಂಡಯಾತ್ರೆಯಲ್ಲಿ ದೊರೆತ ವಿಜಯಗಳಿಗಾಗಿ ರಾಯನು ವೆಂಕಟೇಶ್ವರನಿಗೆ ಒಂದು ರತ್ನ ಖಚಿತವಾದ ಸ್ವರ್ಣ ಕಿರೀಟವನ್ನು, ಒಂದು ಕಂಠೀಹಾರವನ್ನು, ಒಂದು ಮುತ್ತಿನ ಕಂಠಿಯನ್ನು, ವೈಢೂರ್ಯದಿಂದ ರಂಜಿತವಾದ ಆಭರಣವನ್ನು ಭುಜಕೀರ್ತಿಗಳನ್ನು ಕಾಣಿಕೆಯಾಗಿ ಸಲ್ಲಿಸಿದನು.ಅವನ ರಾಣಿಯರು ಬಂಗಾರದ ಪಾತ್ರೆಗಳನ್ನು ಸಮರ್ಪಿಸಿದರು.ತನ್ನ ಮಾತಾಪಿತೃಗಳಿಗೆ ಪುಣ್ಯವಾಗಲಿ ಎಂದು ಶ್ರೀವೈಷ್ಣವ ಭಕ್ತರ ಅನ್ನ ಸಂತರ್ಪಣೆಗಾಗಿ ಕೆಲವು ಗ್ರಾಮಗಳನ್ನು ರಾಯನು ತಿರು ಮಲೆಯ ದೇವಾಲಯಕ್ಕೆ ದತ್ತಿಯಾಗಿ ನೀಡಿದನು.

ಕೃಷ್ಣದೇವರಾಯನ ಕಳಿಂಗ ಜೈತ್ರಯಾತ್ರೆಯು 1513 ರಿಂದ 1518 ರವರೆಗೆ ಮೂರು ಹಂತದಲ್ಲಿ ನಡೆಯಿತೆಂದು ತಿಳಿದು ಬರುತ್ತದೆ.ಮೊದಲನೆಯ ಸಲ ಕಳಿಂಗ ದೇಶದ ದೊರೆ ಗಜಪತಿ ರಾಜನನ್ನು ಸೋಲಿಸಿ ಉದಯಗಿರಿಯನ್ನು ವಶಪಡಿಸಿ ಕೊಂಡ ನಂತರ ಕೃಷ್ಣದೇವರಾಯನು ತಿರುಪತಿಯ ಯಾತ್ರೆ ಯನ್ನು ಕೈಗೊಂಡನು.ಉದಯಗಿರಿಯ ವಿಜಯದ ಸ್ಮರಣಾರ್ಥ ವಾಗಿ ಕ್ರಿ.ಶ.1541 ರಲ್ಲಿ ತಿರುಮಲೆಯ ವೇಂಕಟರಮಣನಿಗೆ ರಾಯನು ಮೂವತ್ತು ಸಾವಿರ ವರಹಗಳಿಂದ ಕನಕಾಭಿಷೇಕ ಮಾಡಿಸಿದನು.ತಿರುಮಲೆಯ ದೇವರ ಸನ್ನಿಧಿಯಲ್ಲಿ ಯಾವಾ ಗಲೂ ತಾನು ಇರಬೇಕೆಂದು ಸಂಕಲ್ಪ ಮಾಡಿ, ಹಾಗೂ ತನ್ನ ರಾಣಿಯರಾದ ತಿರುಮಲಾಂಬೆ ಮತ್ತು ಚಿನ್ನಾದೇವಿಯರ ತಾವ್ರದ ಪ್ರತಿಮೆಗಳನ್ನು ಮಾಡಿಸಿ ದೇವಾಲಯದಲ್ಲಿ ಸ್ಥಾಪಿಸಿದನು.ಅವು ಇಂದಿಗೂ ತಿರುಮಲೆಯ ದೇವ ಸನ್ನಿಧಿ ಯಲ್ಲಿ ವಿರಾಜಿಸುತ್ತಿವೆ.ಮತ್ತೊಂದು ಸಲ ಉದಯಗಿರಿಯ ವಿಜಯದ ನೆನಪಿಗಾಗಿ ತಿರುಪತಿಯಲ್ಲಿ ಅನ್ನ ಸಂತರ್ಪಣೆ ಮೊದಲಾದ ಅನೇಕ ಸೇವೆಗಳನ್ನು ನಡೆಸಿ, ದಶದಾನ ಗಳನ್ನು ಮಾಡಿದನು.ವೆಂಕಟೇಶನಿಗೆ ರತ್ನಖಚಿತವಾದ ಎರಡು ಬಂಗಾ ರದ ಬಳೆಗಳನ್ನು, ಇತರ ಆಭರಣಗಳನ್ನೂ ಕಾಣಿಕೆ ಯಾಗಿ ನೀಡಿದ. ಉದಯಗಿರಿಯಿಂದ ತಂದಿದ್ದ ಬಾಲ ಕೃಷ್ಣನ ಮೂರ್ತಿ ಗಾಗಿ ಹಂಪಿಯ ತುಂಗಭದ್ರೆಯ ದಕ್ಷಿಣ ದಂಡೆಯಲ್ಲಿ ಕೃಷ್ಣ ಸ್ವಾಮಿಯ ದೇವಾಲಯವನ್ನು ನಿರ್ಮಿಸಿದನು.ಇದು ಹಜಾರ ರಾಮಸ್ವಾಮಿ ದೇವಾಲಯವೆಂದು ಪ್ರಸಿದ್ಧಿಯನ್ನು ಪಡೆದಿದೆ.

ಕೃಷ್ಣದೇವರಾಯನು ಕೊಂಡವೀಡು ದುರ್ಗವನ್ನು ವಶ ಪಡಿಸಿಕೊಂಡ ನಂತರ, ಶ್ರೀಶೈಲಕ್ಕೆ ಹೋಗಿ ಮಲ್ಲಿಕಾರ್ಜುನನ ಸೇವೆ ಸಲ್ಲಿಸಿದ ನಂತರ ಪುನಃ ತಿರುಪತಿಗೆ ಆಗಮಿಸಿದನು. ತಿರುಮಲೆಯ ದೇವನಿಗೆ ನವರತ್ನ ಖಚಿತವಾದ ಪ್ರಭಾವಳಿ ಯೊಂದನ್ನು ಸಲ್ಲಿಸಿದನು.ಚಂದ್ರಗಿರಿ ಕೋಟೆಯಲ್ಲಿ ಕೆಲವು ಕಾಲ ತಂಗಿದ್ದನು. ಕೃಷ್ಣದೇವರಾಯನು ಮತ್ತೆ ಗೋವಲ

ಕೊಂಡ, ರಾಜಕೊಂಡ, ದೇವರಕೊಂಡ ಕೋವಿಲಕೊಂಡ, ಘಾಣಪುರ ಕೋಟೆಗಳನ್ನು ವಶಪಡಿಸಿಕೊಂಡು ಮೇದೂರ್‌ನಲ್ಲಿ ಗಜಪತಿಯ ಸೇವೆಯನ್ನು ಪೂರ್ಣವಾಗಿ ಸೋಲಿಸಿದನು. ಗಜ ಪತಿಯು ಕೃಷ್ಣದೇವರಾಯನೊಡನೆ ಸಂಧಿ ಮಾಡಿಕೊಂಡು ತನ್ನ ಮಗಳು ಜಗನ್ಮೋಹಿನಿಯನ್ನು ಕೃಷ್ಣದೇವರಾಯನಿಗೆ ಮದುವೆ ಮಾಡಿಕೊಟ್ಟನು. ಕೃಷ್ಣದೇವರಾಯನು ಮತ್ತೆ ಕಲ ಬುರ್ಗಿ, ಕಲ್ಯಾಣದ ಕೋಟೆಗಳನ್ನು ವಶಪಡಿಸಿಕೊಂಡ ಮೇಲೆ ಹಂಪೆಗೆ ಬಂದು ದಸರಾ ಹಬ್ಬವನ್ನು ಆಚರಿಸಿದ ನಂತರ ಮತ್ತೆ ತನ್ನ ಇಷ್ಟ ದೈವವಾದ ತಿರುಮಲೆಯ ವೆಂಕಟೇಶ್ವರನ ದರ್ಶನಕ್ಕೆ ಹೋದನು. ವೆಂಕಟೇಶನಿಗೆ ಒಂದು ಕಂಠ ಹಾರವನ್ನು, ಒಂದು ಪದಕವನ್ನು ಕಾಣಿಕೆಯಾಗಿ ಅರ್ಪಿಸಿದನು. ವೆಂಕಟೇಶನ ದೇವಳದ ಗೋಪುರದ ಮೇಲಣ ತಾವ್ರದ ತಗಡಿನ ಹೊದಿಕೆಗೆ ಮೂವತ್ತೊಂದು ಸಾವಿರ ವರಹಗಳ ಬಂಗಾರದ ಲೇಪವನ್ನು ಮಾಡಿಸಿದನು. ಪ್ರತಿ ಗುರುವಾರ ಪುಲಿಕಪ್ಪು ಸೇವೆಯನ್ನು ನಡೆಸಲು ದೇವಾಲಯಕ್ಕೆ ಒಂದು ಸಾವಿರ ವರಗಳನ್ನು ಕಾಣಿಕೆಯಾಗಿ ಅರ್ಪಿಸಿದನು. ಒಂದು ವಾರಗಳ ಕಾಲ ತಿರುಪತಿಯಲ್ಲಿ ಉಳಿದು ಪೂಜೆ, ಉತ್ಸವಗಳಲ್ಲಿ ಪಾಲ್ಗೊಂಡು, ಅಲ್ಲಿಂದ ಮಧುರೆಗೆ ತೆರಳಿದನೆಂದು ತಿಳಿದು ಬರುತ್ತದೆ.

ಕೃಷ್ಣದೇವರಾಯನಿಗೆ ಒಳಿತಾಗಬೇಕೆಂದು ಅವನ ಅನೇಕ ಸಾಮಂತರು ಅಧಿಕಾರಿಗಳು ತಿರಮಲೆಯ ವೆಂಕಟೇಶನ ಪೂಜಾ ವ್ಯವಸ್ಥೆಗೆ ಮತ್ತು ಅಲ್ಲಿ ನಡೆಯುತ್ತಿದ್ದ ರಾಮಾನುಜ ಕೂಟಕ್ಕೆ ಅನೇಕ ದತ್ತಿಗಳನ್ನು ಹಾಕಿಕೊಟ್ಟಿದ್ದಾರೆ. ತಿರುಮಲೆಯ ದೇವಾಲಯದ ಪ್ರಾಕಾರದಲ್ಲಿರುವ ವರದರಾಜಸ್ವಾಮಿ ಗುಡಿಯ ಗೋಡೆಯ ಮೇಲೆ, ಸುಬುದ್ಧಿ ರಾಮದಾಸರ್ ಮತ್ತು ಅಂಚಿಕಾ ಮುದುಶಿಲಾ ಎಂಬುವವರು ಹಾಕಿಸಿರುವ ಶಾಸನ ಬಹಳ ಮುಖ್ಯವಾದುದು. ಇವರು ಮೊದಲು ಕಳಿಂಗದ ಪ್ರತಾಪರುದ್ರ ಗಜಪತಿಯ ಸೇವೆಯಲ್ಲಿದ್ದು ನಂತರ ಕೃಷ್ಣ ದೇವರಾಯನ ಸೇನೆಯ ಮುಖ್ಯಸ್ಥರಾಗಿದ್ದರು. ಕೃಷ್ಣದೇವರಾಯನು ಇವರಿಗೆ ಜಹಗೀರಾಗಿ ನೀಡಿದ್ದ ತಂಡಲಮ್ ಮತ್ತು ತಡಪಾಡಿ ಎಂಬ ಎರಡು ಗ್ರಾಮಗಳನ್ನು ತಿರುಮಲೆಯ ವೆಂಕಟೇಶನಿಗೆ ದತ್ತಿಯಾಗಿ ಬಿಡುತ್ತಾರೆ. ಈ ಗ್ರಾಮಗಳಿಂದ ಬರುವ ಆದಾಯದಲ್ಲಿ ವೆಂಕಟೇಶ್ವರನ ಪೂಜೆ ಪ್ರಸಾದಗಳಿಗೆ, ಹೂದೋಟ ನಿರ್ವಹಣೆಗೆ, ರಾಮಾನುಜ ಕೂಟದ ಭೋಜನಕ್ಕೆ ದತ್ತಿಯಾಗಿ ಬಿಡುತ್ತಾರೆ.

ತುಳುವ ಮನೆತನದ ಸದಾಶಿವರಾಯನ (1542-72) ಕಾಲದಲ್ಲಿ ಉದಯಗಿರಿಯ ದೇವರಾಜ ಭಟ್ಟರ್ ಎಂಬುವವನು ಕ್ರಿ.ಶ. 1547 ರಲ್ಲಿ ತಿರುಪತಿಯಲ್ಲಿ ವಿಠಲೇಶ್ವರ ದೇವಾಲಯವನ್ನು ನಿರ್ಮಿಸಿ, ಈ ದೇವಾಲಯದಲ್ಲಿ ನಡೆಸುತ್ತಿದ್ದ ರಾಮಾನುಜ ಕೂಟಕ್ಕೆ, ಅಲ್ಲಿನ ಕೆಲಸಗಾರರ ವೇತನಕ್ಕೆ ಅನೇಕ ದತ್ತಿಗಳನ್ನು ಬಿಟ್ಟನು. ಈ ರಾಮಾನುಜ ಕೂಟದಲ್ಲಿ ಪ್ರತಿದಿನ ಸುಮಾರು 2000 ಜನ ಶ್ರೀವೈಷ್ಣವರಿಗೆ ಭೋಜನ ವ್ಯವಸ್ಥೆಯನ್ನು ಮಾಡಲಾಗಿತ್ತೆಂದು ತಿಳಿದು ಬರುತ್ತದೆ. ತಿರುಮಲೆ ಮತ್ತು ತಿರುಪತಿಗಳಲ್ಲಿ ಪೂಜಾ ಕಾರ್ಯಗಳಿಗೆ, ತಿರುಪತಿಯ ನಮ್ಮಾಳ್ವಾರ್ ದೇವಾಲಯದ ರಾಮಾನುಜ ಕೂಟಕ್ಕೆ ಸದಾಶಿವರಾಯನು 200 ಗೋವುಗಳನ್ನು ದಾನವಾಗಿ ನೀಡಿದ ವಿಚಾರ ತಿಳಿದು ಬರುತ್ತದೆ.

ವಿಜಯನಗರದ ಅರವೀಡು ವಂಶದವರೂ ಕೂಡಾ ಶ್ರೀ ವೈಷ್ಣವ ಪಂಥಕ್ಕೆ ಅಪಾರ ಪ್ರೋತ್ಸಾಹ ನೀಡಿದರು. ತಿರುಮಲೈ ತಿರುಪತಿ ದೇವಾಲಯಗಳಿಗೆ ಅನೇಕ ದತ್ತಿ ದಾನಗಳನ್ನು ನೀಡಿದರು. ಒಂದನೇ ತಿರುಮಲನು (1565 -1567) ಶೇಷಾಚಲ ಅಂದರೆ ತಿರುಪತಿಯಲ್ಲಿ ತುಲಾಪುರುಷ ಮತ್ತಿತರ ದಾನಗಳನ್ನು ಮಾಡಿದನೆಂದು ತಿಳಿದು ಬರುತ್ತದೆ. ಅರವೀಡು ವಂಶದ ಪೆದ್ದ ತಿರುಮಲನ ಕಾಲದಿಂದ ಶಾಸನಗಳಲ್ಲಿ "ಶ್ರೀ ವೆಂಕಟೇಶ" ಎಂಬ ಅಂಕಿತವು ಬಳಕೆಗೆ ಬಂದಿತು. ಇಮ್ಮಡಿ ಪೆದ್ದ ವೆಂಕಟನು (1586 - 1614 ) ತಿರುಮಲೆ ವೆಂಕಟೇಶ್ವರನ ಭಕ್ತಿಯ ಪ್ರತೀಕವಾಗಿ "ವೆಂಕಟಪಗೋಡ ಅಥವಾ ವೆಂಕಟರಾಯ ವರಹಾ" ಎಂಬ ಬಂಗಾರದ ನಾಣ್ಯಗಳನ್ನು ಟಂಕಿಸಿದನು. ಈ ನಾಣ್ಯದಲ್ಲಿ ವೆಂಕಟೇಶ್ವರ ಮತ್ತು ಶ್ರೀದೇವಿ ಭೂದೇವಿಯರ ಉಬ್ಬುಶಿಲ್ಪವೂ, ಹಿಮ್ಮುಖದಲ್ಲಿ ಶ್ರೀವೆಂಕಟೇಶ್ವರಾಯ ನಮಃ ಎಂಬ ನಾಗರಿ ಲಿಪಿಯ ಬರಹವೂ ಇದೆ. ಮುಮ್ಮಡಿ ವೆಂಕಟಪತಿರಾಯ ಮತ್ತು ನಾಲ್ಕನೇ ಶ್ರೀರಂಗರಾಯನ ನಾಣ್ಯಗಳೂ ಇದೇ ರೀತಿ ಇವೆ.

ಹೀಗೆ ವಿಜಯನಗರದ ಅರಸರು ತಿರುಮಲೆಯ ವೆಂಕಟೇಶ್ವರನ ಪರಮಭಕ್ತರಾಗಿ, ತಿರುಮಲೆ ಮತ್ತು ತಿರುಪತಿಯ ದೇವಾಲಯಗಳ ಅಭಿವೃದ್ಧಿಗೆ ನೂರಾರು ದತ್ತಿ ದಾನಗಳನ್ನು ನೀಡಿರುವುದು ಶಾಸನಗಳ ಆಧಾರದಿಂದ ತಿಳಿದು ಬರುತ್ತದೆ.

ಧಾರಾವಾಹಿ - 4



# ವೇದದಲ್ಲಿ ಗಣಿತ

- ರಮೇಶ್ ಕುಮಾರ್ ಬನ್ನೂರು
99018 02587

ಸಂಕಲನ, (Addition), ವ್ಯವಕಲನ (Subtraction), ಗುಣಾಕಾರ(Multiplication) ಮತ್ತು ಭಾಗಾಕಾರ (Division) ಗಣಿತಶಾಸ್ತ್ರಕ್ಕೆ ಸಂಬಂಧಿತ ಮೂಲ ಪ್ರಕ್ರಿಯೆಗಳು (Fundamental operations) ಇವುಗಳಲ್ಲಿ ಸಂಕಲನ, (Addition), ವಿವಿಧ ಅಂಕಿ ಅಂಶಗಳನ್ನು ಒಗ್ಗೂಡಿಸಿ ಮೊತ್ತವನ್ನು ಕಂಡು ಹಿಡಿಯಲು ಉಪಯೋಗಿಸುವ ಪ್ರಕ್ರಿಯೆ.

ಇಂದಿನ ರೂಢಿಯಲ್ಲಿರುವ ಪದ್ಧತಿಯ ಪ್ರಕಾರ, ಅಂದರೆ ದಶಮಾನ ಪದ್ಧತಿಯ ಅಡಿಯಲ್ಲಿ, ಎರಡು ಸಂಖ್ಯೆಗಳನ್ನು ಕೂಡಿದಾಗ ಅದರ ಮೊತ್ತವು 10 ಅಥವಾ 10 ಕ್ಕಿಂತ ಅಧಿಕವಾದರೆ ಹೀಗೆ ಬಂದ ಮೊತ್ತದ ಏಕಸ್ಥಾನದಲ್ಲಿರುವ ಸಂಖ್ಯೆಯನ್ನು ಅದೇ ಲಂಬ ಸಾಲಿನ ಕೆಳಗೆ ಮೊತ್ತವಾಗಿ ಬರೆದು, ದಶಮಸ್ಥಾನದಲ್ಲಿನ ಸಂಖ್ಯೆಯನ್ನು ಮುಂದಿನ ಲಂಬಸಾಲಿಗೆ ವರ್ಗಾಯಿಸಿ ಸೇರಿಸಿಕೊಳ್ಳಲಾಗುತ್ತದೆ.

ಉದಾಹರಣೆಗೆ:

```
 28
 56
----
 84
----
```

ಇದರಲ್ಲಿ ಮೊದಲಿಗೆ 8 ಮತ್ತು 6 ನ್ನು ಕೂಡಿದಾಗ ಮೊತ್ತ 14 ಬರುತ್ತದೆ. 14 ರಲ್ಲಿ ಏಕಸ್ಥಾನದಲ್ಲಿರುವ 4 ನ್ನು ಮೊತ್ತವಾಗಿ ಬಲಗಡೆಯ ಲಂಬಸಾಲಿನ ಕೆಳಗೆ ಬರೆದು, ದಶಮ ಸ್ಥಾನದಲ್ಲಿರುವ , 1 ನ್ನು ಮುಂದಿನ ಲಂಬಸಾಲಿಗೆ ವರ್ಗಾಯಿಸಿ ಸೇರಿಕೊಳ್ಳುತ್ತೇವೆ (carry over) ಆದರೆ ವೇದಗಣಿತ ವಿಧಾನದಲ್ಲಿ ಸ್ವಲ್ಪ ವ್ಯತ್ಯಾಸವಿದೆ.

ಶುದ್ಧ, ಅಶುದ್ಧ ಸಂಖ್ಯೆಗಳ ಹಾಗೂ ಶುದ್ಧೀಕರಣದ ಪರಿಕಲ್ಪನೆ:

ಗಣಿತದಲ್ಲಿ ಉಪಯೋಗಿಸಲ್ಪಡುವ ಅಂಕಿಗಳು (Number) ಮತ್ತು ಅವುಗಳ ಸಂಕೇತಗಳು (Numerals) ಗಳೆಂದರೆ 0,1,2,3,4,5,6,7,8,9 ಈ ಸಂಕೇತಗಳನ್ನು ಉಪಯೋಗಿಸಿ ಎಷ್ಟೇ ಅಂಕಿಗಳ ಸಂಖ್ಯೆಯನ್ನು ಬರೆಯಬಹುದು ಉದಾಹರಣೆಗೆ 97, 865, 1920, 260, 15 ಮುಂತಾದವು.ಅಂದರೆ ಮೂಲ 0 ಇಂದ 9 ರವರೆಗಿನ ಸಂಖ್ಯೆಗಳ ಸಂಯೋಗದಿಂದ ಎಲ್ಲಾ ಸಂಖ್ಯೆಗಳ ಉದ್ಭವವಾಗುತ್ತದೆ.

ವೇದಗಣಿತದ ಪದ್ಧತಿಯ ಪ್ರಕಾರ 0 ಇಂದ 9 ರ ವರೆಗಿನ ಸಂಖ್ಯೆಯನ್ನು ಶುದ್ಧ ಸಂಖ್ಯೆಗಳೆಂದೂ, ಹಾಗೂ ಈ ಸಂಖ್ಯೆ ಸಂಕೇತಗಳ ಜೋಡಣೆಯಿಂದ ಹೊರ ಹೊಮ್ಮುವ 10 ಹಾಗೂ ಅದಕ್ಕಿಂತ ದೊಡ್ಡ ಸಂಖ್ಯೆಗಳನ್ನು ಅಶುದ್ಧ ಸಂಖ್ಯೆಗಳೆಂದೂ ವರ್ಗೀಕರಿಸಲಾಗುತ್ತದೆ.

ಅಶುದ್ಧ ಸಂಖ್ಯೆಗಳನ್ನು,ವೇದಗಣಿತದ ಮೂಲ ಪ್ರಕಿಯೆಗಳಲ್ಲಿ, ಶುದ್ಧ ಸಂಖ್ಯೆಗಳನ್ನಾಗಿ ಪರಿವರ್ತಿಸಿ ಉಪಯೋಗಿಸಿಕೊಳ್ಳಲಾಗುತ್ತದೆ.ಹೀಗೆ ಅಶುದ್ಧವಾದ 10 ಅಥವಾ ಅದಕ್ಕಿಂತ ದೊಡ್ಡ ಸಂಖ್ಯೆಗಳನ್ನು (Numbers with or many digital) ಶುದ್ಧ ಸಂಖ್ಯೆಗಳಾಗಿ ಮಿತಿಗೊಳಿಸುವ ವಿಧಾನವನ್ನು ಶುದ್ಧೀಕರಣ ಎಂದು ಕರೆಯಲಾಗುತ್ತದೆ.

ಶುದ್ಧೀಕರಣ ವಿಧಾನ: 1) 2) 2),2),

ಉದಾಹರಣೆಗೆ

```
  978
  659
 7856
 4321
-----
13814
-----
```

ಇದರ ಮೊತ್ತವನ್ನು ಕಂಡು ಹಿಡಿಯಲು ಮೊದಲಿಗೆ ಮೊದಲ ಬಲಗಡೆಯ ಸಾಲಿನ ಮೊತ್ತವನ್ನು ಕಂಡು ಹಿಡಿಯೋಣ.

ಹೆಜ್ಜೆ 1 : - 8+9= 17 ಎರಡು ಅಂಕಿಗಳುಳ್ಳ ಸಂಖ್ಯೆ, ಆದ್ದರಿಂದ ಅದು ಅಶುದ್ಧ ಸಂಖ್ಯೆ

ಏಕಸ್ಥಾನದಲ್ಲಿರುವ 7 ನ್ನು ಮಾತ್ರ ಮನಸ್ಸಿನಲ್ಲಿ ಇಟ್ಟುಕೊಂಡು ದಶಮಸ್ಥಾನದಲ್ಲಿರುವ 1 ನ್ನು ಬಿಟ್ಟು ಬಿಡಿ.

ಹೆಜ್ಜೆ 2 : - ಹೀಗೆ ಬಿಡುವಾಗ 9 ರ ಬದಿಯಲ್ಲಿ ಒಂದು ಚುಕ್ಕಿ(206) ಇದೇ ಶುದ್ಧೀಕರಣ ಪ್ರಕ್ರಿಯೆ (reatric tiong to Single digit) ಇಡಿ.

ಹೆಜ್ಜೇ 3 : - ಈಗ ಮನದಲ್ಲಿ ಉಳಿಸಿಕೊಂಡ 7 ನ್ನು ಮಾತ್ರ ಮುಂದಿನ ಸಂಖ್ಯೆ 6 ಕ್ಕೆ ಸೇರಿಸಿ (17 ಕ್ಕೆ 6 ನ್ನು ಸೇರಿಸುವ ಅವಶ್ಯಕತೆ ಇಲ್ಲ) ಕೇವಲ ಏಕಾಂಕಗಳ ಕೂಡುವಿಕೆಗೆ ಮಿತಿಗೊಳ್ಳುತ್ತದೆ)

ಹೆಜ್ಜೆ - 4 : - 7 +6 = 13,13 ಅಶುದ್ಧ ಸಂಖ್ಯೆಯಾಗಿದ್ದು, 3 ನ್ನು ಮಾತ್ರ ಮನದಲ್ಲಿರಿಸಿಕೊಂಡು 1ನ್ನು ಬಿಟ್ಟು ಬಿಡಿ ಮತ್ತು 6 ರ ಬದಿಯಲ್ಲಿ ಒಂದು ಚುಕ್ಕಿ ಇಡಿ .(dot)

ಹೆಜ್ಜೆ 5 : - ಮನಸ್ಸಿನಲ್ಲಿ ಉಳಿಸಿಕೊಂಡ 3 ನ್ನು ಮುಂದಿನ ಸಂಖ್ಯೆ 1 ಕ್ಕೆ ಸೇರಿಸಿ, 3+1=4 ಆಗುತ್ತದೆ. 4 ಶುದ್ಧ ಸಂಖ್ಯೆ 4 ಏಕ ಸಂಖ್ಯೆಯಾಗಿರುವುದರಿಂದ ಅದು ಶುದ್ಧ ಸಂಖ್ಯೆ ಆದ್ದರಿಂದ ಇಲ್ಲಿ ಶುದ್ಧಿಕರಣ ಪ್ರಕ್ರಿಯೆಂದು ಅವಶ್ಯಕತೆ ಇಲ್ಲ.

ಹೆಜ್ಜೆ 6 : - ಹೀಗೆ ಪಡೆದ 4 ನ್ನು ಮೊತ್ತದ ಸಾಲಿನಲ್ಲಿ ಬರೆಯಿರಿ ಹೀಗೆ ಮೊದಲ ಲಂಬಸಾಲಿನಲ್ಲಿ ನಾವು 2 ಚುಕ್ಕಿಗಳನ್ನು ಕಾಣುತ್ತೇವೆ. 2 ನ್ನು ಮುಂದಿನ ಸಾಲಿಗೆ ವರ್ಗಾಯಿಸಿಕೊಳ್ಳಬೇಕು.

ಮೇಲೆ ತಿಳಿಸಿರುವಂತೆ ಮುಂದಿನ ಸಾಲುಗಳನ್ನು ಕೂಡಬೇಕು ಈ ವಿಧಾನದಲ್ಲಿ ಪ್ರತಿ ಹಂತದಲ್ಲೂ ನಾವು ಕೂಡುವುದನ್ನು ಏಕ ಸಂಖ್ಯೆಗಳಿಗೆ ಮಿತಿಗೊಳಿಸಿಕೊಳ್ಳುವುದರಿಂದ ಕೂಡುವ ಪ್ರಕ್ರಿಯೆ ಸುಲಭವಾಗುತ್ತದೆ ಹಾಗೂ ಕಾಲ ವ್ಯಯವಾಗುವುದಿಲ್ಲ.



## ತಿರುಪತಿಯಲ್ಲಿ ದರ್ಶನೀಯ ಆಲಯಗಳು :

### ಶ್ರೀಗೋವಿಂದರಾಜಸ್ವಾಮಿ ಆಲಯ:

ಇತಿಹಾಸದ ಪ್ರಕಾರ ಈ ಕ್ಷೇತ್ರವನ್ನು ಶ್ರೀವೈಷ್ಣವಾಚಾರ್ಯರಾದ ರಾಮಾನುಜರು ಪ್ರತಿಷ್ಠಿಸಿದರೆಂದು ಪ್ರತೀತಿ. ಗೋವಿಂದರಾಜ ಸ್ವಾಮಿ ಆದಿಶೇಷನಮೇಲೆ ಶಯನ ಭಂಗಿಯಲ್ಲಿ ದರ್ಶನ ಕೊಡುತ್ತಾರೆ. ಆಂಡಾಳ್, ಪಾರ್ಥಸಾರಥಿ ಮತ್ತು ವೆಂಕಟೇಶ್ವರಸ್ವಾಮಿ ಗುಡಿಗಳು ಗೋವಿಂದರಾಜಸ್ವಾಮಿ ಆಲಯ ಪ್ರಾಂಗಣದಲ್ಲಿವೆ. ವಿಜಯನಗರ ರಾಜರ ಶಿಲ್ಪಕಳಾಚಾತುರ್ಯಕ್ಕೆ ಪ್ರಸಿದ್ಧಿಯಾಗಿದೆ ಈ ಆಲಯ.

### ಶ್ರೀಕೋದಂಡರಾಮಸ್ವಾಮಿ ಆಲಯ:

ತಿರುಪತಿ ರೈಲ್ವೇನಿಲ್ದಾಣದಿಂದ ಒಂದು ಕಿಲೋಮೀಟರು ದೂರದಲ್ಲಿರುವ ಈ ಆಲಯದಲ್ಲಿ ಕೋದಂಡರಾಮಸ್ವಾಮಿ ನೆಲೆಸಿದ್ದಾನೆ. ರಾವಣ ಸಂಹಾರದನಂತರ ಸೀತಾಲಕ್ಷ್ಮಣರೊಡನೆ ಶ್ರೀರಾಮನು ಈ ಸ್ಥಳದಲ್ಲಿ ಕೆಲವು ಕ್ಷಣ ಇದ್ದ ನೆನಪಿಗಾಗಿ ಈ ಆಲಯ ನಿರ್ಮಿಸಲಾಗಿದೆ.

### ಶ್ರೀಕಪಿಲೇಶ್ವರಸ್ವಾಮಿ ಆಲಯ:

ತಿರುಪತಿ ಪಟ್ಟಣಕ್ಕೆ 3 ಕಿ.ಮೀ ದೂರದಲ್ಲಿ ಪ್ರಸಿದ್ಧ ಶೈವ ಕ್ಷೇತ್ರವಿದೆ. ಕಪಿಲ ಮಹರ್ಷಿ ಪೂಜಿಸಿದ ಶಿವಲಿಂಗವಾದುದರಿಂದ ಕಪಿಲೇಶ್ವರನೆಂದು ಇಲ್ಲಿರುವ ತೀರ್ಥ ಕಪಿಲತೀರ್ಥ ಎಂದು ಕರೆಯಲಾಗಿದೆ

### ಅಲಮೇಲುಮಂಗಾಪುರ (ತಿರುಚಾನೂರು):

ತಿರುಪತಿಗೆ 5 ಕಿ.ಮೀ. ದೂರದಲ್ಲಿರುವ ಪ್ರಾಚೀನವಾದ ಕ್ಷೇತ್ರ ತಿರುಚಾನೂರು. ಇದನ್ನೇ ಅಲಮೇಲು ಮಂಗಾಪುರವೆಂದು ಕರೆಯುತ್ತಾರೆ. ಶ್ರೀ ವೆಂಕಟೇಶ್ವರಸ್ವಾಮಿಯ ಪತ್ನಿಯಾದ ಶ್ರೀ ಪದ್ಮಾವತಿ ಅಮ್ಮನವರಿಗೆ ಇಲ್ಲಿ ಪೂಜೆ ನಡೆಯುತ್ತಿವೆ. ತಿರುಮಲೆಗೆ ಬಂದ ಯಾತ್ರಿಕರು ತಿರುಚಾನೂರು ಅಮ್ಮನವರನ್ನು ದರ್ಶಿಸಿದರೆ ತಮ್ಮ ಯಾತ್ರೆ ಫಲವಂತವಾಗುತ್ತದೆಯೆಂದು ಪ್ರಸಿದ್ಧಿ. ಕಾರಣ ತಿರುಮಲೆಯ ಯಾತ್ರಿಕರು, ತಿರುಚಾನೂರುಗೆ ಹೋಗಿ ಶ್ರೀಪದ್ಮಾವತಿಯನ್ನು ಪೂಜಿಸುತ್ತಾರೆ. ತಿರುಚಾನೂರಿನಲ್ಲಿರುವ ಪವಿತ್ರ ಪುಷ್ಕರಿಣಿ "ಪದ್ಮಸರೋವರ" ದಲ್ಲಿ ಶ್ರೀ ಪದ್ಮಾವತಿ ಅಮ್ಮನವರು ಆವಿರ್ಭವಿಸಿದಳೆಂದು ಸ್ಥಳ ಪುರಾಣ.



# ಆಯುರ್ವೇದ ಮತ್ತು ನಾವು



- ಡಾ ॥ ಪ್ರದೀಪ್ ಕುಮಾರ್ ಹೆಬ್ರಿ
98440 18457

5



ಆಯುರ್ವೇದ ವೈದ್ಯ ವಿಜ್ಞಾನದಲ್ಲಿ ಸುಪ್ರಸಿದ್ಧನಾದ ವೈದ್ಯನೆಂದರೆ ಚರಕ. ಈತನ ವೈದ್ಯಶಾಸ್ತ್ರ ಗ್ರಂಥವೇ 'ಚರಕಸಂಹಿತೆ'.

ಚರಕನನ್ನು ಪುರಾಣ ಗ್ರಂಥಗಳಲ್ಲಿ ಆದಿಶೇಷನ ಅವತಾರವೆಂದು ವರ್ಣಿಸಲಾಗಿದೆ. ಪಾಣಿನೀಯ ವ್ಯಾಕರಣದ ಮೇಲೆ ಮಹಾಭಾಷ್ಯ ರಚಿಸಿದ ಪತಂಜಲಿ ಋಷಿಯೇ ಚರಕಾಚಾರ್ಯ ಎಂಬ ಹೇಳಿಕೆಯೂ ಇದೆ. ಚಕ್ರಪಾಣಿ ರಕ್ತ ಎಂಬ ವ್ಯಾಖ್ಯಾನಕಾರ ಚರಕಸಂಹಿತೆಗೆ ಪತಂಜಲಿಯೇ ಪ್ರಥಮ ಭಾಷ್ಯಕಾರ ಎಂದು ವರ್ಣಿಸಿದ್ದಾರೆ.

ಚೀನಾದೇಶದಲ್ಲಿ ದೊರೆತ ಬೌದ್ಧ ತ್ರಿಪಿಟಿಕ ಗ್ರಂಥಗಳಲ್ಲಿ ದೊರೆ ಕನಿಷ್ಕನ ಆಸ್ಥಾನದಲ್ಲಿ ಚರಕನೆಂಬ ವೈದ್ಯಾಚಾರ್ಯ ಇದ್ದನೆಂಬ ಮಾಹಿತಿ ಇದೆ. ಚರಕಸಂಹಿತೆಯ ಕಾಲ ಕ್ರಿ.ಪೂ. ೧-೨ ನೆಯ ಶತಮಾನ ಭಾರತದ ವಿಜ್ಞಾನಗಳ ರಾಷ್ಟ್ರೀಯ ಸಂಸ್ಥೆ ನಡೆಸಿದ ಸಮೀಕ್ಷೆಯಂತೆ ಇದು ಕ್ರಿ.ಶ. 100 ಚರಕಾಚಾರ್ಯ ಕ್ರಿ.ಪೂ. ಎರಡನೆಯ ಶತಮಾನದಲ್ಲಿದ್ದ ಒಬ್ಬ ಋಷಿ.

ಚರಕಸಂಹಿತೆ ಚರಕಾಚಾರ್ಯನ ಸ್ವತಂತ್ರ ಕೃತಿಯಲ್ಲ . ಕ್ರಿ.ಪೂ. ಏಳನೆಯ ಶತಮಾನದ ಮಹರ್ಷಿ ಕೃಷ್ಣಾತ್ರೇಯ ಬೋಧಿಸಿದ ಸಿದ್ಧಾಂತಗಳನ್ನು ಆತನ ಶಿಷ್ಯೋತ್ತಮ ಅಗ್ನಿವೇಶ ಋಷಿ ಗ್ರಂಥವನ್ನಾಗಿ ರಚಿಸಿದನು. ದೇವತೆಗಳಿಂದಲೂ ಶ್ಲಾಘನೆಗೆ ಒಳಗಾದ ಈ ಅಗ್ನಿವೇಶ ಸಂಹಿತೆ ಆಯುರ್ವೇದ ಅಧ್ಯಯನ,ಅಧ್ಯಾಪನಗಳಿಗೆ ಆಧಾರ ಗ್ರಂಥವಾಯಿತು.ದೇಶದಲ್ಲಾದ ರಾಜಕೀಯ ಕ್ಷೋಭೆ, ಪರಕೀಯರ ಆಕ್ರಮಣ ಮೊದಲಾದ ಅನೇಕ ಕಾರಣಗಳಿಂದ ಈ ಅಗ್ನಿವೇಶ ಸಂಹಿತೆ ಕ್ರಿ.ಪೂ. ೨ನೇ ಶತಮಾನದ ವೇಳೆಗೆ ದೋಷಗಳಿಂದ ಕೂಡಿ ಅಸಮಗ್ರವಾಯಿತು.ಅದನ್ನು ಮತ್ತೆ ಸಂಸ್ಕರಿಸಿ, ಪರಿಷ್ಕರಿಸಿ ಅಧ್ಯಯನಯೋಗ್ಯವನ್ನಾಗಿ ಮಾಡಿದವ ಚರಕಾಚಾರ್ಯ ಸಂಸ್ಕಾರಗೊಂಡ ಗ್ರಂಥ "ಚರಕಸಂಹಿತೆ"ಯೆಂದೇ ಖ್ಯಾತವಾಯಿತು. ಮುಂದೆ ಕ್ರಿ.ಶ. ನಾಲ್ಕನೇ ಶತಮಾನದಲ್ಲಿ ಇದನ್ನು ಪುನಃ ಸಂಸ್ಕರಿಸಿದವನು ಕಪಿಲಬಲ ಎಂಬವನ ಪುತ್ರನಾದ ದೃಢಬಲ. ಈ ಗ್ರಂಥದ ಕೊನೆಯ 41 ಅಧ್ಯಾಯಗಳನ್ನು ಈತನೇ ರಚಿಸಿ, ಗ್ರಂಥಕ್ಕೆ ಸೇರಿಸಿ ಪರಿಪೂರ್ಣಗೊಳಿಸಿದನು. ಇದು ಆಯುರ್ವೇದ ಶಾಸ್ತ್ರದ ಅತ್ಯಮೂಲ್ಯ ಗ್ರಂಥವೆನಿಸಿದೆ.

ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಕಾಣಿಸುವ ಇನ್ನೊಂದು ಪ್ರಮುಖ ಹೆಸರೇ ಸುಶ್ರುತ. ಹಿಂದೂ ಶಸ್ತ್ರ ಪದ್ದತಿಗೆ ಭದ್ರ ಬುನಾದಿ ಹಾಕಿ ಅದನ್ನು ವಿಶ್ವ ವಿಖ್ಯಾತ ಗೊಳಿಸಿದ ಶ್ರೇಯಸ್ಸು ಇವರದ್ದು ಇವರು ಶಸ್ತ್ರ ಚಕಿತ್ಸೆಗೆ 101 ನಮೂನೆಯ ಉಪಕರಣಗಳನ್ನು ವಿನ್ಯಾಸಗೊಳಿಸಿದ್ದರು. ದಾಖಲೆಗಳ ಪ್ರಕಾರ ಸುಶ್ರುತ ಮಿದುಳಿನ ವ್ಯಾಧಿಗಳ ಚಿಕಿತ್ಸೆಗೆ ತಲೆ ಬುರುಡೆಯಲ್ಲಿ ತೂತು ಕೊರೆಯುವುದರಿಂದ ಹಿಡಿದು ಹೊಟ್ಟೆ ನೋವಿನವರಿಗೆ ಹೊಟ್ಟೆಯನ್ನು ತೆರೆದು ಪರೀಕ್ಷಿಸಿ ಚಿಕಿತ್ಸಿಸುವುದು, ಮೂತ್ರ ಕೋಶದಿಂದ ಕಲ್ಲುಗಳನ್ನು ತೆಗೆಯುವುದು ಮೂಲವ್ಯಾಧಿಗೆ ಚಿಕಿತ್ಸೆ, ಗರ್ಭಕೋಶವನ್ನು ತೆರೆದು ಶಿಶು ಜನನ ಮಾಡಿಸುವುದು. ಇತ್ಯಾದಿ ಅನೇಕ ಶಸ್ತ್ರ ಚಿಕಿತ್ಸೆಗಳನ್ನು ಮಾಡುತ್ತಿದ್ದರು ವಿಕಾರವಾದ ಮೂಗನ್ನು ಮೊದಲಿನ ರೂಪಕ್ಕೆ ತರುವ ನಾಸಿಕ ಸುರೂಪಿಕ ಶಸ್ತ್ರ ಚಿಕಿತ್ಸೆ ಸುಶ್ರೂತರ ಶಸ್ತ್ರ ಚಿಕಿತ್ಸಾ ಕುಶಲತೆಗೆ ಉದಾಹರಣೆ.

ಸುಶ್ರುತ ವೇದಗಳ ನೆರವಿನೊಡನೆ ತನ್ನ ಅನುಭವ, ಸಾಧನೆ, ಸಿದ್ಧಿ ಮತ್ತು ಚಿಂತನೆಗಳನ್ನು ಸೇರಿಸಿ ಸುಶ್ರುತ ಸಂಹಿತೆಯನ್ನು ರಚಿಸಿದ್ದರು. ಈ "ಸುಶ್ರುತ ಸಂಹಿತೆ" ಭಾರತೀಯ ಶಸ್ತ್ರ ಚಿಕಿತ್ಸೆಯ ಮೇರು ಕೃತಿ. ಇದೊಂದು ಅಸಾಧಾರಣ ಗ್ರಂಥ.

ಈ ಸುಶ್ರುತ ಸಂಹಿತೆಯಲ್ಲಿ ಸುಮಾರು 1120 ಕಾಯಿಲೆಗಳನ್ನು ಅವುಗಳ ಕಾರಣಗಳಿಗೆ ಅನುಗುಣವಾಗಿ ವಿಂಗಡಿಸಿ ವಿವರಿಸಲಾಗಿದೆ. ರೋಗಿಯ ಬಾಹ್ಯ ವೀಕ್ಷಣೆ, ಸ್ಪರ್ಶ, ಶ್ರವಣ ಪರೀಕ್ಷೆ, ನಾಡಿ ಪರೀಕ್ಷೆ, ಮೂತ್ರ ರುಚಿನೋಡಿ ರೋಗಪತ್ತೆ ಮಾಡುವಂತಹ ಹಲವಾರು ಪರೀಕ್ಷಾ ವಿಧಾನಗಳ ವಿವರಣೆಗಳಿವೆ. ಔಷಧೀಯ ಗುಣಗಳಿರುವ 760 ಗಿಡ ಮೂಲಿಕೆಗಳ ಎಲೆ, ತೊಗಟೆ, ಬೇರು, ರಸ. ಇತ್ಯಾದಿಗಳನ್ನು ಬಳಸುವ ರೀತಿ ನೀತಿಗಳ ಬಗೆಗಿನ ಮಾಹಿತಿಗಳಿವೆ.



# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

"ಭೂಷಣಾನಾಂ ಕಿರೀಟಶ್ಚ ವಾಹನಾನಾಂ ಪರೋರಥಃ

ಗೋಪುರಂ ಚ ವಿಮಾನಾನಾಂ ರತ್ನಾನಾಂ ವಜ್ರಮುತ್ತಮಮ್

ವರ್ಣಾನಾಂ ಬ್ರಾಹ್ಮಣಃ ಶ್ರೇಷ್ಠಃ ಆಶ್ರಮಾಣಾಂ ತು ವೈ ಯತಿ"

ಆಭರಣಗಳಲ್ಲಿ ಕಿರೀಟವು ವಾಹನಗಳಲ್ಲಿ ರಥವು - ಶ್ರೇಷ್ಠ ವಿಮಾನಗಳಲ್ಲಿ (ಗರ್ಭಾಲಯದ ಮೇಲಿರುವ ಗೋಪುರಾಕಾರದ ಕಟ್ಟಡವು) ಗೋಪುರವು, ರತ್ನಗಳಲ್ಲಿ ವಜ್ರವು ಉತ್ತಮವಾದುದು, ವರ್ಣಗಳಲ್ಲಿ ಬ್ರಾಹ್ಮಣನು ಶ್ರೇಷ್ಠನು ಆಶ್ರಮಗಳಲ್ಲಿ ಸನ್ಯಾಸಾಶ್ರಮ ಶ್ರೇಷ್ಠ (ಯತಿಯ ಆಶ್ರಮವು ಮೇಲಿನದು) ಎಂದು ಶಾಸ್ತ್ರಗಳಲ್ಲಿರುವುದಲ್ಲವೆ? ಹೀಗಿರುವಾಗ ನಿನ್ನ ಮನಸ್ಸಿಗೆ ಮೆಚ್ಚುಗೆಯಾದುದನ್ನು ನೀನು ಮಾಡು ಎನಲು ಆತನು ಅದನ್ನು ಕೇಳಿ ಸಂತುಷ್ಟನಾಗಿ ಒಂದು ಗೋಪುರನ್ನು ಕಟ್ಟಿಸಲೇಬೇಕೆಂದು ನಿಶ್ಚಯಿಸಿ, ಆ ಕೆಲಸವನ್ನು ನೆರವೇರಿಸಲು ಪ್ರತ್ಯೇಕ ವ್ಯಕ್ತಿಗಳನ್ನು ನೇಮಿಸಿ, ಪದಾರ್ಥಗಳನ್ನು ತರಿಸಿ, ಗಟ್ಟಿ ನಿರ್ಧಾರದೊಂದಿಗೆ ಆರಂಭಗೈದು, ತಿರುಮಲೆಯಿಂದ ಕೆಳಗಿಳಿದು, ಕಾಂಚಿಪುರ ದಿವ್ಯನಗರದಲ್ಲಿರುವ ಶ್ರೀರಂಗಾದಿ ಕ್ಷೇತ್ರದಲ್ಲಿರುವ ಪುಣ್ಯಕ್ಷೇತ್ರವನ್ನು ಸಂದರ್ಶಿಸಿ ತಿರುಗಿ ತಿರುಮಲೆ ಕ್ಷೇತ್ರಕ್ಕೆ ಒಂದು ಶ್ರೀನಿವಾಸನನ್ನು ಸೇವಿಸಿ, ನಿರ್ಮಾಣಗೊಳ್ಳುತ್ತಿರುವ ಗೋಪುರವನ್ನು ಕಂಡು ಸಂತೃಪ್ತನಾಗಿ ದಾನ - ಧರ್ಮಾದಿಗಳನ್ನು ಕೈಗೊಂಡು ಪೂರ್ಣ ಮನಸ್ಕನಾದನು.

ಅಂದು ರಾತ್ರಿ ಗಜಪತಿಯ ಸ್ವಪ್ನದಲ್ಲಿ ಒಂದು ಸರ್ಪವು ಕಾಣಿಸಿಕೊಂಡು ಎದುರು ನಿಂತು 'ಓಯ್! ಗಜಪತಿಯೇ! ಈ ತಿರುಮಲೆಯು ನನ್ನ ಶರೀರವು ಇದರ ಮೇಲೆ ನೀವು ಗೋಪುರವನ್ನು ಕಟ್ಟಿಸಿದುದರಿಂದ, ನನ್ನ ದೇಹದ ಮೇಲೆ ಅಧಿಕ ಬಾರವು ಬಿದ್ದು ವೇದನೆಯುಂಟಾಗಿದೆ. ಆದ್ದರಿಂದ ನಾನು ಆ ಸ್ವಾಮಿ ಸನ್ನಿಧಿಯಲ್ಲಿ ಜನಿಸಿದ ಹೊರತು ಬಾಧೆ ತೀರುವುದಿಲ್ಲ" ಎಂದು ಹೇಳಿ ದೇವಾಲಯದೊಳಗೆ ಪ್ರವೇಶಿಸಿ, ಶ್ರೀವೇಂಕಟೇಶ್ವರ ಸ್ವಾಮಿ ವೈಕುಂಠ ಹಸ್ತಕ್ಕೆ ಸುತ್ತಿಕೊಂಡು ನಿಂತಿದೆ. ಗಜಪತಿಯು ಈ ತರಹದ ಕನಸ್ಸನ್ನು ಕಂಡು, ಭಯಗೊಂಡು, ವಿದ್ವಾಂಸರನ್ನೆಲ್ಲಾ ಕರೆದು, " ಈ ಸ್ವಪ್ನವನ್ನು ಕುರಿತು ವರಾಹ ವಾಮನಾದಿ ಪುರಾಣಗಳಲ್ಲಿ ಋಷಿ ಮುನಿಗಳು ಹೇಳಿದ್ದಾರವೇ?



ಹೀಗೆ ಆದಿಶೇಷ ರೂಪನಾದ ಈ ಪರ್ವತವನ್ನು ಕೊರೆಯುವುದರಿಂದ ಇದರ ಮೇಲೆ ಕಲ್ಲುಗಳನ್ನು ಕಟ್ಟುವುದರಿಂದ ಅದು ಆದಿಶೇಷನಿಗೆ ಪೀಡಾದಾಯಕವಾಗಿ ಭಾರವಾಗುತ್ತಿದೆ ಎಂದು ನುಡಿದರು.

ಕೂಡಲೇ ಪ್ರಭುವಿದನ್ನು ಕೇಳಿ, ಭೀತನಾಗಿ ಇನ್ನು ಮುಂದೆ ಪುರವನ್ನು ಕಟ್ಟಬಾರದೆಂದು ಹೇಳಿ ಅಸಂಪೂರ್ಣವಾಗಿ (ಬೋಳಾಗಿ) ಶ್ರೀವೆಂಕಟಾಚಲಪತಿಗೆ ಇಷ್ಟು ಮಾತ್ರವೇ ಮನಸ್ಸಾಗಿರುವುದಾಗಿ ತೃಪ್ತಿಪಟ್ಟನು.ಇದರಿಂದ ಶೇಷನಿಗೆ ಅಪಚಾರವಾಗದೆಂದು ಚಿಂತಿಸಿ, ಅದಕ್ಕಾಗಿಯೇ ಅದರ ಮೇಲೆ ಶ್ರೀಶೇಷಾಚಲಪತಿಗೆ ನಾಗಾಭರಣವನ್ನು ಮಾಡಿಸಿ ಅದನ್ನು ದೇವ ಸನ್ನಿಧಿಯಲ್ಲಿ ಸಮರ್ಪಿಸಿ ಅದನ್ನು ಧಾರಣೆ ಮಾಡಿ ತನ್ನ ಪಾಪ ಪರಿಹರಿಸಿಕೊಳ್ಳುವುದಾಗಿ ಆಲೋಚಿಸಿದನು. ಇವರ ಸನ್ನಿಧಿಯ ಕೆಲಸಕಾರರು ಇದನ್ನೆಲ್ಲಿ ಸಮರ್ಪಿಸಬೇಕೆಂದು ಸಂದೇಹವುಳ್ಳವರಾಗಿರಲು ಆಗ ಶ್ರೀನಿವಾಸನು ಒಬ್ಬ ಭಕ್ತನ ಮೇಲೆ ಆವೀರ್ಭವಿಸಿ ಪೂರ್ವಕಾಲದಲ್ಲಿ ಆದಿ ದೇವನಿಗೂ ವಾಯು ದೇವನಿಗೂ ಏರ್ಪಟ್ಟಿರಲು -

"ಏವಂ ವೃತ್ತೇ ವಿವಾದೇ ತು ತತ್ರಾಗಾದ್ಧರಿರೀಶ್ವರಃ

ಕಿಮೇತದಿತಿ ಪೃಷ್ಟ್ಯಾ ಶೇಕ್ಷೇಣೋಕ್ತೋ ऽತಿವಿಸ್ತರಾತ್

ಪ್ರಹೋದ್ವೃತ್ತಂ ತದಾ ಶೇಷಂ ಭಾವಿಕಾರ್ಯಂ ಚ ಚಿಂತಯಾನ್"

(ಹೀಗೆ ವಿವಾದವೇರ್ಪಡಲು ಪರಮೇಶ್ವರನಾದ ಶ್ರೀಹರಿಯ ಬಳಿಗೆ ಸಾರಿದರು ಅದೇನು? ಎಂದು ಅವರಿಬ್ಬರನ್ನು ಕೇಳಲು ಶೇಷನು ವಿವರಣೆ ನೀಡಿದನು. ಶೇಷನ ತಲೆಗೊತ್ತಿ ಆತನ ಕಾರ್ಯತಪ್ಪೆಂದನು)

ಎಂದು ಬ್ರಹ್ಮಪುರಾಣದ ಪ್ರಕಾರ ನಾವು ಮಾಯಾಪಕ್ಷಪಾತಿಗಳೆಯೆಂದು ಶೇಷನಿಗೆ ಖೇದವುಂಟಾಗಿದೆ.

"ಶೇಷೋಗತಮದಃ ಪಶ್ಚಾತ್ತಸ್ಮಿನ್ನೇವ ನಗೋತ್ತಮೇ

ವಾಯವ್ಯೇ ಸ್ವಾಮಿ ಸರಸೋ ನಾಗತೀರ್ಥ್ಯೇ ಮನೋರಮೇ

ಉತ್ತರೇಶಿಖರೇ ಪುಣ್ಯೆ ಸಾನ್ನಿಧ್ಯೆ ಜಗತೀಪತೇಃ

ತಪಸ್ತೇಪೇ ಮಹಾಘೋರಂ ದಿವ್ಯಂ ವರ್ಷಸಹಸ್ರಕಮ್॥

(ನಂತರ ಮದವಿಳಿದ ಶೇಷನು ಆ ಪರ್ವತ ಶ್ರೇಷ್ಠನಾದ ಸ್ವಾಮಿ ಪುಷ್ಕರಣಿಗೆ ವಾಯುವ್ಯದಲ್ಲಿ ಮನೋಹರವಾದ ನಾಗತೀರ್ಥದಲ್ಲಿ ಪವಿತ್ರವಾದ ಉತ್ತರ ಶಿಖರದಲ್ಲಿ ನಿಖಿಲ ಲೋಕಾಧೀಶನ ಸನ್ನಿಧಾನದಲ್ಲಿ ದಿವ್ಯವಾದ ಘೋರ ತಪವನ್ನಾಚರಿಸಿದನು.

ಅಂದ ರೀತಿಯಲ್ಲಿ ಇಲ್ಲಿಗೆ ಬಂದು ನಾಗತೀರ್ಥದಲ್ಲಿ ನೆಲಸಿ ಮುಕ್ತಿಗಾಗಿ ತಪಸ್ಸನ್ನೇ ಕೈಗೊಂಡಿದ್ದಾನೆ. ಆತನ ಮೇಲೆ ನಮಗೀಗ ಸಂಪೂರ್ಣವಾದ ಸ್ನೇಹವುಂಟಾಗಿ ಲೋಕಕ್ಕೆಲ್ಲಾ ತಂದೆಯಾದವನು ತನ್ನ ಮಗನನ್ನು ಕೈಹಿಡಿದೆಬ್ಬಿಸಿ ಪರಿಪಾಲಿಸುವಂತೆ ನಮ್ಮನ್ನೆಲ್ಲಾ ಧರಿಸಬೇಕು ಎಂದು ಹೇಳಲು ಕೂಡಲೇ ಇತರರೂ ಸಂತೋಷಗೊಳ್ಳುವಂತೆ ತನ್ನ ವೈಕುಂಠ ಹಸ್ತಕ್ಕೆ ನಾಗಾಭರಣವನ್ನು ಸಮರ್ಪಿಸಿದರು.ಅಂದು ಮೊದಲು ಭಗವದ್ರಾಮಾನುಜಾಚಾರ್ಯರು ಮಂಗಳಶಾಸನ ಮಾಡುವವರೆಗೂ ಬಂದೇ ಕೈಯಲ್ಲಿ ನಾಗಾಭರಣವಿದ್ದು, ನಂತರ ಶ್ರೀರಾಮಾನುಜಾಚಾರ್ಯರು ರಾಜನಿಗೆ ಬಿದ್ದ ಕನಸ್ಸು ಹೇಳಿಕೊಳ್ಳಲು ಅದನ್ನು ಅಂಗೀಕರಿಸಿ ಎರಡನೇ ಶ್ರೀಹಸ್ತಕ್ಕೆ ಉಳಿದೊಂದು ನಾಗಾಭರಣವನ್ನು ಮಾಡಿಸಿ, ತೋಳುಗಳನ್ನು ಸುತ್ತಿಕೊಂಡಿರುವಂತೆ (ಭುಜಬಂದು) ತೋಡುಗೆಗಳನ್ನು ಸೇರಿಸಿ, ಸೇವಾಕರ್ತರಿಗೂ, ಆಶ್ರಿತ ಜನರಿಗೂ ಮನೋನಯನಗಳಿಗೂ ಸುಖವಾಗುವಂತೆ ಸಮರ್ಪಿಸಿದರು.

"ಪುಣ್ಯೇ ಸ್ವಾಮಿ ಸರಸ್ತಿರೇ ಪಶ್ಚಿಮೇ ನೃಹರಿ ಹರಿಂ

ಭಕ್ತ್ಯಾ ಪರಮಯಾ ಯುಕ್ತಃ ಪೂಜಯಾಮಾನ ಶಂಕರಃ"

(ಪರಮ ಭಕ್ತಿಯುಳ್ಳವನಾಗಿ ಶಂಕರನು ಪವಿತ್ರವಾದ ಸ್ವಾಮಿ ಪುಷ್ಕರಣಿಯ ಪಶ್ಚಿಮ ತೀರದಲ್ಲಿ ನೃಸಿಂಹರೂಪನಾದ ವಿಷ್ಣುವನ್ನು ಆರಾಧಿಸಿದನು)

ಹೀಗೆಂದು ಸ್ಕಂದಪುರಾಣದಲ್ಲಿಯ ಸ್ವಾಮಿ ಪುಷ್ಕರಿಣಿ ಮಹಾತ್ಮೆಯಲ್ಲಿದೆ.

"ನೀಲಕಂಠಸ್ತು ತತ್ತಿರೇ ಧ್ಯಾಯನ್ ನೃಹರಿ ಮಾದರಾತ್

ಉಮಯಾ ಸಹಃ ವಿಶ್ವೇಶಃ ಕಂಚಿತ್ಕಾಲ ಮುವಾಸ ವೈ"

ವಿಶ್ವೇಶ್ವರನಾದ ನೀಲಕಂಠನು (ಶಿವನು ಪಾರ್ವತಿ ಸಮೇತನಾಗಿ ಸರೋವರದ ಬದಿಯಲ್ಲಿರುವ ನರಸಿಂಹ ಸ್ವಾಮಿಯನ್ನು ಶ್ರದ್ಧೆಯಿಂದ ಧ್ಯಾನಿಸುತ್ತಾ ಕಾಲಕಾಲದವರೆಗೂ ವಾಸಿಸುತ್ತಿದ್ದನು) ಎಂದು ವಾಮನ ಪುರಾಣದಲ್ಲಿದೆ.

(ಮುಂದುವರೆಯುತ್ತದೆ)

# ಹರಿದಾಸ ಸಾಹಿತ್ಯ ಪ್ರಪಂಚದ ರತ್ನ ವಿಜಯದಾಸರು

-ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ
8050436752



ರಾಯಚೂರ ಜಿಲ್ಲೆಯ, ಮಾನ್ವಿ ತಾಲೂಕಿನ ತುಂಗ ಭದ್ರಾ ತೀರದಲ್ಲಿರುವ ಚೀಕಲಪರವಿ ಎಂಬಲ್ಲಿ ವಿಜಯದಾಸರು ಜನಿಸಿದರು.

ಈ ಚೀಕಲಪರವಿಯು ಈ ಮೊದಲೇ ಶ್ರೀಪಾದರಾಜರ ತಪೋಭೂಮಿ ಇದಾಗಿತ್ತು ಶ್ರೀಪಾದರಾಜರು ಅಶ್ವಥ ನರಸಿಂಹ ದೇವರ ಪ್ರತಿಷ್ಠಾಪನೆ ಮಾಡಿದ ಸ್ಥಳ.

ಈ ಚೀಕಲಪರವಿಯಲ್ಲಿ ಭಾರಧ್ವಾಜ ಗೋತ್ರದ ಋಕ್ ಮನೆತನದ ಶ್ರೀನಿವಾಸಪ್ಪಾ ಮತ್ತು ಕೂಸಮ್ಮಾ ದಂಪತಿಯ ಜೇಷ್ಠ ಮಗನಾಗಿ ಹುಟ್ಟಿದರು. ಇವರಿಗೆ ತಂದೆತಾಯಿ ಇಟ್ಟ ಹೆಸರು ದಾಸಪ್ಪಾ ಎಂದು ನಾಮಕರಣ ಮಾಡಿದರು.

ಬಾಲ್ಯದಲ್ಲಿಯೇ ದಾಸಪ್ಪಾ ತಂದೆಯನ್ನು ಕಳೆದು ಕೊಂಡರು ಮನೆಯ ಜವಾಬ್ದಾರಿ ಹೆಗಲ ಮೇಲೆ ಬಿದ್ದಾಗ ದುಡಿಯ ತೊಡಗಿದರು. ಅದರು ದುಡಿಸಿಕೊಂಡವರು ಇವರಿಗೆ ಯಾವುದೇ ರೀತಿಯ ಹಣದ ಪ್ರತಿಫಲ ಕೊಡಲಿಲ್ಲ. ಹೊಟ್ಟೆ ತುಂಬ ಊಟನು ಕೊಡಲಿಲ್ಲ.

ಹೀಗೆ ಎಲ್ಲದರಿಂದ ಬೇಸತ್ತು ಕಾಶಿ ಕಡೆಗೆ ಕಾಲನಡಿಗೆ ಯಲ್ಲಿ ಯಾತ್ರೆ ಮಾಡಿದರು. ಕಾಶಿ ತಲುಪಿ "ಮಣಿಕರ್ಣಿಕಾ" ಘಾಟ್ ತಲುಪಿ ಅಲ್ಲಿ ವಿಶ್ರಾಂತಿಗಾಗಿ ಮಲಗಿದರು.

ಆಗ ಪರಮಾತ್ಮನಾದ ಶ್ರೀ ಹರಿ ಪುರಂದರವಿಠ್ಠಲ ದಾಸರ ರೂಪದಲ್ಲಿ ಬಂದು "ವಿಜಯ ವಿಠ್ಠಲ" ಎಂಬ ಅಂಕಿತ ಕೊಟ್ಟು ನೀನು ಶ್ರೇಷ್ಠ ಜ್ಞಾನಿ ಆಗುವುದಲ್ಲದೆ ನಿನ್ನ ಬಡತನ ನಿವಾರಣೆ ಆಗುತ್ತೆ ಅಂತಾ ಹೇಳಿ ಅಂತರ್ನಾದನು. ಅಂದಿ ನಿಂದ ದಾಸಪ್ಪ ಹೋಗಿ ವಿಜಯದಾಸರು ಆದರು, ಅವರ ಮೊದಲವಾಗ್ ಝರಿ ಯಿಂದ ಬಂದ ಹಾಡು " ಅಂತರಂಗದ ಕದವು ತೆರೆಯಿತೆಂದು'.

ಮುಂದೆ ಕಾಶಿಯಿಂದ ಮರಳಬೇಕಾದರೆ 60 ಜನ ಶಿಷ್ಯರನ್ನು ಹೊಂದಿದ್ದರು. ಅದರಲ್ಲಿ ಪ್ರಮುಖರಾಗಿ

1) ಭಾಗಣ್ಣ (ಭಕ್ತಿ ಯಲ್ಲಿ ಪ್ರಸಿದ್ಧಿ ಹೊಂದಿದವರು)

2) ಮೋಹನ (ಯುಕ್ತಿಯಲ್ಲಿ ಪ್ರಸಿದ್ಧಿ ಹೊಂದಿದವರು)

3) ತಿಮ್ಮಣ್ಣ (ಶಕ್ತಿಯಲ್ಲಿ ಪ್ರಸಿದ್ಧಿ ಹೊಂದಿದವರು)

ಶಿಷ್ಯರಾದ ಭಾಗಣ್ಣ ಜ್ಯೋತಿಷ್ಯ ಹೇಳಿ ಹಣ ಸಂಪಾದಿ ಸುತ್ತಿದ್ದರು. ಒಮ್ಮೆ ಇವರನ್ನು ನೋಡಿ ಕರೆದು ಉಪದೇಶಿಸಿ ವಿರಕ್ತರನ್ನಾಗಿ ಮಾಡಿದರು. ದಾಸರಾಗಿ ಪ್ರಸಿದ್ಧ ಹೊಂದಿದ್ದರು.

ಮತ್ತೊಮ್ಮೆ ಹೆಂಡತಿ ಅರಳಮ್ಮ ಸಹಿತ ಕಾಶಿಗೆ ಹೋದಾಗ ತೀವ್ರತರ ಜ್ವರ ಬಂದಾಗ ಗಂಗಾ ಸ್ನಾನ ತಪ್ಪುತ್ತದೆ ಎಂದು ಇದ್ದಲಿಯೇ ದಯೆ ಮಾಡೋ....ಎರಬ ಹಾಡನ್ನು ಅಲ್ಲಿಯೇ ರಚಿಸಿ ಸ್ತುತಿಸಿ ಗಂಗೆಯನ್ನು ದರ್ಶನ ಮಾಡಿಸಿದರು.

ಒಂದು ದಿನ ಊರಿನ ಚಕ್ರತೀರ್ಥದಲ್ಲಿ ರೋಗ ಪೀಡಿತ ಮಗುವಿನ ಜೊತೆ ಒಬ್ಬ ತಾಯಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ ಅವರಿಬ್ಬರನ್ನು ಉಳಿಸಿ ಅವಳಿಂದ ಮಗುವನ್ನು ನಾನು ಬೆಳೆಸುವೆ ನೀನು ಏನು ಚಿಂತೆ ಮಾಡಬೇಡ ಎಂದು ಹೇಳಿದರು ಮುಂದೆ ಮಗುವೇ ಶಕ್ತಿಯಲ್ಲಿ ಪ್ರಸಿದ್ಧಿ ಪಡೆದವರು.

ಹೀಗೆ ಒಂದು ದಿನ ತಿರುಪತಿ ಹೋದಾಗ ತಿಮ್ಮಪ್ಪನ ದರುಶನ ಆಗದಿದ್ದಾಗ, "ನಿನ್ನ ದರುಶನಕ್ಕೆ ಬಂದವನಲ್ಲವೋ.. ಎಂದು ಸ್ತುತಿಸುತ್ತಾರೆ. ಆಗ ಇವರಿಗೆ ದರುಶನ ಕೊಡುತ್ತಾನೆ. ಒಮ್ಮೆ ತಿಮ್ಮಪ್ಪನ ರಥ ಮುಂದೆ ಬಾರದಾಗ ಸಾಗಿ ಬಾರಯ್ಯಾ ... ಎಂದು. ಪ್ರಾರ್ಥಿಸಿದಾಗ ರಥ ಮುಂದೆ ಬರುತ್ತದೆ. ಇವರು ಪ್ರತಿ ಕ್ಷೇತ್ರಗಳನ್ನು ಸಂಚಾರ ಮಾಡಿ "ಸುಳಾದಿ" ರಚನೆ ಮಾಡಿದ್ದಕ್ಕೆ ಇವರಿಗೆ "ಸುಳಾದಿ ದಾಸ"ರೆಂದು ಪ್ರಸಿದ್ಧಿ ಹೊಂದಿದರು.

ಇವರ ಸುಳಾದಿಯಲ್ಲಿ ಹೆಚ್ಚು ಪಂಚರತ್ನ ಸುಳಾದಿ ಎಂಬ 5 ಸುಳಾದಿಗಳು ಪ್ರಸಿದ್ಧಿ ಪಡೆದಿವೆ.

1. ನರಸಿಂಹ ಸುಳಾದಿ
2. ದುರ್ಗಾಸುಳಾದಿ
3. ಕಪಿಲ ಸುಳಾದಿ
4. ಧನ್ವಂತರಿ ಸುಳಾದಿ
5. ಮುಖ್ಯಪ್ರಾಣ ಸುಳಾದಿ

ಇವರು ಒಟ್ಟಾರೆ 25000 ಸಾವಿರ ಸುಳಾದಿ ರಚಿಸಿದ್ದಾರೆ. ಉಗಾಭೋಗ,ದೇವರ ನಾಮ ಹೀಗೆ ಹಲವು ಸಾಹಿತ್ಯ ರಚಿಸಿದ್ದಾರೆ.

("ಸುಳಾದಿ ಎಂದರೆ ದೇವರ ಬಗ್ಗೆ ಸರಳ ಸುಂದರ ಸುಲಲಿತವಾಗಿ ಸುಳುಹು ಕೊಡುವ ಹಾಡು")

ಮೊದಲು ಬಡತನದಲ್ಲಿದ್ದಾಗ ಚಾಗಿ ಕೇಶವರಾಯ ಅನ್ನ ನೀಡಿ ಹಸಿವೆಯನ್ನು ನೀಗಿಸಿದನು. ಇದರ ಫಲವಾಗಿ ಮುಂದೆ ಅವನ ಮಗ ಅಪಮೃತ್ಯ ಬಂದು ತೀರಿಕೊಂಡಾಗ ತಮ್ಮ 3 ವರುಷದ ಆಯುಷ್ಯವನ್ನು ದಾನ ಮಾಡಿದರು.

ವಿದ್ವಾಂಸರಾದ ಶ್ರೀಶ್ರೀನಿವಾಸ ಆಚಾರ್ಯರನ್ನು ಒಮ್ಮೆ ಅತಿಥ್ಯಕ್ಕೆ ಕರೆದಾಗ ಮೊದಲಿಸಿ ತಿರಸ್ಕರಿಸಿದಾಗ ಸ್ವಲ್ಪ ಹೊತ್ತಿನಲ್ಲೇ ಉದರ ಬೇನೆ ಪ್ರಾರಂಭವಾಯಿತು.

ತಮ್ಮ ತಪ್ಪಿನ ಅರಿವಾಗಿ ಕ್ಷಮೆಯಾಚಿಸಿದರು. ವಿಜಯ ದಾಸರು ತಮ್ಮ ಶಿಷ್ಯರಾದ ಗೋಪಾಲದಾಸರ ಕಡೆ ಕಳಿಸಿ ಅವರ ಮೂಲಕ ತಮ್ಮ 40 ವರುಷ ಆಯುಷ್ಯವನ್ನು ದಾನ ಮಾಡಿದರು. ಮುಂದೆ ಇವರೇ ""ಹರಿಕಥಾಮೃತಸಾರ" ಗ್ರಂಥ ಬರೆದ ಶ್ರೀಜಗನ್ನಾಥದಾಸರು.

ವಿಜಯದಾಸರು ದ್ವಿತೀಯ ಘಟ್ಟದ ಪ್ರವರ್ತಕರು ಎನಿಸಿದರು. ಇವರು ಕಾಶಿಯಿಂದ ತಂದೆ ಸಾಣಿಕಲ್ಲು ಮತ್ತು ಲಿಂಗು ಇಂದಿಗೂ ಚೀಕಲಪರವಿಯಲ್ಲಿದೆ.

ಹಾಗೆ ಸಪ್ತತಾರಾ ತಂಬೂರಿಯು ಚಿಪ್ಪಗಿರಿ ಎಂಬ ಊರಲ್ಲಿದೆ.

ವಿಜಯದಾಸರು 73 ವರುಷದ ಸಾರ್ಥಕ ಜೀವನ ನಡೆಸಿ ತಮ್ಮ ಕೊನೆ ದಿನಗಳನ್ನು ಚಿಪ್ಪಗಿರಿಯಲ್ಲಿ ಕಳೆದರು.

ವಿಜಯತೀರ್ಥದಲ್ಲಿದ್ದ ವೇಣುಗೋಪಾಲನನ್ನು ಪ್ರತಿಷ್ಠಾಪಿಸಿದರು.ಕಾರ್ತಿಕ ಶುದ್ಧ ದಶಮಿಯಂದು ಭೌತಿಕ ಶರೀರ ತ್ಯಜಿಸಿ, ಕೀರ್ತಿ ಶರೀರದಿಂದ ಇದ್ದಾರೆ.



ಧಾರಾವಾಹಿ - 7

# ಶ್ರೀಮದ್ಭಗವದ್ಗೀತೆ

ತೆಲುಗು ಮೂಲ : ಕೆ. ವಿಶ್ವನಾಥ ಶರ್ಮ

ಅನುವಾದ : ಶ್ರೀಮತಿ ಬಿ. ಪದ್ಮಜ



## ಭಗವದ್ಗೀತೆಯ ಮುಂದುವರೆದ ಭಾಗ

### ಶ್ರೀ ಗುರುಭ್ಯೋ ನಮಃ

ನಾವು ಶ್ರೀ ಕೃಷ್ಣ ಪರಮಾತ್ಮ ಮಾಡಿದಂತಹ ಗೀತಾಮೃತವನ್ನು ಸಾಕ್ಷಾತ್ತು ವೇದರೂಪವೆಂದು ಭಾವಿಸುತ್ತಿದ್ದೇವೆ. ವೇದಗಳು ಅಥವಾ ಶ್ರೀಮದ್ಭಗವದ್ಗೀತೆ ಈ ಎರಡೂ ಮನುಷ್ಯರಿಗೆ ಕರ್ತವ್ಯವನ್ನು ಬೋಧಿಸುವ ಗ್ರಂಥಗಳೆಂದು ಅರ್ಥಮಾಡಿಕೊಳ್ಳಬೇಕು. ಆದರೆ ಯಾವುದಾದರೂ ಒಂದು ಗ್ರಂಥವನ್ನು ಅಧ್ಯಯನ ಮಾಡುವ ಮೊದಲು ಉಪದೇಶವನ್ನು ಕೇಳಿಕೊಳ್ಳುವ ಮೊದಲು ಆ ಉಪದೇಶವನ್ನು ಅರ್ಥಮಾಡಿಕೊಳ್ಳುವ ಮೊದಲು ಆ ಗ್ರಂಥ ಅಧ್ಯಯನ ಮಾಡುವುದಕ್ಕೆ ಯಾರು ಅರ್ಹರೆಂದು ತೀರ್ಮಾನ ಮಾಡಿಕೊಳ್ಳಬೇಕು. ಹಾಗಾದಾಗ ಮಾತ್ರ ನಾವು ಆ ಗ್ರಂಥದಿಂದ ಉಪದೇಶವನ್ನು ಗ್ರಹಿಸುವುದಕ್ಕೆ ಅರ್ಹರು ಎಂದು ಹೇಗೆ ತಿಳಿದುಕೊಳ್ಳಬಹುದು ಎಂದು ನೋಡೋಣ ಬನ್ನಿ. ಮೊದಲು ಅದನ್ನು ಕೇಳಿಸಿಕೊಂಡಿದ್ದು ಅರ್ಜುನ. ಕೇವಲ ಅರ್ಜುನನೇ ಅಲ್ಲದೇ, ಅರ್ಜುನನ ರಥದ ಧ್ವಜದ ಮೇಲಿದ್ದ ಆಂಜನೇಯ ಸ್ವಾಮಿಯೂ ಕೇಳಿಸಿಕೊಂಡು ಇಬ್ಬರೂ ಪ್ರತ್ಯಕ್ಷವಾಗಿ ಕೇಳಿಸಿಕೊಂಡರು ಅಷ್ಟೇ ಅಲ್ಲದೇ ಭಗವಂತನ ಲೀಲೆಗಳನ್ನೆಲ್ಲಾ ಮುಖ್ಯವಾಗಿ ಯೋಗ ನೇತ್ರಗಳ ಮೂಲಕ ಗಮನಿಸುವ ವೇದವ್ಯಾಸಮಹರ್ಷಿಯೂ ಕೇಳಿಸಿಕೊಂಡರು. ಆ ವೇದವ್ಯಾಸ ಮಹರ್ಷಿಯ ಅನುಗ್ರಹದಿಂದ ಭಗವಂತನ ಉಪದೇಶವನ್ನು ಪಡೆಯಲು ಯೋಗ್ಯನಾದ ಸಂಜಯನೂ ಕೇಳಿಸಿಕೊಂಡ ಅವನ ಮೂಲಕ ಧೃತರಾಷ್ಟ್ರನೂ ಕೇಳಿಸಿಕೊಂಡ ಒಂದೇ ಉಪದೇಶವನ್ನು ಇಷ್ಟು ಜನರು ಕೇಳಿಸಿಕೊಂಡಿದ್ದಾರೆ. ಇದು ಮನೆಗೆ ಚರಿತ್ರೆಯಂತೆ ಅಷ್ಟೇ ಅಲ್ಲದೇ ಇನ್ನೂ ಅನೇಕ ಮಹರ್ಷಿಗಳು, ಸಿದ್ದರು, ಯೋಗಿಗಳು ಭಗವಂತನ ಲೀಲಾ ವಿನೋದಗಳನ್ನು ನೋಡುತ್ತಾ ಭಗವಂತ ಯಾವಾಗ ಉಪದೇಶ ಮಾಡುತ್ತಾನೋ ಎಂದು ಎದುರು ನೋಡುತ್ತಿದ್ದ ಇವರೆಲ್ಲಾ ಸೂಕ್ಷ್ಮರೂಪದಿಂದ ಕೇಳಿಸಿಕೊಂಡರು. ಆದ್ದರಿಂದ ಇದು ಕೇವಲ ಅರ್ಜುನ ಮಾತ್ರಾ ಅಲ್ಲದೇ. ಯಾರು ಕೇಳಿಸಿಕೊಳ್ಳುತ್ತಿದ್ದಾರೋ ಅವರೆಲ್ಲಾ ಉಪದೇಶ ಪಡೆದರೆಂದು ಅಲ್ಲ. ಭಗವಂತನು ತನ್ನ ಉಪದೇಶಕ್ಕೆ ಆಯ್ಕೆ ಮಾಡಿಕೊಳ್ಳುವಾಗ ಸೂಕ್ತವ್ಯಕ್ತಿಯನ್ನು ಆರಿಸಿದ್ದ. ಇದರಲ್ಲಿ ಭಗವಂತನು ತನ್ನ ನೈಪುಣ್ಯತೆಯನ್ನು ಪ್ರದರ್ಶಿಸಿದ್ದಾನೆ ಎಂದು ಅರ್ಥವಾಗುತ್ತದೆ. ಇವರಲ್ಲಿ ಮೊದಲು ಕೇಳಿಸಿಕೊಂಡಿದ್ದು ಅರ್ಜುನ. ಆತ ಅತ್ಯುತ್ತಮ ಯೋಧ, ಹಾಗೆಯೇ ಪರಮಾತ್ಮನಿಗೆ ಅತ್ಯಂತ ಪ್ರಿಯವಾದವನು. ಪರಮಾತ್ಮನಿಗೆ ಭಕ್ತರ ಮೇಲೆ ಯಾವ ರೀತಿ ಪ್ರೀತಿ ಹುಟ್ಟಬೇಕೋ ಅವೆಲ್ಲಾ ರೀತಿಯಲ್ಲೂ ಪರಮಾತ್ಮನ ಪ್ರೇಮವನ್ನು ಪ್ರೀತಿಯನ್ನು ಸಂಪಾದಿಸಿಕೊಂಡಿದ್ದ ಅರ್ಜುನ, ಶ್ರೀಕೃಷ್ಣ ಪರಮಾತ್ಮನಿಗೆ ಪ್ರಿಯ ಭಕ್ತ, ಸಖ, ಸ್ನೇಹಿತ ಜೊತೆಗೆ ಬಂಧು ಕೂಡಾ, ಅದಕ್ಕೆ ಆತನನ್ನು ಬಿಟ್ಟರೆ ಧ್ವಜದಲ್ಲಿರುವ ಆಂಜನೇಯಸ್ವಾಮಿ ಪರಮಭಕ್ತ ಉದಾಹರಣೆಗೆ ಆಂಜನೇಯ ಸ್ವಾಮಿ ಆದ್ದರಿಂದ ಭಕ್ತರು ಈ ಉಪದೇಶವನ್ನು ಕೇಳಿಸಿಕೊಳ್ಳಬಹುದು. ಅಷ್ಟೇ ಅಲ್ಲದೇ ವೇದವ್ಯಾಸ ಮಹರ್ಷಿ ಪರಮೋತ್ಕೃಷ್ಟವಾದ ತತ್ತ್ವಜ್ಞಾನಿ ಆದ್ದರಿಂದ ಆತನೂ ಈ ಉಪದೇಶವನ್ನು ಕೇಳಿಸಿಕೊಳ್ಳಬಹುದು, ತತ್ತ್ವಜ್ಞಾನಿಗಳು ಕೇಳಿಸಿಕೊಳ್ಳಬಹುದು. ಎಂದು ಭಗವಂತ ಸಾರಿದ. ತತ್ತ್ವಜ್ಞಾನ, ಭಕ್ತಿ ಯೋಗ್ಯತೆ ಇಲ್ಲ ಎಂದು ಕೊಳ್ಳುವವರು ಭಗವಂತ ಇನ್ನೂ ಎರಡು ಪಾತ್ರಗಳನ್ನು ಇರಿಸಿದ್ದಾನೆ. ಅದು ಸಂಜಯ ಮತ್ತೊಂದು ಧೃತರಾಷ್ಟ್ರ. ಸಂಜಯ ಕೇವಲ ಒಬ್ಬ ಸಾಮಾನ್ಯನಾದರೂ ಆತ ಇಂದ್ರಿಯನಿಗ್ರಹಕ್ಕಾಗಿ ಪ್ರಯತ್ನಿಸುತ್ತಾ, ತತ್ತ್ವಜ್ಞಾನ ಹೇಗೆ ಬರುತ್ತದೆ ಎಂದು ಪ್ರಯತ್ನಿಸುತ್ತಾ ಅದನ್ನು ಪಡೆಯುವ ಆಸೆಯನ್ನು ಹೊಂದಿದ್ದವನು. ಅಂತಹಾ ಸಂಜಯನೂ ಈ ಗೀತಾಮೃತವನ್ನು ನೇರವಾಗಿ ಕೇಳಿಸಿಕೊಳ್ಳದಿದ್ದರೂ ಯೋಗ ಬಲದಿಂದ ಕೇಳಿಸಿಕೊಂಡಿದ್ದರಿಂದ ಪರಮಾತ್ಮ ಸಾಧಾರಣ ಸಾಧಕರೂ ಸಹ ಇದನ್ನು ಕೇಳಿಸಿಕೊಳ್ಳಬಹುದು ಎಂದು ಸೂಚಿಸುತ್ತಿದ್ದಾನೆ. ಅಷ್ಟೇ ಅಲ್ಲದೆ ಅಂಧ

ನಾದ ಲವಲೇಶವೂ ಸದ್ಗುಣಗಳು ಇಲ್ಲದ ಪುತ್ರ ವ್ಯಾಮೋಹ ದಿಂದ ಗಡಿಬಿಡಿಗೊಳ್ಳುತ್ತಿರುವವನು ಕೇವಲ ಚರ್ಮಚಕ್ಷುಷ ವನ್ನು ಅಲ್ಲದೇ ಮನಸ್ಸು ಎಂಬ ಚಕ್ಷುವನ್ನು ಕೆಲಸಕ್ಕೆ ಉಪ ಯೋಗಿಸಿಕೊಳ್ಳದವನು ಮನೋನೇತ್ರವೂ ಕೆಲಸ ಮಾಡದಿರು ವವನು ಅವನಿಗೂ ಗೀತಾಮೃತವನ್ನು ಕೇಳಿಸುವಂತೆ ಮಾಡಿದ.ಸ್ವಲ್ಪವೂ ಯೋಗ್ಯತೆ ಇಲ್ಲದಿದ್ದರೂ ಈ ಉಪದೇಶ ವನ್ನು ಕೇಳುವಂತೆ ಮಾಡಿದರೆ ಸಮಸ್ತ ಜಗತ್ತಿಗೆ ಈ ಉಪದೇಶ ವಾಗಬೇಕೆಂದು ಪರಮಾತ್ಮ ಸೂಚನೆ ನೀಡುತ್ತಿದ್ದಾನೆ. ಸಂಜಯ ಸೇವಕನಾದರೂ ಅಂತಹಾ ಸೇವಾವೃತ್ತಿಯಲ್ಲಿ ಕೇಳಿಸಿದರೆ ನಮಗಿಂತಲೂ ಕೆಳಗಿನ ಹಂತದಲ್ಲಿರುವವರು, ಮಧ್ಯಸ್ಥಾಯಿಯಲ್ಲಿ ಇರುವವರಿಗೂ ಈ ಭಗವದ್ಗೀತೆ ಒಳ್ಳೆಯ ಪರಿಣಾಮವನ್ನು ಬೀರುತ್ತದೆ.

ನಾವೂ ನಮ್ಮ ಜೀವನದಲ್ಲಿ ಎಲ್ಲಾ ಹಂತಗಳನ್ನೂ ತಲುಪುತ್ತೇವೆ.ನಾವು ಯಾವ ಹಂತದಲ್ಲಿದ್ದರೂ ಭಗವದ್ಗೀತೆ ಯನ್ನು ಶ್ರವಣ ಮಾಡಬೇಕೆಂದು ಭಗವಂತ ಸೂಚನೆ ನೀಡುತ್ತಿದ್ದಾನೆ. ಯಾವುದೋ ಒಂದು ರೀತಿಯಲ್ಲಿ ಆ ಭಗ ವದ್ಗೀತೆಯನ್ನು ಕೇಳಿಸಿಕೊಳ್ಳುವ ಯೋಗ್ಯತೆ ನಮ್ಮಲ್ಲಿ ಬರುತ್ತದೆ ಎಂದು ಶ್ರೀ ಕೃಷ್ಣ ಪರಮಾತ್ಮ ತಿಳಿಸುತ್ತಿದ್ದಾನೆ. ಆದರೆ ಯಾವ ಹಂತಕ್ಕೆ ತಲುಪಬೇಕು ಅಥವಾ ಯಾವ ವಿಭಾಗದಲ್ಲಿ ಪ್ರವೇಶಿಸಬೇಕು ಎಂಬುದನ್ನು ನಾವು ತಿಳಿದು ಕೊಳ್ಳಬೇಕು. ಆದರೆ ಯಾವುದೇ ಸಂದೇಹವಿಲ್ಲದೇ ನಾವು ಅರ್ಜುನನ ವಿಭಾಗದಲ್ಲಿ ಪ್ರವೇಶಿಸಬೇಕು. ಅರ್ಜುನನ ವಿಶೇಷತೆ ಏನೆಂದರೆ ಪರಮಾತ್ಮನಿಂದ ನೇರವಾಗಿ ಉಪದೇಶವನ್ನು ಪಡೆಯುವ ಅರ್ಹತೆಯನ್ನು ಯಾವಾಗಲೋ ಸೃಷ್ಟಿಯ ಆದಿಯಲ್ಲಿ ಮರೀಚ್ಯಾದಿ ಪ್ರಜಾಪತಿಗಳಿಗೆ ಸನಕಾದಿಗಳಿಗೆ ದೊರೆತ್ತಿತ್ತು. ಇನ್ನಾರಿಗೂ ಆ ಅದೃಷ್ಟ ದೊರೆತಿರಲಿಲ್ಲ.ಆ ನಂತರ ವಿವಸ್ವತನಿಗೆ ಅರ್ಹತೆ ದೊರೆತಿತ್ತು, ನಂತರ ಅರ್ಜುನ ನಿಗೆ ಮಾತ್ರ ಆ ಅರ್ಹತೆ ಪ್ರಾಪ್ತಿಯಾಯಿತು. ನಾವು ಅರ್ಜುನನ ಹಾದಿಯಲ್ಲಿ ನಡೆಯುವುದಕ್ಕೆ ಪ್ರಯತ್ನಿಸಬೇಕು.ಆ ಪರಮಾತ್ಮ ಉಪದೇಶವನ್ನು ಮಾಡಬೇಕೆಂದರೂ ಈಗ ನಮ್ಮೆದಿರಿಗೆ ಬರಲಾರ.ಕಲಿಯುಗದಲ್ಲಿ ಇರುವ ಮಾನವರಿಗೆ ಪ್ರತ್ಯಕ್ಷರಾದರೆ ಏನೇನು ಕೋರಿಕೆಗಳನ್ನು ಕೇಳಬಹುದು ಎಂದು ಭಗವಂತ ನಿಗೆ ಗೊತ್ತಿರುವುದರಿಂದ ಆತ ಈ ಕಾಲದಲ್ಲಿ ನಮ್ಮೆದಿರಿಗೆ ಬರಲಾರ.ಆದ್ದರಿಂದ ಈ ದೇಹದಲ್ಲಿ ಪರಮಾತ್ಮ ಇರುವಂತೆ ಭಾವಿಸಿ ಉಪದೇಶವನ್ನುಗ್ರಹಿಸೋಣ. ಅದನ್ನು ನಮ್ಮ ಜೀವನ ದಲ್ಲಿ ಅಳವಡಿಸಿಕೊಳ್ಳೋಣ. ಕೇವಲ ಈ ಮಹಾರಾಜರುಗಳು ಮಾತ್ರಾ ಅರ್ಹರೇ? ನಮ್ಮಂತ ಸಾಮಾನ್ಯ ಮಾನವರಿಗೆ ಆ ಯೋಗ್ಯತೆ ಇಲ್ಲವೇ? ಆದರೆ ಮಹಾಭಾರತದ ಸಮಯದಲ್ಲಿ ತದ ನಂತರವೂ ಅನೇಕ ರಾಜರು, ಯೋಧರೂ ವೀರರು ಭಗವಂತನ ಅನುಗ್ರಹಕ್ಕೆ ಪಾತ್ರರಾದರು. ಪರಮಾತ್ಮನ ಅನುಗ್ರಹವನ್ನು ಪಡೆಯುವುದಕ್ಕೆ ನಾವು ನಮ್ಮ ಧರ್ಮವನ್ನು, ಕರ್ತವ್ಯವನ್ನು ಸರಿಯಾಗಿ ನಿಭಾಯಿಸಬೇಕು. ಆಗ ನಮಗೆ ಪರಮಾತ್ಮನ ಅನುಗ್ರಹ ಖಂಡಿತಾ ದೊರೆಯುತ್ತದೆ ಶ್ರೀಮದ್ಭ ಗವದ್ಗೀತೆಯಲ್ಲಿ ಪರಮಾತ್ಮನು ಕೆಲವು ವೀರರ ಹೆಸರನ್ನು ತಿಳಿಸಿ ಅವರ ಮೇಲೆ ತಾನು ನೀಡಿದ ಅನುಗ್ರಹವನ್ನು ಸ್ಪಷ್ಟವಾಗಿ ತಿಳಿಸು ತ್ತಿದ್ದಾನೆ. ಆದರೆ ಅವರನ್ನು ದುರ್ಯೋಧನ ಆದರೆ ಅವನ ಮಾತಿ ನಲ್ಲೇ ನಮಗೆ ಅವರ ನಡುವಳಿಕೆಯನ್ನು ತಿಳಿಸುತ್ತಿದ್ದಾನೆ. ಆ ದುರ್ಯೋಧನನಲ್ಲಿ ಇಂತಹಾ ಸದ್ವೀರರ ಮೇಲೆ ಸತ್ಪುರುಷರ ಮೇಲೆ ಎಂತಹಾ ಅಸೂಯೆಯನ್ನು ಹೊಂದಿದ್ದಾನೋ ಆದರಿಂದ ಅವನಿಗೆ ಎಂತಹಾ ದುಷ್ಫಲಗಳು ಎದುರಾದವು ಎಂಬುದನ್ನು ತಿಳಿಸುವ ಸಲುವಾಗಿ ಕೆಲವರು ಸತ್ಪುರುಷರ ಹೆಸರನ್ನು ಈ ಶ್ಲೋಕದಲ್ಲಿ ತಿಳಿದುಕೊಳ್ಳೋಣ ನಾಲ್ಕನೆಯ ಶ್ಲೋಕದಲ್ಲಿ ದುರ್ಯೋಧನ ದ್ರೋಣಾಚಾರ್ಯನ ಬಳಿಗೆ ಹೋಗಿ ಯಾವ ರೀತಿ ಮಾತನಾಡಿದ ಎಂದು ನಮಗೆ ತಿಳಿದಿರುವ ವಿಷಯವೇ ಆಗಿದೆ. ಆ ರೀತಿ ಗುರು ನಿಂದೆ ಮಾಡುವುದು ಮಹಾ ಪಾಪ ಹಾಗೆಯೇ ತನ್ನ ಸೈನ್ಯದಲ್ಲಿದ್ದ ಕೆಲವು ಮಹಾವೀರರನ್ನೂ ಅವ ಮಾನ ಮಾಡಿದ.

ಅತ್ರ ಶೂರಾ ಮಹೇಷ್ವಾಸಾ ಭೀಮಾರ್ಜುನ ಸಮಾಯುಧಿ

ಯುಯುಧಾನೋ ವಿರಾಟಶ್ಚ ದ್ರುಪದಶ್ಚ ಮಹಾರಥಃ

ಪಾಂಡವರ ಸೈನ್ಯದಲ್ಲಿ ಅನೇಕ ವೀರರು, ಶೂರರೂ ಇದ್ದಾರೆ, ಮಹೇಷ್ವಾಸಾಃ ಅಂದರೆ ದೊಡ್ಡ ದೊಡ್ಡ ಬಿಲ್ಲುಗಳನ್ನು ಹಿಡಿದಿದ್ದಾರೆ. ಧನಸ್ಸುಗಳು ಬಹಳ ದೊಡ್ಡದಾಗಿವೆ, ಎಲ್ಲರಿಗೂ ಪರಾಕ್ರಮವಿದೆ. ಪರಾಕ್ರಮ ಎಷ್ಟಿದೆ ಎಂದರೆ... 'ಭೀಮಾರ್ಜುನ ಸಮಾಯುಧಿ ಭೀಮನೊಂದಿಗೆ, ಅಥವಾ ಅರ್ಜುನನಿಗೆ ಸಮಾನರಾಗಿದ್ದಾರೆ. ಅವರುಗಳು ಯಾರೆಂದರೆ ಯುಯುಧಾನಃ, ವರಾಟಶ್ಚ, ದ್ರುಪದಶ್ಚ ಎಂದು ಮೂವರ ಹೆಸರನ್ನು ಹೇಳುತ್ತಾರೆ. ಯುಯುಧಾನ, ವಿರಾಟ, ದ್ರುಪದ, ದ್ರುಪದ ಯಾರು ಎಂದರೆ ಮಹಾರಥಃ ಎಂದು ದ್ರುಪದನಿಗೆ ಒಂದು ವಿಶೇಷಣೆಯನ್ನು ನೀಡಿದ್ದಾರೆ. ಅಂದರೆ ಪಾಂಡವ ಸೈನ್ಯದಲ್ಲಿ ಅನೇಕ ವೀರರಿದ್ದಾರೆ. ಅವರಲ್ಲಿ ಮೂವರನ್ನು ಹೆಸರಿಸಬಹುದು. ಇದರಲ್ಲಿ ದುರ್ಯೋ ಧನನ ಅಸೂಯೆ ಹೇಗೆ ಕಾಣಿಸುತ್ತಿದೆ ಎಂದರೆ ಸ್ವಲ್ಪ ಯಾರ ಯಾರ ಹೆಸರನ್ನು ಹೇಳುತ್ತಿದ್ದಾರೋ ಆ ಹೆಸರನ್ನು ಹೇಳುವಾಗ ಯಾವ ರೀತಿ ಮಾತನಾಡುತ್ತಿದ್ದಾನೆ ಅವರೊಂದಿಗೆ ದುರ್ಯೋ ಧನನ ಸಂಬಂಧವೇನು ಎಂದು ಅರ್ಥವಾಗುತ್ತದೆ.ಯುಯು ದಾನಃ ಎಂದು ಮೊದಲು ಹೇಳಿದ. ಯುಯುಧಾನಃ ಅಂದ್ರೆ ಚೆನ್ನಾಗಿ ಯುದ್ಧ ಮಾಡುವವನು ಎಂದರ್ಥ. ಈ ಬಿರುದು ಸಾತ್ಯಕಿ ಎಂಬುವವನಿಗೆ ಹೇಳಿದ್ದು ಆತ ಶ್ರೀಕೃಷ್ಣನಿಗೆ ವರಸೆಯಲ್ಲಿ ತಮ್ಮ ನಾಗುತ್ತಾನೆ.ಆತನ ಹೆಸರನ್ನು ಕೇಳೇ ಇರುತ್ತೇವೆ. ಈ ಸಾತ್ಯಕಿಯ ಹೆಸರು ಮೊದಲು ಯಾಕೆ ಹೇಳುತ್ತಿದ್ದಾನೆ. ಪಾಂಡ್ಯವರ ವೀರರಲ್ಲಿ ಮೊದಲು ಬರುವ ಹೆಸರು ಅರ್ಜುನ ಅಲ್ಲವೇ?

(ಮುಂದುವರೆಯುತ್ತದೆ.)



# ಸನಾತನ ಧರ್ಮದಲ್ಲಿ ಜ್ಯೋತಿಷ್ಯ ಶಾಸ್ತ್ರದ ಮಹತ್ವ

## ರವಿಯ ಬಗ್ಗೆ ವಿಷಯಗಳು

1. ರವಿಯ ಸೌರವ್ಯೂಹದ ಕೇಂದ್ರದಲ್ಲಿ ಇರುವನು.

2. ರವಿಯು ಭೂಮಿಯಿಂದ 14, 96,00,000 ಕಿ.ಮೀ. ದೂರವಾಗುವನು.

3. ರವಿಯು ಪ್ರತಿವರ್ಷದ ಜನವರಿಯಲ್ಲಿ ಭೂಮಿಗೆ ಹತ್ತಿರವಾಗುವನು.

4. ರವಿಯ ಪ್ರತಿವರ್ಷದ ಜುಲೈಯಲ್ಲಿ ಭೂಮಿಗೆ ದೂರವಿರುವುದು.

5. ರವಿಯ ವ್ಯಾಸ 13, 92, 000 ಕಿ.ಮೀ.

6. ರವಿಯ ಅಂಗಳ 6.087 x1012 ಕಿ.ಮೀ.

7. ರವಿಯ ತೂಕ 1.99 x1030 ಕೆ.ಜಿ.

8. ರವಿಯ ಸರಾಸರಿ ರಾಶಿ ಪಥದಲ್ಲಿ ಪ್ರತಿದಿನ 1 ಡಿಗ್ರಿ ಚಕ್ರಾಕಾರದಲ್ಲಿ ಸುತ್ತುತ್ತಾನೆ.

9. ರವಿಯು ಒಂದು ವರ್ಷದಲ್ಲಿ ಎಲ್ಲಾ ರಾಶಿಗಳನ್ನು ಸುತ್ತುತ್ತಾನೆ.

10. ರವಿಯು ಚೈತನ್ಯದ ಚಿಹ್ನೆ

11. ರವಿಯನ್ನು ಎಲ್ಲಾ ಗ್ರಹಗಳ ರಾಜನೆಂದು ಪರಿಗಣಿಸಲಾಗಿದೆ.

12. ರವಿಯನ್ನು ಪೂಜಿಸಲೆಂದೆ ರವಿವಾರ ಎಲ್ಲರಿಗೂ ರಜವಿರುತ್ತದೆ.

13. ರವಿಯನ್ನು ನಾಲ್ಕು ಮುಖವುಳ್ಳ ಬ್ರಹ್ಮದೇವರ ಪ್ರತಿನಿಧಿಯಾಗಿ ಬೆಂಕಿ, ಗಾಳಿ, ಭೂಮಿ, ನೀರನ್ನು ಉಂಟುಮಾಡುತ್ತಾನೆ.

14. ರವಿಯು ನಮಗೆ ಪ್ರತಿರೋಧಶಕ್ತಿ ಮತ್ತು ಪ್ರಾಣಶಕ್ತಿಯನ್ನು ನೀಡುತ್ತಾನೆ.

15. ರವಿಯು ಬಹಳ ಬಿಸಿಯಾದ ತೇವವಿಲ್ಲದ ಪೌರುಶವುಳ್ಳ ಮತ್ತು ಪ್ರಕಾಶ ಛಾಯೆಯನ್ನು ತೋರುವ ಗ್ರಹ.

16. ರವಿಯು ಪೂರ್ವ ದಿಕ್ಕಿನ ಒಡೆಯ ಮತ್ತು ಗ್ರೀಷ್ಮಋತುವನ್ನು ನಿಯಂತ್ರಿಸುತ್ತಾನೆ.




- ಆರ್. ಶ್ರೀನಿಧಿ
99705 65978

17. ರವಿಯ ಬಣ್ಣ ಕಿತ್ತಲೆ.

18. ರವಿಯು ತಂದೆ ರಾಜ ಸರ್ಕಾರ ಮತ್ತು ಅಧಿಕಾರಿಗಳನ್ನು ಪ್ರತಿನಿಧಿಸುವನು.

19. ರವಿಯು ಮನುಷ್ಯನ ಹೃದಯ, ತಲೆ, ಮೆದುಳು ಗಂಡಿನ ಬಲಗಡೆಯ ಕಣ್ಣು, ಹೆಣ್ಣಿನ ಎಡಗಡೆಯ ಕಣ್ಣು , ಮೂಳೆ, ಬಾಯಿ,ನಾಲಿಗೆ, ಕೋಪ, ಶ್ವಾಸಕೋಶ, ಶಕ್ತಿ ಮತ್ತು ಅದರ ಚಲನೇ ಹಾಗೂ ಧ್ವನಿಯನ್ನು ನಿಯಂತ್ರಿಸುತ್ತಾನೆ.

20.ರವಿಯು ತ್ರಾಸದಲ್ಲಿದ್ದಾಗ ಮನುಷ್ಯನನ್ನು ಗರ್ವವುಳ್ಳ, ನೀಚ,ಬಡಾಯಿಕೊಚ್ಚುಕೊಳ್ಳುವ ,(ನೀಚಸ್ಥಾನದಲ್ಲಿ)ಸಂಶಯದ, ಮುಂಗೋಪಿ,ಅತಿ ಪ್ರತಿಷ್ಠೆಯುಳ್ಳವನಾಗಿ ಮಾಡುತ್ತಾನೆ.

21. ರವಿಯ ಉಚ್ಚಸ್ಥಾನದಲ್ಲಿರುವಾಗ ಮನುಷ್ಯನನ್ನು ಕೆಚ್ಚದೆಯವನಾಗಿ, ಅಧಿಕಾರ ಮಾಡುವವನಾಗಿ, ಖ್ಯಾತಿಯುಳ್ಳವನಾಗಿ, ಶಕ್ತಿಶಾಲಿಯಾಗಿ, ಆರೋಗ್ಯವಂತನಾಗಿ, ಸಂತೋಷವುಳ್ಳವನು,ಯಶಸ್ಸುವುಳ್ಳವನಾಗಿ, ವಾತ್ಸಲ್ಯವುಳ್ಳವನಾಗಿ, ಜಯಶಾಲಿಯನಾಗಿ, ಹಿರಿಯರಿಗೆ ಮರ್ಯಾದೆಯನ್ನು ಕೂಡುವವನಾಗಿ, ಸರ್ಕಾರದಿಂದ ಪ್ರಶಂಸೆಯನ್ನು ಪಡೆದುಕೊಳ್ಳವವನ್ನಾಗಿ ಮಾಡುತ್ತಾನೆ.

22. ರವಿಯು ಹೃದ್ರೋಗ, ಕಣ್ಣಿನ ಕಾಯಿಲೆ, ಮೂರ್ಛೆ ರೋಗ , ವಿಪರೀತಜ್ವರ , ಬೋಳಾದ, ಗಂಟಳಿಗೆ ಸಂಬಂಧಪಟ್ಟ ಕಾಯಿಲೆಗಳು, ಕಮ್ಮಿ ರಕ್ತದ ಒತ್ತಡವನ್ನು ಸೂಚಿಸುತ್ತಾನೆ.

23. ಅಕ್ಕಿ, ಗೋಧಿ, ಕಡಲೆಕಾಯಿ, ತೆಂಗಿನಕಾಯಿ, ಬಾದಾಮಿ, ಮೆಣಸಿನಕಾಯಿ, ಮಲ್ಲಿಗೆ ಹೂವು, ಕೇಸರಿ ಕಿತ್ತಲೆಹಣ್ಣು, ಇಂಗು, ಎಲಕ್ಕಿ, ವಿಷದೇವದಾರು ಮರ,ಬೆಂಡುಹೂವು ಮುಂತಾದವುಗಳನ್ನು ಪ್ರತಿನಿಧಿಸುತ್ತಾನೆ.

24. ಸಿಂಹ, ಕುದರೆ, ಗಂಡುಹಂದಿ, ಹಾವು ಮತ್ತು ಸರ್ಪವನ್ನು ರವಿಯು ಪ್ರತಿನಿಧಿಸುತ್ತಾನೆ.

25. ಭಾರದ್ವಾಜ ಪಕ್ಷಿ, ರಾಜಹಂಸ, ಬುಲ್ ಬುಲ್ ಹಕ್ಕಿಗಳನ್ನು ರವಿಯು ಪ್ರತಿನಿಧಿಸುತ್ತಾನೆ.

26. ರವಿಯು ಪರ್ವತವನ್ನು, ಕಾಡನ್ನು ಈಶ್ವರ ದೇವಸ್ಥಾನವನ್ನು, ಕೋಟೆಯನ್ನು ಸರ್ಕಾರದ ಕಟ್ಟಡವನ್ನು ಪಂಚಾತವನ್ನು ಪ್ರತಿನಿಧಿಸುತಾನೆ.

27. ರವಿಯು ಚಿನ್ನ, ತಾಂಬ್ರ, ಮಾಣಿಕ್ಯವನ್ನು ಪ್ರತಿನಿಧಿಸುತ್ತದೆ.

28. ರವಿಯ ಲಿಂಗ ಪುಲ್ಲಿಂಗ.

(ಮುಂದುವರೆಯುತ್ತದೆ.)


## ಶ್ರೀ ವೆಂಕಟೇಶ್ವರ ನಿತ್ಯ ಅನ್ನದಾನ ಟ್ರಸ್ಟ್

- ಅನ್ನದಾನ ಸಮಂ ದಾನಂ ತ್ರಿಲೋಕೇಷು ನ ವಿದ್ಯತೇ - ಎಂದರೆ ಅನ್ನದಾನದ ಸಮನಾದ ಮತ್ತೊಂದು ದಾನ ಮೂರು ಲೋಕಗಳಲ್ಲಿಯೂ ಇಲ್ಲ. ಎಲ್ಲ ದಾನಗಳಲ್ಲಿ ಅನ್ನದಾನ ಅತಿಶ್ರೇಷ್ಠ.
- 1984ರಲ್ಲಿ ತಿ.ತಿ.ದೇವಸ್ಥಾನಗಳಿಂದ ಆರಂಭವಾದ ಈ ಟ್ರಸ್ಟ್ ಪ್ರಸ್ತುತ 75 ಸಾವಿರ ಮಂದಿ ಯಾತ್ರಿಕರಿಗೆ ಭೋಜನ ಸದುಪಾಯವನ್ನು ಪ್ರತಿದಿನವೂ ತಿರುಮಲೆಯ ಅತಿದೊಡ್ಡ ಅನ್ನದಾನ ಭವನವಾದ ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನದಾನ ಸಮುದಾಯದಲ್ಲಿ ಒದಗಿಸುತ್ತಿದೆ.
- ಇಲ್ಲಿಯೇ ಅಲ್ಲದೆ, ದೇವರ ದರ್ಶನದ ಸರದಿಯಸಾಲು, ಕಾಯುವ ಕೋಣೆಗಳು, ತಿ.ತಿ.ದೇ. ಆಸ್ಪತ್ರೆಗಳ ರೋಗಿಗಳು, ತಿ.ತಿ.ದೇ. ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಗೂ ಸಹ ಉಚಿತ ಭೋಜನ ಸೌಲಭ್ಯ ದೊರೆಯುತ್ತಿದೆ.
- ಈ ಟ್ರಸ್ಟ್‌ಗೆ ಉದಾರವಾಗಿ ವಂತಿಗೆಯನ್ನು ನೀಡುತ್ತ ಈ ಧರ್ಮಕಾರ್ಯದಲ್ಲಿ ಭಾಗಿಗಳಾಗಿರಿ. ಅಧಿಕ ಪ್ರಮಾಣದ ತರಕಾರಿಗಳನ್ನು ಸಹ ಈ ಟ್ರಸ್ಟ್‌ಗೆ ವಂತಿಗೆ ನೀಡಬಹುದು.

ಇತರ ವಿವರಗಳಿಗೆ 0877 - 2264376 ಅಥವಾ 2264237 ಗೆ ಕರೆ ಮಾಡಿರಿ.

**website - www.tirumala.org**
**e-mail - svannadanamtrust@tt devasthanams.org.**



**ಧಾರಾವಾಹಿ- 7**

# ಆಳ್ವಾರುಗಳು ಕಂಡ ತಿರುವೇಂಗಡ

**ಹಿಂದಿನ ಸಂಚಿಕೆಯಿಂದ**

**- ಎಂ. ಆರ್. ನರಸಿಂಹನ್**

ಇವುಗಳಲ್ಲದೆ ತಿರುವಾಯ್ಮೊಳಿಗೆ ನಾಥಮುನಿಗಳು ಬರೆದಿರುವ ‘ಭಕ್ತಾಮೃತಂ ವಿಶ್ವಜನಾನುಮೋದನಂ” ಅನ್ನೂ ರಾಮಾನುಜರ ತಿರುವೆಳುಕ್ಕೂತ್ತಿರುಕ್ಕೈಗೆ ಬರೆದಿರುವ ‘ಶ್ರೀರಾರ್ ತಿರುವೆಳುಕ್ಕೂತ್ತಿರುಕ್ಕೈ’ಯನ್ನೂ ಗಮನಿಸಿದಾಗ ರಾಮಾನುಜರ ಹಿಂದಿನ ಕಾಲಕ್ಕೇ ಈ ಪ್ರಬಂಧಗಳೆಲ್ಲ ಶ್ರೀವೈಷ್ಣವ ಲೋಕಕ್ಕೆ ಸುಪರಿಚಿತವಾಗಿದ್ದುವು. ಅವರು ಕೇವಲ ತಿರುವಾಯ್ಮೊಳಿಯೊಂದನ್ನು ಮಾತ್ರ ಗುರುತಿಸಿರಲಿಲ್ಲ. ಈ ಪ್ರಬಂಧಗಳು ಬೆಳಕಿಗೆ ಬರಲು ಇವರುಗಳು ವಿಪರೀತ ಕಷ್ಟಪಟ್ಟಿದ್ದಾರೆ ಎನ್ನುವುದು ಸ್ವಯಂವೇದ್ಯವಾಗುತ್ತದೆ. ಈ ಆಳ್ವಾರ್‌ಗಳ ಮತ್ತು ಅವರ ಪ್ರಬಂಧಗಳನ್ನು ರಕ್ಷಿಸಲು, ಬಾಳಿಸಲು ಎಷ್ಟೊಂದು ಆಸ್ಥೆವಹಿಸಿದ್ದರು ಎನ್ನುವುದೆಲ್ಲ ಅಂಗೈ ಮೇಲಿನ ನೆಲ್ಲಿಕಾಯಿಯಂತೆ ಸ್ಪಷ್ಟವಾಗಿ ತಿಳಿಯುವಾಗ ಶ್ರೀರಾಮಚಂದ್ರರಾಯರು ಮಾತ್ರ ನಾಥಮುನಿ, ಯಾಮುನಾಚಾರ್ಯ, ರಾಮಾನುಜಾಚಾರ್ಯ ಇವರೊಬ್ಬರಿಗೂ ಆಳ್ವಾರ್‌ಗಳ ಪರಿಚಯ ಇರಲೇ ಇರಲಿಲ್ಲವೆಂದೂ, ಹಾಗಿದ್ದರೂ ನಮ್ಮಾಳ್ವಾರ್ ಒಬ್ಬರೇ ಅಂತಹ ಪರಿಚಯಗೊಂಡಿದ್ದವರೆಂದೂ ಸ್ಪಷ್ಟವಾಗಿ ಹೇಳಿಕೆಯನ್ನಿತ್ತಿರುವುದು ಹೇಗೆಂಬುದು ಗೊತ್ತಾಗದ ವಿಚಾರವಾಗಿದೆ.

ಇನ್ನು ಈ ವಿಚಾರವನ್ನು ಸಾಕುಮಾಡಿ ಶ್ರೀರಾಯರ ವಿಚಾರವಾಹಿನಿಯನ್ನು ತಿದ್ದಿ ಪ್ರಸಕ್ತ ಲೇಖನದತ್ತ ದೃಷ್ಟಿ ಹರಿಸೋಣ!

ಆಳ್ವಾರುಗಳ ಪರ, ವ್ಯೂಹ, ವಿಭವ, ಅಂತರ್ಯಾಮಿ, ಅರ್ಚಾ ಎನ್ನುವ ಐದು ರೂಪಗಳಲ್ಲಿ ವ್ಯಕ್ತಗೊಂಡಿರುವ ಪರಮಾತ್ಮನನ್ನು ತಮ್ಮ ಪ್ರಬಂಧಗಳಲ್ಲಿ ಅನುಸಂಧಿಸುತ್ತಾರೆ. ವಿಭವ ರೂಪಗಳಿಂದ ವ್ಯಕ್ತಗೊಂಡ ವರಾಹ, ನರಸಿಂಹ, ವಾಮನ, ತ್ರಿವಿಕ್ರಮ, ರಾಮ, ಕೃಷ್ಣಾದಿಗಳ ದಿವ್ಯ ಲೀಲೆಗಳನ್ನು ಎಷ್ಟು ಉದಹರಿಸಿದರೂ ಅವರಿಗೆ ತೃಪ್ತಿ ಇಲ್ಲ, ನೂರಾರು ಸಲ, ಸಾವಿರಾರು ಸಲ ವರ್ಣಿಸಿ ದಣಿದಿದ್ದಾರೆ. ಕಲಿಯುಗದಲ್ಲಿ ಅಂತೂ ಸುಲಭವಾಗಿ ಲಭಿಸಬಲ್ಲ ಅರ್ಚಾವತಾರಿ ಎನಿಸಲ್ಪಡುವ, ದಿವ್ಯ ಕ್ಷೇತ್ರಗಳಲ್ಲಿ ರಾರಾಜಿಸುತ್ತಿರುವ ವಿಷ್ಣುವಿನ ದಿವ್ಯ ಮಂಗಳ ವಿಗ್ರಹಗಳನ್ನು,ಅವುಗಳು ಸಾನ್ನಿಧ್ಯಗೊಂಡಿರುವ ದಿವ್ಯಕ್ಷೇತ್ರ ವೈಭವಗಳನ್ನು ಮನದಣಿಯೇ ಹಾಡಿದ್ದಾರೆ. ಅಂತಹ ದೇವರುಗಳನ್ನು ದರ್ಶನ ಮಾಡಿದರೇ ಸಕಲ ಪಾಪಗಳೂ ಪರಿಹಾರಗೊಳ್ಳುವುದಂತೆ! ಅಂತಹ ಭಗವಂತನ ನೆಲೆಗಳಲ್ಲಿ ಭಕ್ತನನ್ನು ಉದ್ಧಾರ ಮಾಡಬಲ್ಲ ಸಕಲ ಮಹಿಮೆಗಳೂ ಮೈಗೂಡಿರುವುದಂತೆ!ಈ ರೀತಿ ಹಾಡಲ್ಪಟ್ಟಿರುವ ಕ್ಷೇತ್ರಗಳ ಸಂಖ್ಯೆ ನೂರೆಂಟು. ಇವುಗಳನ್ನು ನೂರೆಂಟು ದಿವ್ಯದೇಶಗಳೆಂದೂ ನೂರೆಂಟು ತಿರುಪತಿಗಳೆಂಬುದಾಗಿಯೂ, ಆಳ್ವಾರ್ ಪಾಡಲ್‌ಗಳೆಂಬುದಾಗಿಯೂ ಜನ ವಿಶೇಷವಾಗಿ ಆದರಿಸುತ್ತಾರೆ.ಈ ಕ್ಷೇತ್ರಗಳಲ್ಲಿ ಬಹುತೇಕ ತಮಿಳುನಾಡು ಮತ್ತು ಕೇರಳಗಳಲ್ಲಿವೆ. ಪ್ರಾಯಶಃ

ಆಳ್ವಾರುಗಳೆಲ್ಲ ತಮಿಳುನಾಡಿನವರಾದ್ದರಿಂದಲೇ ತಮಗೆ ಸಮೀಪದಲ್ಲಿದ್ದ ಕ್ಷೇತ್ರಗಳೇ ಅವರಿಗೆ ಹಾಡಿಗೆ ದೊರಕಿದ ವಸ್ತುಗಳಾಗಿದ್ದಿರಬೇಕು. ಈ ನೂರೆಂಟು ದಿವ್ಯಕ್ಷೇತ್ರಗಳಲ್ಲೂ ವಿಶೇಷಸ್ಥಾನ ಗಳಿಸಿಕೊಂಡಿರುವುವು ಕೇವಲ ಮೂರೇ ಮೂರು ಸ್ಥಳಗಳು. ಅವುಯಾವುವೆಂದರೆ ಶ್ರೀರಂಗ, ತಿರುಪತಿ, ಕಂಚಿ, ಶ್ರೀರಂಗವನ್ನೂ, ತಿರುಪತಿಯನ್ನೂ ಹಾಡುವ ಆಳ್ವಾರುಗಳೇ ವಿರಳ. ಕಂಚಿಯನ್ನು ಅಷ್ಟಾಗಿ ಆಳ್ವಾರ್‌ಗಳು ಹಾಡಿಲ್ಲ; ಕಾರಣ ತಿಳಿಯದು, ಅದೇ ಕಂಚಿಯ ಒಂದು ಭಾಗವಾದ ವೇಕಾವನ್ನೂ, ಅಲ್ಲಿನ ದೈವ ಯಥೋಕ್ತಕಾರಿಯನ್ನೂ ಹೊಗಳಿಸಿದ್ದಾರೆ. ಆದರೆ ಕಂಚಿಯ ವರದರಾಜನನ್ನು ಕಂಚಿಯ ಪ್ರಧಾನ ದೇವರು-ಹೆಚ್ಚಿಗೆ ಹಾಡಿಲ್ಲದಿರುವುದು ಆಶ್ಚರ್ಯವಾದ ವಿಷಯವೇ ಎನ್ನಬೇಕು. ಹೌದು. ತಿರುಪತಿಯನ್ನೂ ಹಾಡದ ಆಳ್ವಾರ್‌ಗಳೆಂದರೆ ತೊಂಡರಡಿಪ್ಪೊಡಿ ಆಳ್ವಾರ್ ಒಬ್ಬರು ಮತ್ತೊಬ್ಬರು ಮಧುರಕವಿಆಳ್ವಾರ್. ತೊಂಡರಡಿಪ್ಪೊಡಿ ಆಳ್ವಾರ್ ಅವರ ಭಕ್ತಿ ಆಧಿದೈವ ರಂಗನಾಥನಿಗೊಬ್ಬನಿಗೆ ಸೀಮಿತಗೊಂಡಿದ್ದು. ಅವನನ್ನು ಬಿಟ್ಟು ಬೇರೆ ಯಾವ ದೈವವನ್ನು ನೆನಸಿಯೂ ಇಲ್ಲ ಸಂಕೀರ್ತಿಸಿಯೂ ಇಲ್ಲ. ಇನ್ನು ಮಧುರಕವಿಆಳ್ವಾರ್ ಅವರ ಭಕ್ತಿ ಮತ್ತೊಂದು ತರ. ಅವರು ಕ್ಷೇತ್ರಗಳನ್ನಿರಲಿ, ಯಾವ ದೇವರನ್ನೇ ಸ್ತುತಿಸಲಿಲ್ಲ. ರಚನೆಯೇ ಕೇವಲ ಹನ್ನೊಂದು ಪಾಶುರಗಳು. ಅವುಗಳಲ್ಲಿನ ವಿಷಯವೂ ಸಹ ಆಚಾರ್ಯ ಪ್ರಪತ್ತಿ. ಆಚಾರ್ಯನೆಂದೆನಿಸುವ ಗುರುವನ್ನು ಕುರಿತದ್ದೇ, ಗುರುವಿಗಿಂತ ದೇವರಿಲ್ಲ. ಗುರುವೇ ದೇವರನ್ನು ತೋರಿಸುವ ಹಾದಿ. ಗುರುವಿನ ಅನುಗ್ರಹವುಂಟಾದರೆ ದೈವವನ್ನು ಸಾಧಿಸಿದಂತೆಯೇ. ಗುರುವಿನ ಶರಣಾಗತಿಯೇ ಶ್ರೀವೈಷ್ಣವ ಮತದ ಪ್ರಧಾನ ತತ್ವ. ಈ ಅಭಿಪ್ರಾಯ ಅವರ ಕಣ್ಣಿನುಣ್‌ಶಿರತ್ತಾಂಬು ಎನ್ನುವ ಪ್ರಬಂಧದಲ್ಲಿ ಪ್ರತಿಬಿಂಬಿತವಾಗಿದೆ. ತಮ್ಮ ಆಚಾರ್ಯ ಕುರುಗೂರು ಶಡಗೋಪರೆಂದೆನಿಸಿದ ನಮ್ಮಾಳ್ವಾರ್ ಅನ್ನೇ ಕೀರ್ತಿಸಿರುವುದು.

'ಬೇರೊಂದ ನಾನರಿಯೇ, ವೇದವ ತಮಿಳ್‌ಗೆಯ್ದ

ಮಾರನ, ಶಡಗೋಪನ ಪದಕಮಲವಾಶ್ರಮಿಸಿ

ಬಾಳುವುದೇ ದಾರಿ' ಎನ್ನುವ ಅರ್ಥ ಬರುವ ಅವರ ಪ್ರಬಂಧಕ್ಕೆ ಶ್ರೀವೈಷ್ಣವ ಸಿದ್ಧಾಂತದಲ್ಲಿ ಅಲೌಕಿಕವಾದ ಗೌರವ ಸಂದಿದೆ.

ಮಿಕ್ಕ ಆಳ್ವಾರ್‌ಗಳೆಂದರೆ ಪೊಯ್ಗಯ್, ಪೂದತ್ತಾರ್ ಮತ್ತು ಪೇಯಾಳ್ವಾರ್‌ಗಳು. ಇವರೇ ಆಳ್ವಾರ್ ಪರಂಪರೆಗೆ ಪ್ರಥಮರು. ಇವರನ್ನು ಮೊದಲಾಳ್ವಾರ್‌ಗಳೆಂದು ಒಟ್ಟಾಗಿಯೇ ಪರಿಭಾವಿಸುತ್ತಾರೆ. ಇವರು ಬೇರೆ ಬೇರೆ ಸ್ಥಳಗಳಲ್ಲಿ ಅವತರಿಸಿದರೂ ಇವರೆಲ್ಲಾ ಒಟ್ಟಾಗಿ ಒಂದೆಡೆ ಸಂಧಿಸಿದ್ದಾಗ ಇವರಿಗೆ ಒಟ್ಟಿಗೆ ಪರಮಾತ್ಮನ ಸಾಕ್ಷಾತ್ಕಾರ ಅನುಭವವಾಗಿ ಇವರು ಆ ಸ್ಥಳದಲ್ಲೇ ತಮ್ಮ 'ತಿರುವಂದಾದಿ'ಗಳೆಂದು ಕರೆಯಲ್ಪಡುವ ತಲಾನೂರು ಪಾಶುರಗಳ ಪ್ರಬಂಥಗಳ ಮೂಲಕ ಭಗವಂತನನ್ನು ಸ್ತೋತ್ರ ಮಾಡಿ ಧನ್ಯರಾದರು ಎನ್ನುವ ಕಥೆ ಇದೆ. ಆದರೆ ಈ ಪ್ರಬಂಧಗಳನ್ನು ಪರಿಶೀಲಿಸಿದಾಗ ಇವುಗಳು ಬೇರೆ ಬೇರೆಯಾಗೇ ರಚನೆಗೊಂಡಿರಬಹುದಾದ ಕೃತಿಗಳಂತೆ ಕಂಡು ಬರುತ್ತವೆ. ಇವರ ರಚನೆಗಳು ಮೊದಲ್ ತಿರುವಂದಾದಿ ಇರಂಡಾಂ ತಿರುವನ್ದಾದಿ, ಮೂನ್ರಾಂ ತಿರುವಂದಾದಿಗಳು. ಇವನ್ನು 'ಇಯ್ಪಾ' ಎನ್ನುವ ಗೇಯ ಪ್ರಕಾರದೊಳಗೆ ಸೇರಿಸಿ ಗೌರವ ಸಲ್ಲಿಸುತ್ತಾರೆ. ಇನಿದಾದ ಧ್ವನಿಯ ಹಾಡುಗಬ್ಬ' ಎಂಬುದಾಗಿ ಸ್ಥೂಲವಾಗಿ ಈ ಇಯ್ಪಾ ಎನ್ನುವ ಪದವನ್ನು ಅರ್ಥೈಸಬಹುದು. ಈ ಮೂವರ ನಂತರದವರು ತಿರುಮಳಿಶೈ ಆಳ್ವಾರ್ ಎಂಬುವರು. ಇವರ ರಚನೆ ಎರಡು ನಾನ್ಮುಗನ್ ತಿರುವಂದಾದಿ' ಮತ್ತು 'ತಿರುಚ್ಚಂದವಿರುತ್ತಂ', ನಂತರದವರು ನಮ್ಮಾಳ್ವಾರ್ ಇವರದ್ದೇ ಪ್ರಖ್ಯಾತ ತಿರುವಾಯ್ಮೊಳಿ . ಈ ಪ್ರಬಂಧವಲ್ಲದೆ ಮತ್ತೆ ಮೂರು ಪ್ರಬಂಧಗಳನ್ನು ರಚಿಸಿರುವ ಹಿರಿಮೆ ಇವರದ್ದು, ಅವು ಕ್ರಮವಾಗಿ 'ತಿರುವಿರುತ್ತಂ' 'ಪೆರಿಯ ತಿರುವಂದಾದಿ' ಮತ್ತು ತಿರುವಾಶಿರಿಯಂ, ಈ ನಾಲ್ಕು ಕೃತಿಗಳನ್ನು ನಾಲ್ಕು ವೇದಗಳ ಸ್ವರೂಪವೆಂಬುದಾಗಿ ಪರಿಗಣಿಸುತ್ತಾರೆ. ನಂತರದವರೇ ಕುಲಶೇಖರ ಆಳ್ವಾರ್. ಇವರು ಕೇರಳದ ಮಹಾರಾಜರು. ಇವರ ರಚನೆ 'ಪೆರುಮಾಳ್ ತಿರುಮೊಳಿ', ಇವರು ಇದಲ್ಲದೆ ಸಂಸ್ಕೃತ ಭಾಷೆಯಲ್ಲಿ ಸರಳವೂ, ಸುಂದರವೂ, ಸಣ್ಣದು ಆದ ಸ್ತೋತ್ರ ಕೃತಿ 'ಮುಕುಂದ ಮಾಲೆಯನ್ನು ರಚಿಸಿದ್ದಾರೆ. ಹಿರಿಮೆಯಲ್ಲಿ ಇದು ಜಯದೇವನ 'ಗೀತ ಗೋವಿಂದ', ಲೀಲಾಶುಕನ 'ಕೃಷ್ಣ ಕರ್ಣಾಮೃತ'' ಇವುಗಳಿಗೆ ಸರಿಸಾಟಿಯೆನ್ನುತ್ತಾರೆ. ಆದರೆ ಇದು ಶೃಂಗಾರಕಾವ್ಯವಲ್ಲ. ಭಕ್ತಿಯ ಔನ್ನತ್ಯದಿಂದ ಕೂಡಿದ ಉಜ್ವಲವಾದ ಕೃತಿ. ಗಂಭೀರ ಶೈಲಿಯಲ್ಲಿ ಸಾಗುತ್ತದೆ. ಆದರೆ ಈ ಮುಕುಂದ ಮಾಲೆಯನ್ನು ರಚಿಸಿದ ಕುಲಶೇಖರರೇ ಬೇರೆ ಎನ್ನುವ ವಾದವೂ ಇಲ್ಲದಿಲ್ಲ. ಇದನ್ನು ಪೆರಮಾಳ್ ತಿರುಮೊಳಿಯನ್ನು ರಚಿಸಿದ ಕುಲಶೇಖರರೇ ರಚಿಸಿದ್ದ ಪಕ್ಷದಲ್ಲಿ ಆಳ್ವಾರರುಗಳು ಪೈಕಿ ಸಂಸ್ಕೃತದಲ್ಲೂ ತಮಿಳಿನಲ್ಲೂ ಕೃತಿ ರಚನೆ ಮಾಡಿದ ಏಕೈಕ ಆಳ್ವಾರ್ ಎನ್ನುವ ಗೌರವ ಇವರಿಗೆ ಸಲ್ಲುತ್ತದೆ. ಪೆರಿಯಾಳ್ವಾರ್ ನಂತರದವರು. ಇವರ 'ತಿರುಪ್ಪಲ್ಲಾಂಡ್, ಪೆರಿಯಾಳ್ವಾರ್ ತಿರುಮೊಳಿ ಸುಂದರ ರಚನೆಗಳು. ಇವರ ಸಾಕುಮಗಳೆಂದು ಆಂಡಾಳ್ ಪರಿಗಣಿಸಲ್ಪಟ್ಟಿದ್ದಾಳೆ. ಇವಳ ಪ್ರಖ್ಯಾತ 'ತಿರುಪ್ಪಾವೈ' ಅನ್ನು ಕೇಳಿ ಅರಿಯದ ಶ್ರೀವೈಷ್ಣವನಿಲ್ಲ. ಇವಳ ಮತ್ತೊಂದು ಮೇರು ಕೃತಿ ನಾಚ್ಚಿಯಾರ್ ತಿರುಮೊಳಿ, ತಿರುಪಾಣಿ ಆಳ್ವಾರ್ ಅಂತ್ಯಜರು. ಇವರ ರಚನೆ ಕೇವಲ ಹನ್ನೊಂದು ಪಾಶುರಗಳನ್ನೊಳಗೊಂಡ ಪ್ರಬಂಧ 'ಆಮಲ ನಾದಿಪಿರಾನ್' ಕಡೆಯ ಆಳ್ವಾರ್ ಎಂದು ನಿರ್ಣಿತರಾಗಿರುವ ತಿರುಮಂಗೈ ಆಳ್ವಾರ್ ಅವರು ಆರು ಪ್ರಬಂಧಗಳನ್ನು ರಚಿಸಿದ್ದಾರೆ. ನಮ್ಮಾಳ್ವಾರ್ ಅವರ ಕೃತಿಗಳು ನಾಲ್ಕು ವೇದಗಳೆಂಬುದಾಗಿ ಪರಿಗಣಿಸಲ್ಪಡುವಂತೆ ಇವರು ಆರು ಕೃತಿಗಳು ಆರು ವೇದಾಂಗಕ್ಕೆ ಸಮನೆಂಬುದಾಗಿ ಸಂಭಾವ್ಯವಾಗಿದೆ. ಇವು ಕ್ರಮವಾಗಿ 'ಪೆರಿಯತಿರುಮೊಳಿ' ತಿರುಕ್ಕುರುಂದಾಂಡಗಮ್, 'ತಿರುನೆಡುಂದಾಂಡಗಮ್', 'ತಿರುವೆಳುಕೂತ್ತಿರುಕ್ಕೈ 'ಶಿರಿಯ ತಿರುಮಡಲ್' ಮತ್ತು 'ಪೆರಿಯ ತಿರುಮಡಲ್'ಗಳು.

(- ಮುಂದುವರೆಯುತ್ತದೆ.)

# ಪರಮ ಪವಿತ್ರವಾದ ಮಂಗಳದ್ರವ್ಯ ಕೊಬ್ಬರಿ - ಔಷಧ ಪ್ರಾಶಸ್ತ್ಯ



ಡಾ॥ ಮಧುಸೂದನ ಶರ್ಮ
9000761390
ಅನುವಾದ : ಡಿ.ಎಸ್. ಬದ್ರಿನಾಥ್

ಭಾರತೀಯ ಸಂಸ್ಕೃತಿ ಸಂಪ್ರದಾಯದಲ್ಲೇ ಒಂದು ಪ್ರತ್ಯೇಕವಾದ ವಿಶಿಷ್ಟವಾದ ಸ್ಥಾನವನ್ನು ಹೊಂದಿ, ಪರಮ ಪವಿತ್ರವಾದ ದ್ರವ್ಯವಾಗಿ ಭಾವಿಸಲ್ಪಡುವ ಮಂಗಳಕರವಾದ ದ್ರವ್ಯಗಳಲ್ಲಿ ಕೊಬ್ಬರಿಯದೇ ಅಗ್ರಸ್ಥಾನವು. ಅಂದರೆ ಅತಿಶಯೋಕ್ತಿಯಾಗಲಾರದು. ಕಲ್ಪವೃಕ್ಷವಾದ ಕೊಬ್ಬರಿ ಯಿಲ್ಲದೇ ಯಾವುದೇ ಶುಭಕಾರ್ಯಗಳು ಜರುಗಲಾರವು.

ಸಂಸ್ಕೃತದಲ್ಲಿ ನಾರಿಕೇಳ ಎಂದು ವ್ಯವಹರಿಸಲ್ಪಡುವ ಈ ಕೊಬ್ಬರಿ ಬಹಳ ಗಟ್ಟಿಯಾಗಿರುವುದರಿಂದ ಧೃಡಫಲ ಎಂದೂ ಯಾವಾಗಲೂ ಫಲಗಳನ್ನು ಈ ಮರ ನೀಡುವು ದರಿಂದ "ಸದಾಫಲ" ಎಂದೂ ನೀಳವಾದ ಎಲೆಗಳನ್ನು ಹೊಂದಿರುವುದರಿಂದ ಲಾಂಗಲಿ ಎಂದೂ ಹೀಗೆ ವಿಧವಿಧ ವಾದ ಬಗೆಯ ಸಂಸ್ಕೃತ ನಾಮಗಳನ್ನು ಕೂಡಾ ಹೊಂದಿದೆ. ಕೊಬ್ಬರಿ ಪೀಚು, ಹೂವು, ಎಲೆ, ಕಾಯಿ, ತೊಗಟೆ , ಚಿಪ್ಪು ಹೀಗೆ ಪ್ರತಿಯೊಂದು ಭಾಗವೂ ಉಪಯುಕ್ತವಾಗಿದೆ. ಆದ್ದ ರಿಂದಲೇ ಇದನ್ನು ಕಲ್ಪವೃಕ್ಷವೆಂದು ಭಾವಿಸಲಾಗಿದೆ.

ಕೇರಳ ಪ್ರಾಂತೀಯ ಭಾಷೆಯಾದ ಮಲಯಾಳಂನಲ್ಲಿ 'ಕೇರ' ಎಂದರೆ ತೆಂಗಿನ ಮರ 'ಆಳಂ' ಎಂದರೆ ಅಧಿಕ ವೆಂದೂ ಆ ಅರ್ಥದಲ್ಲಿ ತೆಂಗಿನ ಮರಗಳು ಹೆಚ್ಚಾಗಿರುವ ಕಾರ ಣಕ್ಕೆ ಕೇರಳ ರಾಜ್ಯವನ್ನು ಆ ಹೆಸರು ಬಂದಿದೆಯೆಂದು ಚರಿತ್ರೆ ಯಲ್ಲಿ ಹೇಳಲಾಗಿದೆ.

ನಮ್ಮ ದೇಶದಲ್ಲಿ ಕೇರಳ, ಮಹಾರಾಷ್ಟ್ರ ಪ್ರಾಂತ್ಯಗಳಲ್ಲಿ ತೆಂಗಿನ ಕಾಯಿಗಳನ್ನು ಒಳಸುವ ಒಂದು ಹುಣ್ಣಿಮೆಯಂದು ಒಂದು ಹಬ್ಬವನ್ನೇ ಆಚರಿಸುತ್ತಾರೆ. ಅರಕೇಸಿ ಎಂಬ ವೃಕ್ಷ ಕುಟುಂಬಕ್ಕೆ ಸೇರಿದ ಇದರ ಶಾಸ್ತ್ರೀಯ ನಾಮಧೇಯ ಕೋಕಸ್ ನ್ಯೂಸಿಫೆರಾ' ಹಿಂದಿಯಲ್ಲಿ ನಾರಿಯಲ್ ಎಂದು ಕರೆಯಲ್ಪಡುವ ಈ ಕೊಬ್ಬರಿಯನ್ನು ಇಂಗ್ಲೀಷ್‌ನಲ್ಲಿ 'ಕೋಕ ನಟ್ ಟ್ರೀ " ಎಂದು ಕರೆಯುತ್ತಾರೆ. ನಮ್ಮ ವಿವಾಹ ವ್ಯವಸ್ಥೆ, ಆಚಾರ, ಸಂಪ್ರದಾಯದ ಭಾಗವಾಗಿ ವಿವಾಹೇತರ ಕರ್ತೃಗಳ ಮಂಗಳ ಸೂತ್ರವನ್ನು ಸಹಾ ಎಳೆನೀರು ಕಾಯಿಯ ಮೇಲಿಡುತ್ತಾರೆಂದರೆ ಅದರ ಪಾವಿತ್ರ್ಯವನ್ನು ಊಹಿಸಬಹುದು.

ಹೋಮ ಇತ್ಯಾದಿ ಕಾರ್ಯಕ್ರಮಗಳನ್ನು ನಿರ್ವಹಿಸು ವಲ್ಲಿಯೂ ಸಹ ಪೂರ್ಣಾಹುತಿಗಾಗಿ ಈ ಫಲವನ್ನು ಸಮರ್ಪಿ ಸುವುದು ಸರ್ವರಿಗೂ ವಿಧಿತವಾದದ್ದೇ. ಅದೆಷ್ಟೋ ಆಧ್ಯಾತ್ಮಿಕ ಪ್ರಾಮುಖ್ಯತೆಯನ್ನು ಹೊಂದಿರುವ ಈ ಕೊಬ್ಬರಿಯ ಪೋಷಕ ಪದಾರ್ಥವಾಗಿ, ಸೌಂದರ್ಯ ಸಾಧನೆ ದ್ರವ್ಯವಾಗಿ, ವಿವಿಧ ಬಗೆಯ ಅನಾರೋಗ್ಯ ಸಮಸ್ಯೆಗಳನ್ನು ಕೊನೆಗಾಣಿಸಬಲ್ಲ ಅಪಾರ ಔಷಧ ಗುಣಗಳ ಖನಿಯಾಗಿ ಪ್ರಸಿದ್ಧಿ ಪಡೆದಿದೆ. ಆಯಾ ವ್ಯಾಧಿಗಳಿಗೆ ಆಹಾರೌಷಧಿಯಾಗಿ ಈ ಕೊಬ್ಬರಿಯನ್ನು ಹೇಗೆ ಬಳಸಬಹುದೆಂಬುದನ್ನು ಈಗ ತಿಳಿದುಕೊಳ್ಳೋಣ.

### ಕೇಶವು ಚೆನ್ನಾಗಿ ಬೆಳೆಯಲು:

ಒಣಗಿದ ಕೊಬ್ಬರಿ ತುರಿ, ಕರಿ ಎಳ್ಳು ನೆಲ್ಲಿಕಾಯಿ ಪುಡಿ, ಬೆಲ್ಲವನ್ನು ಒಂದೊಂದು 50 ಗ್ರಾಂನಂತೆ ತೆಗೆದುಕೊಂಡು ಎಲ್ಲ ವನ್ನು ಕಲಸಿ ಕುಟ್ಟಿಟ್ಟುಕೊಂಡು ದಿನಕ್ಕೆರಡು ಬಾರಿ, ಬಾರಿ ಯೊಂದಕ್ಕೆ ಒಂದು ಟೀಸ್ಪೂನ್ ಔಷಧವನ್ನು ಚಪ್ಪರಿಸಿ ಒಂದು ಕಪ್ಪು ಹಾಲನ್ನು ಸೇವಿಸುತ್ತಿದ್ದರೆ ಕೇಶರಾಶಿಗೆ ಒಳ್ಳೆಯ ಪೋಷಣೆ ದೊರೆತು, ಕೇಶವು ಒತ್ತಾಗಿ, ಕಪ್ಪಾಗಿ ಹೊಳೆ ಹೊಳೆಯುತ್ತಾ ಆಕ ರ್ಷಣೀಯವಾಗಿ ಬೆಳೆಯುತ್ತವೆ.

### ಬಾಯಿಹುಣ್ಣಿಗೆ:

ದಿನವೂ 1-2 ಬಾರಿ ಬಾರಿಯೊಂದಕ್ಕೆ 100 ಮಿ.ಲೀ. ಕೊಬ್ಬರಿಯ ಹಾಲನ್ನು ಮುಕ್ಕಳಿಸುತ್ತಿದ್ದರೆ ಬಾಯಿ ಪೊಕ್ಕು ತಗ್ಗು ತ್ತದೆ.

### ಹೊಟ್ಟೆ, ಸಣ್ಣ ಕರುಳಿನ ವ್ರಣಗಳಿಗೆ:

ದಿನವೂ ಒಂದು ಬಾರಿ 100 - 200 ಮಿ.ಲೀ. ಎಳೆ ನೀರಿನಲ್ಲಿ 10 ಗ್ರಾಂ ಹಸಿಗೊಬ್ಬರಿ ತುರಿ, 5 ಗ್ರಾಂ ಸ್ಪಟಿಕ ಬೆಲ್ಲದ ಪುಡಿ, ಒಂದು ಏಲಕ್ಕಿ ಬೀಜದಲ್ಲಿರುವ ಗುಂಡುಗಳ ಪುಡಿಯನ್ನು ಕಲಸಿ ಸೇವಿಸುತ್ತಿದ್ದರೆ. ಹೊಟ್ಟೆ, ಸಣ್ಣ ಕರುಳಿನ ಹುಣ್ಣುಗಳು, ಅಲ್ಸರ್, ಗಾಯಗಳು ತಗ್ಗಿ ಹೋಗುತ್ತವೆ.

### ವಿವಿಧ ಬಗೆಯ ತಲೆನೋವುಗಳಿಗೆ :

ದಿನವೂ ಬರಿ ಹೊಟ್ಟೆಯಲ್ಲಿ 100 ಮಿ.ಲೀ. ಕೊಬ್ಬರಿ ಹಾಲಿನಲ್ಲಿ ಒಂದು ಟೀಸ್ಪೂನ್ ಸ್ಪಟಿಕ ಬೆಲ್ಲ ಪುಡಿ ಕಲಸಿ ಸೇವಿಸುತ್ತಿದ್ದರೆ ಉತ್ತಮವಾದ ಫಲಿತಾಂಶ ದೊರೆಯುತ್ತದೆ.

**ಬೆವರು ಸಾಲೆಗೆ:**

ಕೊಬ್ಬರಿ ಹಾಲಿನಲ್ಲಿ ತಕ್ಕಷ್ಟು ಜೀರಿಗೆ ಪುಡಿ ಕಲಿಸಿ, ಹಚ್ಚಿ ಆರಿದ ನಂತರ ಕಡ್ಲೆಹಿಟ್ಟನ್ನು ಉಪಯೋಗಿಸಿ ಸ್ನಾನ ಮಾಡುತ್ತಿದ್ದರೆ. ಶೀಘ್ರದಲ್ಲಿ ಈ ಸಮಸ್ಯೆ ಬಗೆ ಹರಿಯುತ್ತದೆ.

**ಕೂದಲು ಸೀಳುವಿಕೆಗೆ :**

ವಾರದಲ್ಲಿ 1-2 ಬಾರಿ ಕೊಬ್ಬರಿ ಹಾಲನ್ನು ತಲೆಗೆ ಲೇಪಿಸಿ ಒಂದು ತಾಸು ತಡೆದು ಉಗುರು ಬೆಚ್ಚಗಿನ ನೀರಿ ನಲ್ಲಿ ತಲೆಸ್ನಾನ ಮಾಡುತ್ತಿದ್ದರೆ ಸೀಳು ಕೂದಲಿನ ಸಮಸ್ಯೆ ಹದಬಸ್ತಿನಲ್ಲಿರುತ್ತದೆ. ತಲೆಯ ಕೂದಲು ಚೆನ್ನಾಗಿ ಬೆಳೆ ಯುತ್ತಾ ಕಾಂತಿಯುತವಾಗಿರುತ್ತದೆ.

**ಕಾಲಿನ ಗಾಯ ಹಾಗೂ ಬೊಬ್ಬೆಗಳಿಗೆ:**

ಎಳೆನೀರು, ಸುಣ್ಣದ ಲೇಹ ಸಮಾನವಾಗಿ ಕಲಿಸಿ ಸ್ವಲ್ಪ ಅರಶಿನ ಕಲಿಸಿ ಊತಕ್ಕೆ ದಿನಕ್ಕೆರಡು ಬಾರಿ ಹಚ್ಚು ತ್ತಿದ್ದರೆ ಶೀಘ್ರದಲ್ಲಿ ಈ ಸಮಸ್ಯೆ ಶಮನಗೊಳ್ಳುತ್ತದೆ. ಈ ಔಷಧವನ್ನು ಹೀಗೆ ಬಳಸುವುದರಿಂದ ಕಾಲು, ಕೈಗಳ, ಉರಿ,ತುರಿಕೆ ತಗ್ಗುತ್ತದೆ.

**ಉರಿ ಮೂತ್ರಕ್ಕೆ:**

ನಿತ್ಯ ಬೆಳಗ್ಗೆ - ಸಾಯಂಕಾಲ ಬಾರಿಯೊಂದಕ್ಕೆ 100 -200 ಮೀ.ಲೀ.ಎಳನೀರಿನಲ್ಲಿ ಒಂದು ಟೀಸ್ಪೂನ್ ಶುಂಠಿ ರಸವನ್ನು ಕಲಿಸಿ ಸೇವಿಸುತ್ತಿದ್ದ. ಮೂತ್ರದ ಸಮಯ ದಲ್ಲಿ ಉರಿ,ನೋವು, ಚಳುಕು, ಪೋಟು ಬರುವುದು ಇತ್ಯಾದಿ ತೊಂದರೆಗಳು ಶೀಘ್ರವಾಗಿ ಶಮನಗೊಳ್ಳುತ್ತದೆ.

**ಪ್ರಶಾಂತವಾದ ನಿದ್ರೆಗೆ :**

ಒಣಕೊಬ್ಬರಿ, ಗಸೆಗಸೆ, ಸ್ಫಟಿಕ ಬೆಲ್ಲದ ಚೂರ್ಣ ವನ್ನು ಸಮಾನವಾಗಿ ಕಲಿಸಿಟ್ಟುಕೊಂಡು ದಿನವೂ ರಾತ್ರಿ ವೇಳೆ ಮಲಗುವಾಗ 100 ಮಿ.ಲೀ.ಉಗುರು ಬೆಚ್ಚಗಿನ ಹಾಲಿನಲ್ಲಿ ಒಂದು ಟೀಸ್ಪೂನ್ ಈ ಪುಡಿಯನ್ನು ಕಲಿಸಿ ಸೇವಿಸುತ್ತಿದ್ದರೆ ಪ್ರಶಾಂತವಾದ ನಿದ್ದೆಯನ್ನು ಪಡೆದು ಉತ್ತಮ ಆರೋಗ್ಯವುಂಟಾಗುತ್ತದೆ.

**ಕೈಕಾಲು ಸೀಳುವಿಕೆಗೆ :**

ಕೊಬ್ಬರಿ ಹಾಲು, ಗ್ಲಿಸರಿನ್ ಒಂದೊಂದು 10 ಮಿ.ಲೀ. ಹೇಳಿದಂತೆ ತೆಗೆದುಕೊಂಡು ಎರಡನ್ನು ಚೆನ್ನಾಗಿ ಕಲಿಸಿ ಹಚ್ಚುತ್ತಿದ್ದರೆ ಒಳ್ಳೆಯ ಪ್ರಯೋಜನ ಕೈಗೂಡಿ ಕೈಕಾಲುಗಳು ಮೃದುತ್ವವನ್ನು ಪಡೆದುಕೊಳ್ಳುತ್ತವೆ.



## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ತಿರುಮಲೆಯಲ್ಲಿ

ಮಾಡಬೇಕಾದವು; ಮಾಡಬಾರದವುಗಳು ಹಾಗೂ ನಿಷಿದ್ಧವಾದವು.

### ಮಾಡಬೇಕಾದವು :

- ☑ ತಿರುಮಲೆಗೆ ಬರುವ ಮುನ್ನ ನಿಮ್ಮ ಇಷ್ಟ ಅಥವಾ ಕುಲದೈವವನ್ನು ಪೂಜಿಸಿರಿ.
- ☑ ಶ್ರೀವೆಂಕಟೇಶ್ವರ ಸ್ವಾಮಿಯನ್ನು ದರ್ಶಿಸುವ ಮೊದಲು ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನಮಾಡಿ,
- ☑ ಅಲ್ಲಿಯೇ ಇರುವ ಶ್ರೀ ವರಾಹಸ್ವಾಮಿಯನ್ನು ದರ್ಶಿಸಿರಿ.
- ☑ ದೇವರ ದರ್ಶನಕ್ಕೆ ಸರದಿಯ ಸಾಲು ಸೇರಿರಿ.
- ☑ ಆಲಯದ ಒಳಗಡೆ ಸ್ವಾಮಿಯಲ್ಲಿ ಮನಸ್ಸನ್ನು ಕೇಂದ್ರೀಕರಿಸಿ.
- ☑ ಆಲಯದ ಒಳಗಡೆ ಗಂಭೀರ ಮೌನವನ್ನು ಪಾಲಿಸಿರಿ ಮತ್ತು
- ☑ ಮನಸ್ಸಿನಲ್ಲಿ "ಓಂ ನಮೋ ವೇಂಕಟೇಶಾಯ" ಎಂದು ಜಪಿಸಿರಿ.
- ☑ ತಿರುಮಲೆಯಲ್ಲಿ ಪಾಪನಾಶಿನಿಯಲ್ಲೂ, ಆಕಾಶಗಂಗೆಯಲ್ಲೂ ಸ್ನಾನಮಾಡಿರಿ.
- ☑ ತಿರುಮಲೆಗೆ ಬಂದಾಗ ಪ್ರಾಚೀನಪರಂಪರೆಯನ್ನೂ ಆಚಾರವನ್ನೂ ಗೌರವಿಸಿ.
- ☑ ತಮ್ಮ ಕಾಣಿಕೆಗಳನ್ನು ಹುಂಡಿಯಲ್ಲಿ ಮಾತ್ರವೇ ಸಮರ್ಪಿಸಿ.
- ☑ ತಿರುಮಲೆಯನ್ನು ಶುಭ್ರವಾಗಿ ಶುದ್ಧವಾಗಿ ಇಡಲು ಸಹಕರಿಸಿ. ಬಯೋಡಿಗ್ರೇಡಬಲ್ ಪ್ಲಾಸ್ಟಿಕ್ ಕವರಗಳನ್ನು ಮಾತ್ರವೇ ಬಳಸಿರಿ.


### ಮಾಡಬಾರದವು :

- ☒ ತಮ್ಮೊಂದಿಗೆ ಹೆಚ್ಚಿನ ಹಣ, ಆಭರಣಗಳನ್ನು ತರಬೇಡಿ.
- ☒ ದೇವರನ್ನು ಸೇವಿಸುವುದರ ಹೊರತು ಬೇರೆ ಯಾವ ಕಾರಣಕ್ಕೂ ತಿರುಮಲೆಗೆ ಬಾರದಿರಿ.
- ☒ ದೇವರ ದರ್ಶನಕ್ಕಾಗಿ ನೂಕುನುಗ್ಗುಲು ಮಾಡದಿರಿ.
- ☒ ಸಂಪ್ರದಾಯದಂತೆ ಆಲಯ ಪ್ರವೇಶ ನಿಷೇಧವಿದ್ದಲ್ಲಿ ಆಲಯ ಪ್ರವೇಶ ಮಾಡದಿರಿ.
- ☒ ಹೂವು ಮುಡಿಯದಿರಿ. (ಎಲ್ಲ ಹೂವುಗಳೂ ದೇವರಿಗೇ.)
- ☒ ನೀರು, ವಿದ್ಯುತ್‌ಗಳು ಪೋಲು ಮಾಡದಿರಿ.
- ☒ ಅಪರಿಚಿತರಿಗೆ ನಿಮ್ಮ ಕೋಣೆಯ ಬೀಗದ ಕೈಗಳನ್ನು ನೀಡದಿರಿ, ಅವರನ್ನು ನಿಮ್ಮ ಕೊಠಡಿಗೆ ಸೇರಿಸದಿರಿ.
- ☒ ಆಲಯದ ಒಳಗೆ, ಹೊರಗೆ ಪಾದರಕ್ಷೆಗಳನ್ನು ಧರಿಸಿ ಓಡಾಡಬೇಡಿರಿ.

### ನಿಷೇಧಿತ ಪದಾರ್ಥಗಳು :( ನಿಷೇಧಿಸಿದವು)

- ✗ ತಿರುಮಲೆಯಲ್ಲಿ ಮಾಂಸಾಹಾರವನ್ನು ಬಳಸಬೇಡಿರಿ. ಮಾದಕ ವಸ್ತು, ಪೇಯುಗಳನ್ನು ಬಳಸಬೇಡಿರಿ. ಧೂಮಪಾನ ಮಾಡಬೇಡಿರಿ.
- ✗ ವಸತಿಗಾಗಿ, ಪ್ರತ್ಯೇಕ ಪ್ರವೇಶಕ್ಕಾಗಿ ದಳ್ಳಾಳಿಗಳನ್ನು ಆಶ್ರಯಿಸಬೇಡಿರಿ.
- ✗ ಬೀದಿವ್ಯಾಪಾರಿಗಳಿಂದ ನಕಲೀ ಪ್ರಸಾದ ಕೊಳ್ಳಬೇಡಿ.
- ✗ ದೇವಾಲಯದಲ್ಲಿ ಉಗುಳುವುದೇ ಮುಂತಾದವುಗಳನ್ನು ಮಾಡದಿರಿ.
- ✗ ಅನ್ಯಮತ ಪ್ರಚಾರ ನಿಷೇಧಿಸಲಾಗಿದೆ.
- ✗ ವಿವಿಧ ರಾಜಕೀಯ ಸಭೆ, ಬ್ಯಾನರು, ಧರಣಿ, ರಾಸ್ತಾರೋಕೋ, ಹರತಾಳ - ಮೊದಲಾದವುಗಳನ್ನು ನಿಷೇಧಿಸಲಾಗಿದೆ.
- ✗ ಜಂತುವಧೆ ನಿಷೇಧ.
- ✗ ಯಾವುದೇ ರೂಪದಲ್ಲಿ ಜೂಜಾಡುವುದನ್ನು ನಿಷೇಧಿಸಲಾಗಿದೆ.
- ✗ ಸೆಲ್‌ಫೋನ್, ಕ್ಯಾಮರಾ, ಮತ್ತಿತರ ವಿದ್ಯುತ್ ಚಾಲಿತ ಉಪಕರಣಗಳನ್ನು ಆಲಯಕ್ಕೆ ಒಯ್ಯಬೇಡಿರಿ.ಆಯುಧಗಳನ್ನು ತರಬಾರದು.
- ✗ ಭಿಕ್ಷೆಯನ್ನು ಪ್ರೋತ್ಸಾಹಿಸದಿರಿ. ಹುಸಿ ಪ್ರಸಾದಗಳನ್ನು ಕೊಳ್ಳಬೇಡಿರಿ.

# ಪುಸ್ತಕ ವಿರ್ಮಶೆ




**ಪುಸ್ತಕದ ಹೆಸರು : ಭಾರತ ಲೋಕ**

**ಲೇಖಕರು : ಶ್ರೀಮತಿ ವಿನುತಾ ಹಂಚಿನಮನಿ**

**ದೂರವಾಣಿಸಂಖ್ಯೆ: 9448130417**

**ಪುಟಗಳು : 96**

**ಬೆಲೆ : ರೂ.100/-**

**ಮುದ್ರಣ: ಚೇತನ್ ಬುಕ್ಸ್ ಹುಬ್ಬಳ್ಳಿ**

"ಭಾರತ ಲೋಕ" ಮುನ್ನಡಿಯಲ್ಲಿ ಶ್ರೀರಾಮ ಭಟ್ ಅವರು ಸಂಕೀರ್ಣತೆಯ ಮಹಾಭಾರತದ ಮೈಮನಗಳು. ಅದನ್ನು ಪರಿಭಾವಿಸಲು ಸರಳತೆಯೂ ಒಂದು ಮಾರ್ಗ. ಆ ಮಾರ್ಗದಲ್ಲೆ ನಡೆದು ಮಹಾಭಾರತ ಚಿಂತನೆಯಲ್ಲಿ ಪರಿಶ್ರಮದಲ್ಲಿ ಲೇಖಕರು ಪಾಲ್ಗೊಂಡಿದ್ದಾರೆ ಎಂದಿದ್ದಾರೆ ಈ ಪದ್ಯ - ಗದ್ಯಗಳ ಹದಿನೆಂಟು ಅಧ್ಯಾಯಗಳಿವೆ. ಲೇಖಕರು ಅಂದಿನ ಮನುಷ್ಯರ ಸಂಬಂಧಗಳ ಗಾಢತೆ, ಗೋಜಲು, ರಾಜಕೀಯ ಕ್ಲಿಷ್ಟತೆಗಳು ಭಾವನೆಗಳು ಮೌಲ್ಯ ಇಂದು ಕೂಡಾ ಪ್ರಸ್ತುತ.ಹೀಗಾಗಿ "ಚಿರನೂತನ' ಎಂದಿದ್ದಾರೆ.

ಶ್ರೀಮತಿ ವಿನುತಾ ಅವರು ತುಂಬಾ ಸೊಗಸಾಗಿ ಕೃತಿಯನ್ನು ಪ್ರಾರಂಭಿಸಿದ್ದಾರೆ. 'ಗಣಪತಿಯ ದಿವ್ಯ ಬರವಣಿಗೆಯ ಓಟ/ ಸಾಗಿತು ಜಯದ ಮೆರವಣಿಗೆಯ ಸಾರೋಟ ವೇದವ್ಯಾಸರ ಕಾವ್ಯ ರಚನೆಯ ಆಟ ಹಾರಿಸಿತು ಸಮರದಲ್ಲಿ ವಿಜಯದ ಬಾವುಟ ಎನ್ನುತ್ತ ಸಾಗುವ ಸುದೀರ್ಘ ಪದ್ಯ ಇಡೀ ಭಾರತದ ಅಂತಃ ಸ್ಸತ್ವ ವಿವರಿಸಿದೆ. ಕೊನೆಗೆ ದೇವರ ದೇವನಿಗೂ ಬಿಡದ ಕರ್ಮ ಅಜರಾಮರ ಭಾರತದ ಧರ್ಮ ಎಂದು ಮುಗಿಸಿದ್ದಾರೆ. ತುಂಬ ಚಂದದ ಕಾವ್ಯಬಂಧದ ಈ ಪದ್ಯಕೃತಿಯನ್ನು ಓದಲು ಪ್ರೇರೇಪಿಸುತ್ತದೆ.

ಈ ಕೃತಿಯಲ್ಲಿ ಕೆಲವು ಗಮನಾರ್ಹ ನುಡಿಗಳಿವು - ಕುರುಕುಲ ದಿಗ್ಗಜ ಧರ್ಮ - ಅಧರ್ಮ ಪಾಲಿಸುವಲ್ಲಿ ನ್ಯಾಯ - ಅನ್ಯಾಯ ಸರಿ ಪಡಿಸುವಲ್ಲಿ ಸೋತು, ಯುದ್ಧಕ್ಕೂ ಅಪಜಯಗಳಿಗೂ ಅನಾಹುತಗಳಿಗೂ ಕಾರಣನಾದ. ತನ್ನದೇ ಆದ ಒಂದು ಪರಂಪರೆಗೆ ಹೆಸರಾಗಿ "ಭೀಷ್ಮಭಾರತ" ಸೃಷ್ಟಿಸಿದ.ಮಹಾಭಾರತದಲ್ಲಿ ತಾಯಂದಿರ ಕೊಡುಗೆ ಅಪಾರ.ತಾಯಿಯ ಮಮತೆ ಆಸೆ ಅಂತಸ್ತು ಅವಮಾನ ಮತ್ತು ತ್ಯಾಗಗಳು ಮಹಾಭಾರತದ ಬುನಾದಿ ಜೀವಸಹಿತ ಸ್ವರ್ಗಕ್ಕೆ ಹೋಗಬೇಕೆನ್ನುವ ಧರ್ಮರಾಯನ ಹಟಕ್ಕೆ ಬೆಂಬಲಿಸಿ ದ್ರೌಪದಿಯು ಎಲ್ಲರಿಗಿಂತ ಮೊದಲು ಜೀವತೆತ್ತಳು ಅವಮಾನದ ಮೇಲೆ ಅವಮಾನ, ಅಘಾತದ ಮೇಲೆ ಅಘಾತ... ಇದರಿಂದ ಕರ್ಣ ದುಷ್ಟತನ ಬೆಳೆಸಿಕೊಂಡ, ಶ್ರೀ ಕೃಷ್ಣನ ಕೃಪೆಯನ್ನು ನೆನೆದು, ಯಾರೂ ಇಲ್ಲದವರಿಗೆ ದೇವರಿದ್ದಾನೆಂದು ಮನನ ಮಾಡಿಕೊಂಡೆ ಎಂದ ದ್ರೌಪದಿಯ ಕೊನೆಯ ಮಾತು ಕೊನೆಗಾಲದಲ್ಲಿ ನನ್ನ ದೇಹಕ್ಕೆ ಮನಸ್ಸಿಗೆ ಹತ್ತಿರ ಇದ್ದವನು ಭೀಮ ಮಾತ್ರ.. ಹೀಗೆ ಲೇಖಕರು ಪ್ರತೀ ಪಾತ್ರದ ಅಂತರಂಗವನ್ನು ತಿಕ್ಕಿ ಒರೆಗೆ ಹಚ್ಚಿ ಶುದ್ಧತೆಯನ್ನು ತೋರುವ ಪ್ರಯತ್ನ ಮಾಡಿದ್ದಾರೆ.

ದ್ರೌಪದಿಯ ಹಿನ್ನೆಲೆಯಲ್ಲಿ ಲೇಖಕರು ಆಡಿದ ಈ ಮಾತುಗಳು ಗಮನಾರ್ಹವಾಗಿವೆ. ಇಂಥ ಎಷ್ಟು ದ್ರೌಪದಿಯರು ಎಲ್ಲ ಯುಗಗಳಲ್ಲೂ ಆಗಿ ಹೋಗಿಲ್ಲ ಹುಟ್ಟಿನಿಂದಲೇ ಅಂಟಿಬರುವ ಕೀಳರಿಮೆ, ಅಸಮಾನತೆ ಪರತಂತ್ರ ಭೌತಿಕ, ಮಾನಸಿಕ ಶೋಷಣೆ, ಹೊಂದಾಣಿಕೆ, ಹೋರಾಟಗಳು.. ಹೆಣ್ಣಿಗೆ ಅಂಟಿದ ಶಾಪವಲ್ಲವೇ? ಒಳ್ಳೆಯ ಹೆಸರನ್ನು ಗಳಿಸಬೇಕಾದರೆ ಸಂಪ್ರದಾಯದ ಹೆಸರಿನಲ್ಲಿ ಧರ್ಮದ ಹಾದಿಯಲ್ಲಿ ಇವನ್ನೆಲ್ಲಾ ಸಹಿಸಿಕೊಳ್ಳಬೇಕೆ? ದ್ರೌಪದಿಯು ಆತ್ಮ ಕೂಗಿ ಹೇಳುತ್ತದೆ. ಸೀತೆಯಂತೆ ಅಗ್ನಿಗೆ ಒಪ್ಪಿಕೊಳ್ಳುವುದು ಬೇಡ, ಅಹಲ್ಯದಂತೆ ಕಲ್ಲಾಗುವುದು ಬೇಡ, ಅಂಬೆ ದ್ರೌಪದಿಯರಂತೆ ಅವಮಾನಕ್ಕೆ ಈಡಾಗುವುದು ಬೇಡ, ರೇಣುಕೆಯಂತೆ ಪರಶುರಾಮನ ಕೊಡಲಿಗೆ ಕೊರಳೊಪ್ಪಿಸುವುದು ಬೇಡ ಪಂಚ ಪತಿವ್ರತೆಯರ ಪಟ್ಟ ಬೇಡ ಭೂಮಿ, ಪ್ರಕೃತಿ ಶಕ್ತಿ ರೂಪಿಣಿ, ನದಿ ಎನ್ನುವ ಬಿರುದಗಳೂ ಬೇಡ ಸಾಮಾನ್ಯವಾದ ಸುಖೀಜೀವನದ ಬಯಕೆಗಳಿಗೆ ಅವಳನ್ನು ಹಕ್ಕುದಾರಳನ್ನಾಗಿ ಮಾಡಿದರೆ ಸಾಕು ಅದರಲ್ಲೇ ತನ್ನ ಜೀವನದ ಸಾರ್ಥಕತೆಯನ್ನು ಕೊಂಡುಕೊಳ್ಳುತ್ತಾಳೆ.

– ಕೃತಿಪರಿಚಯ: ಡಾ|| ಹೆಬ್ರಿ

# ಸಂಸ್ಕೃತ ಕಲಿಯೋಣ...!!

## द्वादशः पाठः

### ಹನ್ನೆರಡನೆಯ ಪಾಠ

ರಚನೆ:- ಮಹಾಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ
ನಿರ್ವಹಣೆ:- ಮಹಾಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

1. पाकः = ಅಡುಗೆ 2. कथम् = ಹೇಗೆ 3. अकरोत् = ಮಾಡಿದ 4. नमस्कारः = ನಮಸ್ಕಾರ

5. एवम् = ಹೀಗೆ 6. अकरोः = ಮಾಡಿದರು, ಮಾಡಿದ್ದಿರೋ ಇಲ್ಲವೋ 7. व्यापारः = ವ್ಯವಸಾಯ (ವ್ಯಾಪಾರ)

8. इत्थम् = ಹೀಗೆಯೇ, 9. अकरवम् = ಮಾಡಲಾಯಿತು (ಮಾಡಿರುತ್ತೇನೆ).

### ಪ್ರಶ್ನೆ

1. ब्राह्मणः स्नानं अकरोत्।
2. अहं पाकं करोमि।
3. त्वं स्नानं अकरोः।
4. बालकाः नमस्कारं कुर्वन्ति।
5. अहं नमस्कारान् अकरवम्।
6. के व्यापारं कुर्वन्ति?
7. त्वम् एकं व्यापारं अकरोः खलु!
8. त्वं कथं स्नानं अकरोः?
9. इत्थं अकरवम्।
10. अहो! यूयं अद्यैव स्नानं कुरुथ किम्?

### ಉತ್ತರ

1. ಬ್ರಾಹ್ಮಣನು ಸ್ನಾನವನ್ನು ಮಾಡಿದನು.
2. ನಾನು ಅಡುಗೆಯನ್ನು ಮಾಡುತ್ತೇನೆ.
3. ನೀವು ಸ್ನಾನವನ್ನು ಮಾಡಿಲ್ಲವೋ.
4. ಬಾಲಕರು ನಮಸ್ಕಾರ ಮಾಡುತ್ತಾರೆ.
5. ನಾನು ನಮಸ್ಕಾರವನ್ನು ಮಾಡಿದ್ದೇನೆ.
6. ಯಾವ ವ್ಯವಸಾಯ (ವ್ಯಾಪಾರ)ವನ್ನು ಮಾಡುತ್ತೀರಿ?
7. ನೀನು ಒಂದು ವ್ಯಾಪಾರ ಮಾಡುತ್ತೀಯಾ ಅಲ್ವೊ?
8. ನೀನು ಯಾವಾಗ ಸ್ನಾನವನ್ನು ಮಾಡಿರುವಿ?
9. ಹೀಗೆಯೇ ಮಾಡಿರುವಿಯೇನು?
10. ಅಹೋ! ನೀವೆಲ್ಲರೂ ಇಂದೆಯೇ ಸ್ನಾನವನ್ನು ಮಾಡಿದ್ದಿರೋ ಇಲ್ಲವೋ?

### ಪ್ರಶ್ನೆ

1. ನಾವು ನಮಸ್ಕಾರವನ್ನು ಮಾಡಿರುವುದಿಲ್ಲ.
2. ನೀವು ಏಕೆ ನಮಸ್ಕಾರವನ್ನು ಮಾಡಿಲ್ಲ?
3. ಯಾತಕ್ಕಾಗಿ ಬಾಲಕರು ಇಷ್ಟೊಂದು ನಮಸ್ಕಾರ ಮಾಡುತ್ತಿದ್ದಾರೆ?
4. ಬಾಲಕರೋ ಅಲ್ಲವೋ.
5. ನೀವೆಲ್ಲರೂ ಬಾಲಕರೇ ಅಲ್ಲವೇ.
6. ನಾವೆಲ್ಲರೂ ಬಾಲಕರೇ ಇದ್ದೇವೆ.
7. ನಿನ್ನೆಯ ದಿನದ ಅಡುಗೆ ಹೇಗಿತ್ತು?
8. ದೇವನು ಇದ್ದಾನೆ.
9. ಇಂದಿನ ರಾತ್ರಿಯ ಭೋಜನ ಹೇಗೆ ಇರುತ್ತೇ?
10. ನಾನು ಪ್ರಾತಃ ಕಾಲಕ್ಕೆ ಭೋಜನ ಮಾಡಿದ್ದೇನೆ.

### ಉತ್ತರ

1. वयं नमस्कारान् न कुर्मः।
2. किं त्वं नमस्कारान् अकरोः?
3. किमर्थं बालाः तथा नमस्कारान् कुर्वन्ति?
4. किं वा ते बालाः एव किल।
5. यूयं बालाः न किम्।
6. वयमपि बालाः एव।
7. श्वः पाकः कथम्?
8. देवः एव अस्ति।
9. अद्य रात्रौ भोजनं कथम्?
10. अहं प्रातः एव भोजनं अकरवम्।

## ನೀತಿ ಕಥೆ

# ನವಿಲಿನ ಭಕ್ತಿ

- ಶ್ರೀಮತಿ. ಸುಧಾಮಧುಸೂದನ್

ತ್ರೇತಾಯುಗದಲ್ಲಿ ಶ್ರೀರಾಮನು ವೈದೇಹಿಯನ್ನು ಹುಡುಕುತ್ತಾ ಅರಣ್ಯದಲ್ಲಿ ಸಂಚರಿಸುತ್ತಿದ್ದಾಗ ಎಲ್ಲಾ ಮೃಗ, ಮರ ಪಕ್ಷಿಗಳಲ್ಲಿ ಸೀತೆಯ ಬಗ್ಗೆ ವಿಚಾರಿಸುತ್ತಿದ್ದಾಗ ಅಲ್ಲೊಂದು ನವಿಲು ಶ್ರೀರಾಮನ ಬಳಿ ಬಂದು ತಾನು ರಾವಣನು ಸೀತೆಯನ್ನು ವಿಮಾನದಲ್ಲಿ ಅಪಹರಿಸಿಕೊಂಡು ಹೋದುದನ್ನು ನೋಡಿದೆ ಎಂದಿತು. ಶ್ರೀರಾಮನು ಬಹಳ ಸಂತೋಷದಿಂದ ಆ ನವಿಲುನು ಕೇಳಿದನು ನವಿಲೇ ನೀನು ನನಗೆ ಆ ದಾರಿಯನ್ನು ತೋರಿಸುವೆಯಾ?" ಎಂದನು. ನವಿಲು ತಾನು ಮೇಲೆ ಹಾರುವುದಾಗಿಯೂ ನೀನು ಕೆಳಗೆ ನಡೆದು ಬರುವಂತೆ ಶ್ರೀರಾಮನಲ್ಲಿ ಹೇಳಿತು.

ಸರಿ ನವಿಲು ಆಕಾಶದಲ್ಲಿ ಹಾರುತಿತ್ತು ಕೆಳಗೆ ರಾಮನು ನವಿಲಿನ ನೆರಳನ್ನು ನೋಡುತ್ತಾ ಓಡಿ ಬರುತ್ತಿದ್ದನು. ಸ್ವಲ್ಪ ದೂರ ಹೋದ ಮೇಲೆ ನವಿಲಿನ ವೇಗಕ್ಕೆ ರಾಮನು ಓಡಲಾರದೆ ಸ್ವಲ್ಪ ನಿಧಾನಿಸಿದನು. ಆಗ ನವಿಲು ಆಕಾಶದಿಂದ ಇಳಿದು ರಾಮನಲ್ಲಿ "ರಾಮಾ ನಾನು ಬಹಳ ವೇಗವಾಗಿ ಹಾರಿಬಿಡುವೆ, ನಿನಗೆ ದಾರಿ ತಪ್ಪಬಹುದು. ಆದ್ದರಿಂದ ನಾನು ನನ್ನ ಒಂದೊಂದೇ ಗರಿಗಳನ್ನು ಕಿತ್ತಿ ನಾನು ಹೋಗುವ ದಾರಿಯಲ್ಲಿ ಹಾಕುವೆ. ನೀನು ಆ ಗರಿಗಳ ಗುರುತು ಹಿಡಿದುಕೊಂಡು ಬಾ. ನಾನು ನಿನ್ನ ಜಟಾಯು ಪಕ್ಷಿಯವರೆಗೂ ಕರೆದುಕೊಂಡು ಹೋಗುವೆ ಎಂದಿತು."ಶ್ರೀರಾಮನು ಸಂತೋಷದಿಂದ ಆ ನವಿಲಿನ ಗರಿಯ ಜಾಡನ್ನು ಹಿಡಿದುಕೊಂಡು ಕೆಳಗೆ ಭೂಮಿಯಲ್ಲಿ ಓಡ ತೊಡಗಿದನು. ನವಿಲು ತನ್ನ ಒಂದೊಂದೇ ಗರಿಗಳನ್ನು ಕಿತ್ತಿ ಕಿತ್ತಿ ಹಾಕುತ್ತಾ ಮುಂದೆ ಮುಂದೆ ಸಾಗಿತು.

ಸಾಮಾನ್ಯವಾಗಿ ನವಿಲುಗಳಿಗೆ ಹಾರಲು ಅದರ ಗರಿಗಳೇ ಕಾರಣ ನವಿಲು ತನ್ನ ಗರಿಗಳನ್ನು ಕಿತ್ತ ಬೇಕಾದರೆ ಬಹಳ ನೋಯುವುದು.ಆದರೂ ನವಿಲು ಸ್ವಾಮಿ ನಿಷ್ಠೆಯಿಂದ ಯಾವುದನ್ನು ಲೆಕ್ಕಿಸದೇ ತನ್ನ ಕೊನೇ ಗರಿ ಇರುವವರೆಗೂ ಕಿತ್ತಿ ಹಾಕಿ ಜಟಾಯು ಪಕ್ಷಿಯಿರುವಲ್ಲಿಗೆ ಬಂದು ತಲುಪಿ ನೆಲಕ್ಕೆ ಬಿದ್ದು ಬಿಟ್ಟಿತು.


ಶ್ರೀರಾಮನು ಓಡುತ್ತಾ ಬಂದನು. ನವಿಲು ನೆಲದ ಮೇಲೆ ರಕ್ತ ಸಿಕ್ತವಾಗಿ ಕೊನೆಯುಸಿರು ಹಿಡಿದು ಬಿದ್ದಿತ್ತು. ರಾಮನು ಓಡಿ ಬಂದು ನವಿಲನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡನು. ಆಗ ನವಿಲು ರಾಮಾ ಇದೇ ದಾರಿಯಲ್ಲಿ ಮುಂದೆ ಸಾಗು ನಿನಗೆ ಜಟಾಯು ಪಕ್ಷಿಯು ಸಿಗುತ್ತದೆ. ಮುಂದಿನದು ಅವನು ಹೇಳುವನು ಎಂದಿತು. ನವಿಲಿನ ಸ್ವಾಮಿ ಭಕ್ತಿಯನ್ನು ನೋಡಿ ರಾಮನು "ನವಿಲೇ ನಾನು ಈ ಜನ್ಮದಲ್ಲಿ ಮನುಷ್ಯನ ಅವತಾರಿಯಾದುದರಿಂದ ನಿನಗೆ ಪ್ರಾಣಭಿಕ್ಷೆ ಕೊಡಲಾರೆ ಆದರೆ ನೀನೂ ನಿನ್ನ ಜೀವಸಮಾನವಾದ ಈ ನವಿಲುಗರಿಗಳಿಂದ ನನ್ನ ಸೀತೆಯ ದಾರಿ ತೋರಿಸಿದ್ದರಿಂದ ಮುಂದೆ ದ್ವಾಪರಯುಗದಲ್ಲಿ ಕೃಷ್ಣನಾಗಿ ಅವತರಿಸಿದ ಮೇಲೆ ನಾನು ಸದಾ ಈ ನಿನ್ನ ಗರಿಯನ್ನು ನನ್ನ ಮುಕುಟದಲ್ಲಿ ಧರಿಸುವೆ" ಎಂದು ಪ್ರತಿಷ್ಣೆ ಮಾಡಿದನು.

ಮಕ್ಕಳೇ ನೀವೆಲ್ಲಾ ನೋಡಿದ್ದೀರಲ್ಲಾ ಸದಾ ಕೃಷ್ಣನ ಶಿರದಲ್ಲಿ ನವಿಲುಗರಿ ರಾರಾಜಿಸುತ್ತದೆ.

ಚಿತ್ರಕಥೆ

# ತಿರುಪ್ಪಾಣೆ ಆಳ್ವಾರ್

ಕಥೆ : ತೆಲುಗು ಮೂಲ : ಶ್ರೀನಿವಾಸದೀಕ್ಷಿತರು
ಅನುವಾದ : ಶ್ರೀಮತಿ
ಚಿತ್ರಗಳು : ಕೆ. ತುಳಸೀ ಪ್ರಸಾದ್




ಹಾದಿ ಬದಿಯಲ್ಲಿದ್ದ ಕಲ್ಲುಗಳನ್ನು ತೆಗೆದುಕೊಂಡು ತಿರುಪ್ಪಾಣಿಯ ಮೇಲೆ ಎಸೆದಿದ್ದಾನೆ. ಮುನಿ ಮುಖಕ್ಕೆ ತಗಲಿ ರಕ್ತವು ಧಾರಾಕಾರವಾಗಿ
13 ಸುರಿದಿದೆ. ತಿರುಪ್ಪಾಣಿ ಎಚ್ಚರಗೊಂಡು...
14 ಅಯ್ಯಾ! ನನ್ನ ಅಪರಾಧವನ್ನು ಕ್ಷಮಿಸಬೇಕು. ದೂರ ಹೊರಟು ಹೋಗುತ್ತೇನೆ ರಂಗಾ...
15 ಒಂದು ಮಾತು ಆಡದೇ ಎದ್ದು ಹೊರಟು ಹೋಗಿದ್ದಾನೆ.
ರಕ್ತವನ್ನು ನೋಡುತ್ತಲೇ ಮುನಿಯಲ್ಲಿ ಅನುಕಂಪ ಉಂಟಾಯಿತು. ಆ ದಿನ ರಾತ್ರಿ ಮುನಿ ಕನಸ್ಸಿನಲ್ಲಿ ರಂಗನಾಥಸ್ವಾಮಿ ಕಾಣಿಸಿ ತಿರುಪ್ಪಾಣಿಯನ್ನು ನಿನ್ನ ಭುಜದ ಮೇಲೇರಿಸಿಕೊಂಡು ಗುಡಿಗೆ ಕರೆದು ಕೊಂಡು ಬಾ. 16
ಮರುದಿನ ಮುನಿ ಕಾವೇರಿ ನದಿಯಲ್ಲಿ ಸ್ನಾನ ಮಾಡಿಕೊಂಡು ತಿರುಪ್ಪಾಣಿಯನ್ನು ತನ್ನ ಭುಜದ ಮೇಲೇರಿಸಿ ಕೊಂಡು ಗುಡಿಗೆ ಕರೆತಂದಿದ್ದಾನೆ ಸಾರಂಗ ಮುನಿ 17
18 “ನನ್ನನ್ನು ಕೆಳಗಿಳಿಸಿ ಸ್ವಾಮಿ ! ಅಪಚಾರವಾಯ್ತು ಅಪಚಾರವಾಯ್ತು”
“ಇದು ನನ್ನ ಪುಣ್ಯ ತಿರುಪ್ಪಾಣಿ’ 19
20 ತಿರುಪ್ಪಾಣಿಯನ್ನು ಎತ್ತಿಕೊಂಡು ಸಾರಂಗಮುನಿ ಗುಡಿಯ ಸುತ್ತೂ ಮೂರು ಪ್ರದಕ್ಷಿಣೆಗಳನ್ನು ಮಾಡಿದರು. ಶಯನ ಭಂಗಿಯಲ್ಲಿರುವ ಶ್ರೀರಂಗನಾಥಸ್ವಾಮಿಯ ಮಂಟಪಕ್ಕೆ ಬಂದ ತಿರುಪ್ಪಾಣಿ...
21 ಶ್ರೀರಂಗನಾಥ! ನನಗೆ ನೇರವಾಗಿ ದರ್ಶನ ಭಾಗ್ಯವನ್ನು ನೀಡಿದೆಯಾ! ಧನ್ಯನಾದೆ ರಂಗಾ
22 “ ತಿರುಪ್ಪಾಣಿ! ನೀನು ಆಳ್ವಾರನೇ! ಆಳ್ವಾರನೇ”
ತಿರುಪ್ಪಾಣಿ ಆನಂದ ಭಾಷ್ಪವನ್ನು ಸುರಿಸುತ್ತಾ ಅಮಲನಾದಿಪಿರಾನ್ ಎಂಬ ದಿವ್ಯ ಪ್ರಬಂಧವನ್ನು ಗಾಯನ ಮಾಡಿದ್ದಾರೆ. 23
24 “ನಿನ್ನ ವಾಹನವಾಗಿ ನಾನು ಧನ್ಯನಾದೆನು”
25 ಶ್ರೀರಂಗ ರಂಗ
27 “ಮುನಿವಾಹನನು ತಿರುಪ್ಪಾಣಿ”
28 “ಯೋಗಿವಾಹನನು ಆಳ್ವಾರ್”
25 ಭಕ್ತರೆಲ್ಲರೂ ಮುಕ್ತ ಕಂಠದಿಂದ ಹೇಳಿದ್ದಾರೆ.
ಲೋಕಾಃ ಸಮಸ್ತಾಃ ಸುಖಿನೋ ಭವಂತು!
ಸಮಾಪ್ತಿ

## ಕ್ವಿಜ್

# ರಸಪ್ರಶ್ನೆ

ಅ) ದೀಪಾವಳಿ ಹಬ್ಬ ಯಾವ ದಿನದಂದು ಪ್ರಾರಂಭವಾಗುತ್ತದೆ?
1. ಅಶ್ವೀಜ ತ್ರಯೋದಶಿ  2. ಕಾರ್ತೀಕ ಪಾಡ್ಯಮಿ
3. ಕಾರ್ತೀಕ ಪೌರ್ಣಮಿ  4. ಅಶ್ವೀಜ ಅಮಾವಾಸ್ಯೆ

ಆ) ನರಕಾಸುರನನ್ನು ಕೊಲ್ಲುವುದಕ್ಕೆ ಶ್ರೀಕೃಷ್ಣನಿಗೆ ಸಹಕರಿಸಿದ್ದು ಯಾರು?
1.ರುಕ್ಮಿಣಿ  2ರುಗ್ಮೀ
3.ಸತ್ಯಭಾಮೆ  4.ಭೀಮ

ಇ) ದೀಪಾವಳಿ ತ್ರಯೋದಶಿಯನ್ನು ಯಾವ ಮತ್ತೊಂದು ಹೆಸರಿನಿಂದ ಕರೆಯುತ್ತಾರೆ?
1. ಜಲಪೂರ್ಣ ತ್ರಯೋದಶಿ  2. ದೀಪಾವಳಿ ಅಮಾವಾಸ್ಯೆ
3. ಬಲಿಪಾಡ್ಯಮಿ  4. ಕಾರ್ತಿಕ ಹುಣ್ಣಿಮೆ

ಈ) ಕಾರ್ತೀಕಪಾಡ್ಯಮಿಯನ್ನು ಯಾವ ಚಕ್ರವರ್ತಿಯ ಹೆಸರಿನಲ್ಲಿ ಆಚರಿಸುತ್ತೇವೆ?
1. ಪ್ರಹ್ಲಾದ  2. ಬಲಿ
3. ಧರ್ಮರಾಜ  4. ಧ್ರುವ


ಉ) ಭಗವಂತನು ತನ್ನ ಯಾವ ಅವತಾರದಲ್ಲಿ ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ತಳ್ಳಿದ?
1.ರಾಮ  2. ಕೃಷ್ಣ
3.ವಾಮನ  4. ನರಸಿಂಹ

ಊ) ಬಲಿಚಕ್ರವರ್ತಿ ಯಾರ ಮೊಮ್ಮಗ ?
1. ಭೀಮ  2. ಪರಶುರಾಮ
3. ಪ್ರಹ್ಲಾದ  4.ಉತ್ಥಾನ ಪಾದ

ಋ) ಬಲಿಚಕ್ರವರ್ತಿಯ ಪತ್ನಿಯ ಹೆಸರೇನು?
1. ತಾರಾವಳಿ  2. ಮುಕ್ತಾವಳಿ
3. ವಿಂಧ್ಯಾವಳಿ  4. ರತ್ನಾವಳಿ

**ಉತ್ತರಗಳು:** ಅ) 1 ಆ) 3 ಇ) 1 ಈ) 2 ಉ) 3 ಊ) 3 ಋ) 3

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



ಮೇಲಿರುವ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...

## ನಿಮಗಿದು ಗೊತ್ತಾ ಮಕ್ಕಳೇ ?

1. ತಿರುಮಲೆಯಲ್ಲಿ ನಡೆಯುವ ಪೂಜಾ ವಿಧಾನ ಯಾವುದು?
2. ವರಾಹಸ್ವಾಮಿ ವೆಂಕಟೇಶ್ವರನಿಗೆ ಎಷ್ಟು ಅಡಿ ಸ್ಥಳವನ್ನು ನೀಡಿದರು?
3. ಪದ್ಮಾವತಿದೇವಿಯ ಸಹೋದರನ ಹೆಸರೇನು?
4. ಕುಬೇರನ ಬಳಿ ತನ್ನ ವಿವಾಹ ಖರ್ಚಿಗಾಗಿ ಶ್ರೀನಿವಾಸನು ಎಷ್ಟು ಸಾಲವನ್ನು ಪಡೆದನು?
5. ಶ್ರೀನಿವಾಸನು ಎಷ್ಟು ಕಾಲದವರೆಗೆ ಬಡ್ಡಿಯನ್ನು ಕಟ್ಟುತ್ತೇನೆಂದು ಪತ್ರವನ್ನು ಬರೆದು ಕೊಟ್ಟನು?
6. ತಿರುಮಲೆ ಸ್ವಾಮಿಯವರ ಆಲಯದ ರಾಜಗೋಪುರದ ಮೇಲಿರುವ ಚಿನ್ನದ ಕಲಶಗಳ ಸಂಖ್ಯೆಯೆಷ್ಟು?
7. ತಿರುಮಲೆ ಸ್ವಾಮಿಯವರಿಗೆ "ತೋಮಾಲೆ ಸೇವೆ" ದಿನಕ್ಕೆ ಎಷ್ಟು ಬಾರಿ ನಡೆಯುತ್ತದೆ?

1. ವೈಖಾನಸ ಆಗಮ
2. 100 ಅಡಿ
3. ವಸುದಾನನು
4. 14ಲಕ್ಷ ರಾಮಮುದ್ರಿಕೆಗಳು
5. ಕಲಿಯುಗಾಂತದವರೆಗೂ
6. ಏಳು
7. ಎರಡು ಬಾರಿ

## ಮಕ್ಕಳೇ ಇದನ್ನು ಹೊಂದಿಸಿ ಬರೆಯಿರಿ :

| | |
|---|---|
| 1. ತಿರುಪತಿ | ಅ) ಶ್ರೀ ವೇದನಾರಾಯಣ ಸ್ವಾಮಿ |
| 2. ವಾಯಲ್ಪಾಡು | ಆ) ಶ್ರೀ ಕಲ್ಯಾಣವೆಂಕಟೇಶ್ವರ ಸ್ವಾಮಿ |
| 3. ನಾರಾಯಣವನಂ | ಇ) ಶ್ರೀ ವೇಣುಗೋಪಾಲ ಸ್ವಾಮಿ |
| 4. ನಾಗಲಾಪುರಂ | ಈ) ಶ್ರೀ ಕೋದಂಡರಾಮ ಸ್ವಾಮಿ |
| 5. ಕಾರ್ವೇಟಿನಗರಂ | ಉ) ಶ್ರೀ ಪಟ್ಟಾಭಿರಾಮಸ್ವಾಮಿ |

**ಉತ್ತರಗಳು : 1) ಈ 2) ಉ 3) ಆ 4) ಅ 5) ಇ**


## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

| | | | | |
|---|---|---|---|---|
| ಗೈ | ಕ | ಕೆ | ಏ | ಹು |
| ಅಂ | ಣ್ಣಿ | ನ್ನ | ಡಿ | ಗೆ |

ಉತ್ತರಗಳು:
ಅಂಗೈ ಹುಣ್ಣಿಗೆ ಕನ್ನಡಿ ಏಕೆ?



Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.



ತಿರುಚಾನೂರು
ಶ್ರೀ ಪದ್ಮಾವತಿ ಅಮ್ಮನವರ
ಲಕ್ಷಕುಂಕುಮಾರ್ಚನೆ
(29-11-2021)

SAPTHAGIRI (KANNADA) ILLUSTRATED MONTHLY
Published by Tirumala Tirupati Devasthanams
Printing on 25-10-2021

# ತಿರುಮಲೆ ಸ್ವಾಮಿಯವರ ಆಲಯದಲ್ಲಿ "ದೀಪಾವಳಿ"
# (04-11-2021)

